


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮಾರ್ಚ್ 16 ಗುರುವಾರ 2023
ಸಂಪುಟ: 43 | ಸಂಚಿಕೆ: 326 | ಪುಟಗಳು: 10
ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com
₹4



ಚುನಾವಣಾ ವೆಚ್ಚದ ಮೇಲೆ ಕಣ್ಗಾವಲು ತಂಡ ತೀವ್ರ ನಿಗಾ

● ಮೈಸೂರು ಜಿಲ್ಲೆಯ 50 ಚೆಕ್‌ಪೋಸ್ಟ್‌ಗಳಲ್ಲಿ ವಾಹನ ತಪಾಸಣೆ ● ಹಣ, ಮದ್ಯ, ಮಾರಕಾಸ್ತ್ರಗಳ ರವಾನೆ ಮೇಲೆ ಕಟ್ಟೆಚ್ಚರ ● ಪೊಲೀಸ್, ಕಂದಾಯ, ಅರಣ್ಯ, ಸೆಕ್ಟರ್ ಅಧಿಕಾರಿಗಳು, ಫ್ಲೈಯಿಂಗ್‌ಸ್ಕ್ವಾಡ್ ಸಿಬ್ಬಂದಿಗಳೊಂದಿಗೆ ಮೈಸೂರು ಡಿಸಿ ಸಂವಾದ ● ಮುಕ್ತ, ನ್ಯಾಯಸಮ್ಮತ ಮತದಾನಕ್ಕೆ ಅವಕಾಶ ಕಲ್ಪಿಸಿ, ಅಕ್ರಮ ಚಟುವಟಿಕೆ ಮೇಲೆ ಕಣ್ಗಾವಲಿರಿಸುವಂತೆ ಅಧಿಕಾರಿಗಳಿಗೆ ಡಾ.ಕೆ.ವಿ.ರಾಜೇಂದ್ರ ಸೂಚನೆ

ಮೈಸೂರು, ಮಾ. 15(ಆರ್‌ಕೆ)– ಮುಂಬರುವ ವಿಧಾನಸಭೆ ಸಾರ್ವತ್ರಿಕ ಚುನಾವಣೆ ವೆಚ್ಚದ ಮೇಲೆ ತೀವ್ರ ನಿಗಾ ಇಡಲು ಸ್ಥಿರ ಕಣ್ಗಾವಲು ತಂಡಗಳನ್ನು ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ. ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಸಭಾಂಗಣದಲ್ಲಿ ಇಂದು ಚುನಾವಣೆ ಸಿದ್ಧತೆ ಕುರಿತಂತೆ ಪೂರ್ವಭಾವಿ ಸಭೆ ನಡೆಸಿ ಸೆಕ್ಟರ್ ಅಧಿಕಾರಿಗಳು, ಪೊಲೀಸ್, ಅರಣ್ಯ, ಕಂದಾಯ, ಜಿಎಸ್‌ಟಿ, ವಾಣಿಜ್ಯ ತೆರಿಗೆ, ಅಬಕಾರಿ, ಆದಾಯ ತೆರಿಗೆ ಅಧಿಕಾರಿಗಳು, ಫ್ಲೈಯಿಂಗ್ ಸ್ಕ್ವಾಡ್ ಸಿಬ್ಬಂದಿಗಳೊಂದಿಗೆ ಸಂವಾದ ನಡೆಸಿದರು.

ಚುನಾವಣಾ ಅಕ್ರಮ ತಡೆಗಟ್ಟಲು ಸ್ಥಿರ ಕಣ್ಗಾವಲು ತಂಡ (Static Surveillance Team) ರಚಿಸಲಾಗಿದ್ದು, ಅದರಲ್ಲಿ ಪೊಲೀಸ್, ವಾಣಿಜ್ಯ ತೆರಿಗೆ, ಆದಾಯ ತೆರಿಗೆ, ಅರಣ್ಯ ಹಾಗೂ ಅಬಕಾರಿಗಳು ಇದ್ದಾರೆ. ಎಲ್ಲಾ ತಾಲೂಕು, ಜಿಲ್ಲಾ ರಸ್ತೆಗಳ ಚೆಕ್‌ಪೋಸ್ಟ್ ಮತ್ತು ಮೈಸೂರು ನಗರ ಪ್ರವೇಶಿಸುವ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಚೆಕ್ ಪೋಸ್ಟ್‌ಗಳಿಗೆ ನಿಯೋಜಿಸಲಾಗಿದೆ ಎಂದ ಅವರು, ಹಣ, ಮದ್ಯ, ಗೃಹೋಪಯೋಗಿ ವಸ್ತು, ಉಡುಗೊರೆ, ಆಭರಣ, ಮಾರಕಾಸ್ತ್ರ ಹಾಗೂ ಇನ್ನಿತರ ವಸ್ತುಗಳನ್ನು ದಾಖಲಾತಿ ಇಲ್ಲದೆ ಅಕ್ರಮವಾಗಿ ಸಾಗಣೆ ಮಾಡುವುದರ ಬಗ್ಗೆ ಚೆಕ್‌ಪೋಸ್ಟ್‌ನಲ್ಲಿ ಕೆಲಸ ಮಾಡುವ ಸ್ಟ್ಯಾಟಿಕ್ ಸರ್ವೈಲನ್ಸ್ ಟೀಂ ಅಧಿಕಾರಿಗಳು ಪರಿಶೀಲಿಸಿ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.




ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಸಭಾಂಗಣದಲ್ಲಿ 2023ರ ವಿಧಾನಸಭೆ ಚುನಾವಣೆ ಸಿದ್ಧತೆ ಕುರಿತಂತೆ ಪೊಲೀಸ್, ಅರಣ್ಯ, ಕಂದಾಯ, ಜಿಎಸ್‌ಟಿ, ವಾಣಿಜ್ಯ ತೆರಿಗೆ, ಅಬಕಾರಿ, ಆದಾಯ ತೆರಿಗೆ ಅಧಿಕಾರಿಗಳು, ಫ್ಲೈಯಿಂಗ್ ಸ್ಕ್ವಾಡ್ ಸಿಬ್ಬಂದಿಗಳೊಂದಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಂವಾದ ನಡೆಸಿದರು.

ಕಾಲ ಕಾಲಕ್ಕೆ ಭಾರತ ಚುನಾವಣಾ ಆಯೋಗವು ಹೊರಡಿಸುವ ಮಾರ್ಗಸೂಚಿಯನ್ವಯ ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಿ ಎಲ್ಲಿಯೂ ಲೋಪವಾಗದಂತೆ ಎಚ್ಚರ ವಹಿಸಬೇಕು. ಯಾವುದೇ ಸಬೂಬು ಹೇಳಿ ಕೆಲಸದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಬಾರದು ಎಂದ ಅವರು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಚುನಾವಣಾ ಮಾದರಿ ನೀತಿ ಸಂಹಿತೆಯ ನೋಡಲ್ ಅಧಿಕಾರಿಯಾಗಿರುತ್ತಾರೆ. ಯಾವುದೇ ಲೋಪವಾಗದಂತೆ ಮುಕ್ತವಾಗಿ ಚುನಾವಣೆ ನಡೆಯಲು ಪ್ರತಿಯೊಬ್ಬರೂ ಸಹಕರಿಸಬೇಕು ಎಂದರು.

FST, VST, PVT, AEO, AT, MCC, MCMC ಸೇರಿದಂತೆ ವಿವಿಧ ತಂಡಗಳಿಗೆ ಅವರ ಕಾರ್ಯಭಾರ, ಜವಾಬ್ದಾರಿ ಹಾಗೂ ಕರ್ತವ್ಯದ ಬಗ್ಗೆ ತರಬೇತಿ ನೀಡಲಾಗುವುದು. 252 ಸೆಕ್ಟರ್ ಅಧಿಕಾರಿಗಳನ್ನು ಸೆಕ್ಟರ್ ಮ್ಯಾಜಿಸ್ಟ್ರೇಟರ್‌ಗಳನ್ನಾಗಿ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ. ನಿರ್ಭೀತಿಯಿಂದ ಮತದಾನ ಮಾಡಲು ವಲ್ನರಬಲ್ ಮತ್ತು ಕ್ರಿಟಿಕಲ್ ಮತಗಳ ವಿಶ್ಲೇಷಣೆ ಮಾಡಬೇಕು. ▶ 8ನೇ ಪುಟಕ್ಕೆ





ಬೇಸಿಗೆಗೆ ಕರೆಂಟ್ ಕಟ್ ಇಲ್ಲ

ರಾಜ್ಯ ಸರ್ಕಾರ ತೀರ್ಮಾನ: ಜನತೆಗೆ ತುಸು ಸಮಾಧಾನ



ಬೆಂಗಳೂರು, ಮಾ.15(ಕೆಎಂಶಿ)–ಪ್ರಸಕ್ತ ಬೇಸಿಗೆಯಲ್ಲಿ ವಿದ್ಯುತ್ ಕಡಿತ ಮಾಡದಿರಲು ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ.

ವಿಧಾನಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಸರ್ಕಾರ ಇಂತಹ ನಿರ್ಧಾರ ಕೈಗೊಂಡಿರುವುದಲ್ಲದೆ, ವಿದ್ಯುತ್ ಕಡಿತ ಇಲ್ಲವೇ ಲೋಡ್ ಶೆಡ್ಡಿಂಗ್ ಮಾಡುವುದಿಲ್ಲವೆಂದು ಸ್ಪಷ್ಟಪಡಿಸಿದೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ, ವಿದ್ಯಾರ್ಥಿಗಳು ಮತ್ತು ರೈತರ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ಮುಂದಿನ ಮೂರು ತಿಂಗಳ ಅವಧಿಗೆ ಯಾವುದೇ ರೀತಿಯ ವಿದ್ಯುತ್ ಕಡಿತ ಮಾಡದಿರಲು ಎಲ್ಲಾ ಎಸ್ಕಾಂಗಳು ನಿರ್ಧರಿಸಿವೆ ಎಂದರು.

ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರು ಇಂದು ಸಭೆ ನಡೆಸಿ, ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾಗಿದ್ದು, ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳು ಈಗಾಗಲೇ ಆರಂಭಗೊಂಡಿವೆ. ಅಲ್ಲದೇ ರೈತರಿಗೂ ಕೂಡ ಹೆಚ್ಚಿನ ವಿದ್ಯುತ್ ಪೂರೈಸುವ ಜವಾಬ್ದಾರಿ ಎಸ್ಕಾಂಗಳ ಮೇಲಿದೆ. ಬೇಸಿಗೆಯಲ್ಲಿ ತಡೆರಹಿತ ವಿದ್ಯುತ್ ಪೂರೈಸಲು ರೈತ ಪ್ರತಿನಿಧಿಗಳು ಇತ್ತೀಚೆಗೆ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದ್ದರು. ಇದನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಕೈಗೊಂಡಿದ್ದೇವೆ. ಈ ನಿಟ್ಟಿನಲ್ಲಿ ಮುಂದಿನ ಮೂರು ತಿಂಗಳ ಅವಧಿಗೆ ಬೇಕಾಗುವ ವಿದ್ಯುತ್ ಬೇಡಿಕೆ ಕುರಿತು ವೈಜ್ಞಾನಿಕವಾಗಿ ಅಧ್ಯಯನ ನಡೆಸಿರುವ ಎಲ್ಲಾ ಎಸ್ಕಾಂಗಳು ಅದಕ್ಕೆ ಬೇಕಾಗಿರುವ ವಿದ್ಯುತ್ ಖರೀದಿ ಮಾಡಿ ಗ್ರಾಹಕರಿಗೆ ಪೂರೈಸಲು ನಿರ್ಧರಿಸಿವೆ.

ಈ ಮೂರು ತಿಂಗಳ ಅವಧಿಯಲ್ಲಿ ವಿದ್ಯುತ್ ಬಳಕೆ ಹೆಚ್ಚಾಗಲಿದ್ದು, ವಿದ್ಯುತ್ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಕ್ರಮ ವಹಿಸಲು ಎಲ್ಲಾ ಎಸ್ಕಾಂಗಳು ನಿರ್ಧಾರ ಕೈಗೊಂಡಿವೆ. ಬೇಸಿಗೆ ಕಾಲದಲ್ಲಿ ವಿದ್ಯುತ್ ಪೂರೈಕೆಯಲ್ಲಿ ಯಾವುದೇ ಅಡಚಣೆ ಉಂಟಾಗದಂತೆ ಕ್ರಮವಹಿಸಲು ಇಂಧನ ಇಲಾಖೆಯು ಕೆಪಿಟಿಸಿಎಲ್ ಮತ್ತು ಎಲ್ಲಾ ಎಸ್ಕಾಂಗಳಿಗೆ ನಿರ್ದೇಶನ ನೀಡಿದೆ.

ಬೇಸಿಗೆ ಕಾಲದಲ್ಲಿ ವಿದ್ಯುತ್ ಖರೀದಿಗೆ ಬೇಕಾಗುವ ಹಣಕಾಸಿನ ವ್ಯವಸ್ಥೆಯನ್ನು ಸಿದ್ಧತೆ ಮಾಡಿಕೊಳ್ಳುವಂತೆ ಇಂಧನ ಇಲಾಖೆ ಎಲ್ಲಾ ಎಸ್ಕಾಂಗಳಿಗೆ ಈಗಾಗಲೇ ಸೂಚನೆ ನೀಡಿದೆ. ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಸಲು ಸಿದ್ಧತೆ ಮಾಡಿಕೊಂಡಿದೆ ಎಂದು ಬೆಸ್ಕಾಂ ಎಂಡಿ ತಿಳಿಸಿದರು.

ಎಲ್ಲಾ ಎಸ್ಕಾಂಗಳ ನೌಕರರ ವೇತನ ಶೇ.20ರಷ್ಟು ಹೆಚ್ಚಳ

2022ರಿಂದ ಪೂರ್ವಾನ್ವಯ



ಬೆಂಗಳೂರು, ಮಾ.15(ಕೆಎಂಶಿ)–ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಎಲ್ಲಾ ಎಸ್ಕಾಂಗಳ ನೌಕರರ ವೇತನ ಹೆಚ್ಚಳ ಮಾಡಲಾಗಿದೆ ಎಂದು ಇಂಧನ ಸಚಿವ ಸುನೀಲ್ ಕುಮಾರ್ ತಿಳಿಸಿದ್ದಾರೆ. ವೇತನ ಪರಿಷ್ಕರಣೆಗೆ ಪಟ್ಟು ಹಿಡಿದು, ಗುರುವಾರದಿಂದ ಎಸ್ಕಾಂ ಸಿಬ್ಬಂದಿ ಅನಿರ್ದಿಷ್ಟ ಅವಧಿಗೆ ಹೋರಾಟಕ್ಕೆ ಸಿದ್ಧರಾಗಿದ್ದ ಬೆನ್ನಲ್ಲೇ ಸರ್ಕಾರ ಈ ತೀರ್ಮಾನ ಕೈಗೊಂಡಿದೆ. ಸಿಬ್ಬಂದಿಗೆ 2022ರಿಂದ ಪೂರ್ವಾನ್ವಯವಾಗುವಂತೆ ಶೇ.20ರಷ್ಟು ವೇತನ ಹೆಚ್ಚಳ ಮಾಡಲು ಆದೇಶಿಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನೌಕರರು ಗುರುವಾರ ಇಡೀ ರಾಜ್ಯದ ಎಲ್ಲಾ ವಿದ್ಯುತ್ ಉತ್ಪಾದನಾ ಘಟಕದಲ್ಲಿ ಕೆಲಸ ಸ್ಥಗಿತ ಮಾಡಿ ಮುಷ್ಕರ ನಡೆಸಲು ನಿರ್ಧರಿಸಿದ್ದರು. ಲೈನ್‌ಮ್ಯಾನ್‌ಗಳಿಂದ ಹಿಡಿದು ಎಂಜಿನಿಯರ್‌ಗಳವರೆಗೆ ಸುಮಾರು 60 ಸಾವಿರ ನೌಕರರು ಮುಷ್ಕರದಲ್ಲಿ ಭಾಗಿಯಾಗಲಿದ್ದರು. ಶೇ.40 ವೇತನ ಹೆಚ್ಚಳ ಆಗಬೇಕು. 2022ರ ಏಪ್ರಿಲ್ 1 ರಿಂದ ಬಾಕಿ ವೇತನ ಬಿಡುಗಡೆ ಮಾಡಬೇಕು. ತಕ್ಷಣವೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ವಿದ್ಯುತ್ ಕಂಪನಿಗಳ ಖಾಸಗೀಕರಣ ಉದ್ದೇಶದ ಪ್ರಸ್ತಾವಿತ ಮಸೂದೆಯನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದ್ದರು.

ಒಂದು ದಿನ ಕೆಪಿಟಿಸಿಎಲ್ ನೌಕರರು ಕೆಲಸ ನಿಲ್ಲಿಸಿದರೆ 1 ಸಾವಿರ ಕೋಟಿ ರೂ. ನಷ್ಟ ಸಂಭವಿಸುವ ಸಾಧ್ಯತೆಯಿದೆ. ಒಂದು ದಿನ ವಿದ್ಯುತ್ ಉತ್ಪಾದನೆ ನಿಂತರೆ ಒಂದು ವಾರ ರಾಜ್ಯಕ್ಕೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತದೆ. ಈ ಅವ್ಯವಸ್ಥೆ ಸರಿಪಡಿಸಲು 10 ರಿಂದ 15 ದಿನಗಳು ಬೇಕಾಗುತ್ತದೆ.

ಟೋಲ್‌ನಿಂದ ಪಾರಾಗಲು ಸರ್ವೀಸ್ ರಸ್ತೆಗಿಳಿಯುತ್ತಿರುವ ವಾಹನಗಳು!

■ ಕಣಿಮಿಣಿಕೆ ಪ್ಲಾಜಾ ಬಳಿ ಸರ್ವೀಸ್ ರೋಡ್‌ನಲ್ಲಿ ಮೈಸೂರು ಕಡೆಗೆ ಬರುತ್ತಿರುವ ವಾಹನಗಳು ■ ಇದರಿಂದ ದಿನಕ್ಕೆ ಲಕ್ಷಾಂತರ ರೂ. ಆದಾಯ ಖೋತಾ, ಎನ್‌ಹೆಚ್‌ಎಐಗೆ ಮತ್ತೊಂದು ತಲೆನೋವು



ಮೈಸೂರು, ಮಾ.15(ಆರ್‌ಕೆ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ದಶಪಥ ಹೆದ್ದಾರಿಯಲ್ಲಿ ಟೋಲ್ ಸಂಗ್ರಹ ವಿರೋಧಿಸಿ ಒಂದೆಡೆ ಪ್ರತಿಭಟನೆ ಎದುರಿಸುತ್ತಿದ್ದ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಇದೀಗ ಮತ್ತೊಂದು ಹೊಸ ತಲೆನೋವು ಆರಂಭವಾಗಿದೆ.

ಬೆಂಗಳೂರು–ನಿಡಘಟ್ಟ ನಡುವೆ ಕಣಿಮಿಣಿಕೆ ಬಳಿ ಸ್ಥಾಪಿಸಿರುವ ಟೋಲ್ ಪ್ಲಾಜಾದಲ್ಲಿ ಟೋಲ್ ಪಾವತಿಯಿಂದ ಪಾರಾಗಲು ವಾಹನ ಸವಾರರು, ಅದಕ್ಕಿಂತ ಮುಂಚಿತವಾಗಿ ಕ್ರೈಸ್ಟ್ ಯೂನಿವರ್ಸಿಟಿ ಬಳಿ ಎಡಬದಿ ಇರುವ ಬ್ಯಾರಿಕೇಡ್ ತೆರವುಗೊಳಿಸಿ ಸರ್ವೀಸ್ ರಸ್ತೆಯಲ್ಲಿ ಮೈಸೂರು ಕಡೆ ಬರುತ್ತಿದ್ದಾರೆ. ನಿನ್ನೆ (ಮಾ.14)ಯಿಂದ ಈ ಪ್ಲಾಜಾದಲ್ಲಿ ಟೋಲ್ ವಸೂಲಿ ಪ್ರಕ್ರಿಯೆ ಆರಂಭವಾದ ಬೆನ್ನಲ್ಲೇ ಇಂದು ಮುಂಜಾನೆ ಅಲ್ಲಿ ತಾತ್ಕಾಲಿಕವಾಗಿ ಅಳವಡಿಸಿದ್ದ ಕಬ್ಬಿಣದ ಬ್ಯಾರಿಕೇಡ್ ಅನ್ನು ತೆರವುಗೊಳಿಸಿದ್ದು, ಬೆಂಗಳೂರಿನಿಂದ ಬರುವ ಬಹುತೇಕ ವಾಹನಗಳು ಫ್ಲೈ ಓವರ್‌ನಿಂದ ಸರ್ವೀಸ್ ರೋಡ್ ಪ್ರವೇಶಿಸಿ ಮೈಸೂರು ಕಡೆಗೆ ಬರುತ್ತಿವೆ ಎಂದು ಎನ್‌ಹೆಚ್‌ಎಐ ಅಧಿಕಾರಿಗಳು ತಿಳಿಸಿದ್ದಾರೆ. ಅತೀ ವೇಗವಾಗಿ ಬರುವ ಕಾರುಗಳು ಮಾತ್ರ ತಕ್ಷಣ ಸರ್ವೀಸ್ ರಸ್ತೆಗೆ ತಿರುಗಲಾರದೇ ಮೇನ್ ಕಾರಿಡಾರ್‌ನಲ್ಲೇ ಸಾಗಿ ಟೋಲ್ ಪ್ಲಾಜಾ ಮೂಲಕ ಶುಲ್ಕ ಪಾವತಿಸಿ ಮುಂದೆ ಸಾಗುತ್ತಿವೆಯೇ ಹೊರತು, ಉಳಿದ ಬಹುತೇಕ ವಾಹನಗಳು ಟೋಲ್ ತಪ್ಪಿಸಿಕೊಂಡು ಸರ್ವೀಸ್ ರಸ್ತೆಯಲ್ಲಿ ಸಂಚರಿಸುತ್ತಿರುವುದರಿಂದ ಕಣಿಮಿಣಿಕೆ ಬಳಿಯ ಪ್ಲಾಜಾದಲ್ಲಿ ಟೋಲ್ ಸಂಗ್ರಹಕ್ಕೆ ಕತ್ತರಿ ಬಿದ್ದಂತಾಗಿದೆ. ಕ್ರೈಸ್ತ ವಿಶ್ವವಿದ್ಯಾನಿಲಯದ ಬಳಿ ಜಮೀನಿನ ಮಾಲೀಕರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದ ಪ್ರಕರಣ ಬಾಕಿ ಇದ್ದ ಕಾರಣ ಆ ಭಾಗದಲ್ಲಿ ಸುಮಾರು 50 ಮೀಟರ್ ಉದ್ದದವರೆಗೆ ಸರ್ವೀಸ್ ರಸ್ತೆ ಕಾಮಗಾರಿ ▶ 8ನೇ ಪುಟಕ್ಕೆ




5, 8ನೇ ತರಗತಿಗೆ ಬೋರ್ಡ್ ಪರೀಕ್ಷೆ ನಡೆಸಲು ಹೈಕೋರ್ಟ್ ಅನುಮತಿ

ನವದೆಹಲಿ: 5 ಮತ್ತು 8ನೇ ತರಗತಿ ಬೋರ್ಡ್ ಪರೀಕ್ಷೆ ನಡೆಸಲು ಅನುಮತಿ ನೀಡಿ ಕರ್ನಾಟಕ ಹೈಕೋರ್ಟ್ ಬುಧವಾರ ತೀರ್ಪು ನೀಡಿದೆ. ಬೋರ್ಡ್ ಪರೀಕ್ಷೆ ನಡೆಸಲು ಶಿಕ್ಷಣ ಕಾಯ್ದೆಯಡಿ ನಿರ್ಬಂಧವಿಲ್ಲ ಎಂದಿರುವ ಹೈಕೋರ್ಟ್ ವಿಭಾಗೀಯ ಪೀಠ, ಈ ಹಿಂದೆ ಏಕಸದಸ್ಯ ಪೀಠ ನೀಡಿದ್ದ ಆದೇಶಕ್ಕೆ ತಡೆ ನೀಡಿದೆ. ಮಾರ್ಚ್ 27ರಿಂದ ಪರೀಕ್ಷೆ ನಡೆಸುವಂತೆ ಸರ್ಕಾರಕ್ಕೆ ವಿಭಾಗೀಯ ಪೀಠ ಸೂಚನೆ ನೀಡಿದೆ. ಪಠ್ಯಕ್ರಮದಲ್ಲಿ ಉಲ್ಲೇಖಿಸಿರುವುದನ್ನು ಬಿಟ್ಟು ಬೇರೆ ಪ್ರಶ್ನೆಗಳನ್ನು ಕೇಳುವಂತಿಲ್ಲ, ಯಾರನ್ನೂ ಅನುತ್ತೀರ್ಣಗೊಳಿಸುವಂತಿಲ್ಲ ಎಂದು ಪೀಠ ನಿರ್ದೇಶನ ನೀಡಿದೆ. ಜತೆಗೆ, ಪರೀಕ್ಷೆಯ ಫಲಿತಾಂಶವನ್ನು ಸಾರ್ವಜನಿಕವಾಗಿ ಪ್ರಕಟಿಸುವಂತಿಲ್ಲ. ಫಲಿತಾಂಶವನ್ನು ಶಾಲೆಗೆ ಮಾತ್ರವೇ ▶ 8ನೇ ಪುಟಕ್ಕೆ

ಈಗ ನಾನು ನಂಜನಗೂಡು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಲ್ಲ

ಧ್ರುವನಾರಾಯಣ್ ಪುತ್ರ ದರ್ಶನ್‌ಗೆ ನನ್ನ ಸಂಪೂರ್ಣ ಬೆಂಬಲವಿದೆ

● ನಂ.ಗೂಡು ಕಾಂಗ್ರೆಸ್ ಟಿಕೆಟ್ ಚರ್ಚೆಗೆ ಅಂತ್ಯ ಹಾಡಿದ ಡಾ.ಹೆಚ್.ಸಿ.ಮಹದೇವಪ್ಪ ● ಪುತ್ರ ಸುನೀಲ್ ಬೋಸ್‌ರೊಂದಿಗೆ ಧ್ರುವನಾರಾಯಣ್ ಮನೆಗೆ ಭೇಟಿ; ಕುಟುಂಬಕ್ಕೆ ಸಾಂತ್ವನ ● ನಂಜನಗೂಡಿನಿಂದ ದರ್ಶನ್ ಸ್ಪರ್ಧಿಸುವುದು ಸೂಕ್ತ ಎಂದು ನನಗೂ ಅನ್ನಿಸಿದೆ; ಗೆದ್ದು ತಂದೆಯ ಆಸೆ ಈಡೇರಿಸಲಿ, ಕುಟುಂಬವನ್ನು ನಿರ್ವಹಿಸಲಿ



ಮೈಸೂರು, ಮಾ.15–ನಂಜನಗೂಡು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಪ್ರಬಲ ಆಕಾಂಕ್ಷಿಯಾಗಿದ್ದ ಡಾ.ಹೆಚ್.ಸಿ.ಮಹದೇವಪ್ಪ, ಈಗ ಹಿಂದೆ ಸರಿದು, ದಿವಂಗತ ಆರ್.ಧ್ರುವನಾರಾಯಣ್ ಅವರ ಪುತ್ರ ದರ್ಶನ್‌ಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿದ್ದಾರೆ. ಬುಧವಾರ ಸಂಜೆ ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ಧ್ರುವನಾರಾಯಣ್ ಅವರ ನಿವಾಸಕ್ಕೆ ತಮ್ಮ ಪುತ್ರ ಸುನೀಲ್ ಬೋಸ್ ಅವರೊಂದಿಗೆ ಭೇಟಿ ನೀಡಿದ ಅವರು, ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಧ್ರುವನಾರಾಯಣ್ ಓರ್ವ ಕ್ರಿಯಾಶೀಲ ನಾಯಕ. ಆತ ತೀರಿಹೋದನಲ್ಲಾ, ನಮ್ಮಿಂದ ದೂರವಾದನಲ್ಲಾ ಎಂಬ ನೋವು ನನಗಿದೆ. ಅವರ ಮಗ ದರ್ಶನ್ ಕೂಡ ನನ್ನ ಮಗ ಸುನೀಲ್‌ನಂತೆಯೇ ಓರ್ವ ಮಗನಾಗಿದ್ದಾನೆ. ಅವನು ಬೆಳೆಯಲಿ ಎಂದು ಧ್ರುವ ನಿಧನರಾದ ದಿನದಂದೇ ನಿರ್ಧಾರ ಮಾಡಿದ್ದೆ. ಇಂದು ದರ್ಶನ್ ಮತ್ತು ಕುಟುಂಬದವರನ್ನು ಭೇಟಿ ಮಾಡಿ, ಸಾಂತ್ವನ ▶ 8ನೇ ಪುಟಕ್ಕೆ



ಧ್ರುವನಾರಾಯಣರಿಗೆ ಶ್ರದ್ಧಾಂಜಲಿ ಸಭೆ ಏರ್ಪಡಿಸುವ ಸಂಬಂಧ ಪೂರ್ವಭಾವಿ ಸಭೆ

ಧ್ರುವ ಪುತ್ರ ದರ್ಶನ್‌ಗೆ ನಂ.ಗೂಡು ಟಿಕೆಟ್ ನೀಡಲು ಬೆಂಬಲಿಗರ ಆಗ್ರಹ



ಮೈಸೂರು, ಮಾ.15(ಎಂಟಿವೈ)– ಇತ್ತೀಚೆಗಷ್ಟೆ ನಿಧನರಾದ ಮಾಜಿ ಸಂಸದ ಮತ್ತು ಕೆಪಿಸಿಸಿ ಕಾರ್ಯಾಧ್ಯಕ್ಷ ದಿ.ಆರ್.ಧ್ರುವನಾರಾಯಣ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವ ನಿಟ್ಟಿನಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಅವರ ನಿವಾಸದಲ್ಲಿ ಬುಧವಾರ ನಡೆದ ಪೂರ್ವಭಾವಿ ಸಭೆಯಲ್ಲಿ ನಂಜನಗೂಡು ಮೀಸಲು ಕ್ಷೇತ್ರದಿಂದ ಧ್ರುವನಾರಾಯಣ್ ಅವರ ಪುತ್ರ ದರ್ಶನ್ ಅವರಿಗೆ ಟಿಕೆಟ್ ನೀಡುವಂತೆ ಒಕ್ಕೊರಲಿನಿಂದ ಆಗ್ರಹಿಸಿದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ನೇತೃತ್ವದಲ್ಲಿ ರಾಮಕೃಷ್ಣನಗರದ ನಿವಾಸದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮೈಸೂರು, ಚಾಮರಾಜನಗರ ಜಿಲ್ಲೆಯ ವಿವಿಧ ಕ್ಷೇತ್ರಗಳಿಂದ ಆಗಮಿಸಿದ್ದ ಧ್ರುವನಾರಾಯಣ್ ಬೆಂಬಲಿಗರು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಧ್ರುವನಾರಾಯಣ್ ಅವರ ಪುತ್ರ ದರ್ಶನ್‌ಗೆ ಟಿಕೆಟ್ ನೀಡಬೇಕು. ಅವರು ನಿಧನರಾದ ದಿನವೇ ದರ್ಶನ್ ಅವರ ಹೆಸರು ಘೋಷಿಸಬೇಕಾಗಿತ್ತು. ಆದರೆ, ಇಷ್ಟು ತಡ ಯಾಕೆ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮಾಜಿ ಸಂಸದರಾಗಿದ್ದ ಆರ್.ಧ್ರುವನಾರಾಯಣ್ ನಿಧನದಿಂದ ಅಪಾರ ನಷ್ಟವಾಗಿದೆ. ವೈಯಕ್ತಿಕವಾಗಿ ನೋವಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಅತೀವ ದುಃಖವಾಗಿದೆ. ಅವರ ಅಕಾಲಿಕ ನೋವು ಭರಿಸಲು ಸಾಧ್ಯವಿಲ್ಲ. ಪಕ್ಷಕ್ಕೆ ಹಾಗೂ ಚಾಮರಾಜನಗರ ಜಿಲ್ಲೆಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಎರಡು ಬಾರಿ ಸಂಸದರಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ದೊಡ್ಡಮಟ್ಟದಲ್ಲಿ ಶ್ರದ್ಧಾಂಜಲಿ ಸಭೆ ಆಯೋಜಿಸುವ ಚಿಂತನೆ ಇದೆ. ಇನ್ನು ದರ್ಶನ್ ಅವರಿಗೆ ಟಿಕೆಟ್ ನೀಡುವ ಸಂಬಂಧ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ರಾಜ್ಯಮಟ್ಟದ ನಾಯಕರು ಪೂರಕವಾದ ನಿರ್ಣಯ ಕೈಗೊಳ್ಳಲಿದ್ದಾರೆ ಎಂದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಮುಖಂಡರೊಬ್ಬರು ಮಾತನಾಡುವಾಗ ಒಂದು ವೇಳೆ ದರ್ಶನ್ ಅವರಿಗೆ ಟಿಕೆಟ್ ಕೈತಪ್ಪಿದರೆ ಎನ್ನುತ್ತಿದ್ದಂತೆ ಆತನ ವಿರುದ್ಧ ಧ್ರುವನಾರಾಯಣ ಬೆಂಬಲಿಗರು ಕಿಡಿಕಾರಿದರಲ್ಲದೆ, ದರ್ಶನ್ ಅವರಿಗೆ ಟಿಕೆಟ್ ಮಿಸ್ ಆಗುವ ಮಾತೇ ಇಲ್ಲ. ಟಿಕೆಟ್ ಕೊಡಿಸಲೇಬೇಕು ಎಂದು ಪಟ್ಟು ಹಿಡಿದ ಬೆಂಬಲಿಗರು, ಧ್ರುವನಾರಾಯಣ ಅವರು ನಮ್ಮ ಸಮಾಜದ ಕಣ್ಣು. ಮಲ್ಲಿಕಾರ್ಜುನ ಖರ್ಗೆ ಬಳಿಕ ಆ ಸ್ಥಾನ ತುಂಬುವ ಸಾಮರ್ಥ್ಯ ಅವರಲ್ಲಿತ್ತು. ಅವರ ಸಾವಿಗೆ ನ್ಯಾಯ ಸಿಗಬೇಕಾದರೆ ದರ್ಶನ್ ಅವರಿಗೆ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ತಗಡೂರು ಬ್ಲಾಕ್ ಕಾಂಗ್ರೆಸ್, ವರುಣಾ ಬ್ಲಾಕ್ ಕಾಂಗ್ರೆಸ್ ಸದಸ್ಯರು ಭಾಗಿಯಾಗಿದ್ದರು. ಅಲ್ಲದೆ, ಶ್ರದ್ಧಾಂಜಲಿ ಸಭೆಯ ಬಗ್ಗೆಯೂ ಚರ್ಚಿಸಲಾಯಿತು. ರಾಜ್ಯಮಟ್ಟದ ನಾಯಕರನ್ನು ಸಭೆಗೆ ಆಹ್ವಾನಿಸಲು ನಿರ್ಧರಿಸಲಾಯಿತು.

ಮರಳಿ ಉದ್ಯೋಗ ನೀಡಲು ಒತ್ತಾಯ

ಮೈಸೂರು,ಮಾ.15(ಪಿಎಂ)–ಚರ್ಚ್ ಆಫ್ ಸೌತ್ ಇಂಡಿಯಾ–ಕರ್ನಾಟಕ ದಕ್ಷಿಣ ಧರ್ಮಪ್ರಾಂತ್ಯದ (ಸಿಎಸ್‌ಐ–ಕೆಎಸ್‌ಡಿ) ಬಿಷಪ್ ಅವರ ಕಾರ್ಯದರ್ಶಿಯಾಗಿದ್ದ ರೇಷ್ಮಾ ಸೋನ್ಸ್ ಅವರನ್ನು ಯಾವುದೇ ಕಾರಣ ನೀಡದೇ ಏಕಾಏಕಿ ಕೆಲಸದಿಂದ ತೆಗೆದು ಹಾಕಲಾಗಿದೆ ಎಂದು ಆರೋಪಿಸಿದ ಸಿಎಸ್‌ಐಟಿಎ ಬೆನೆಫಿಷರೀಸ್ ಅಸೋಸಿಯೇಷನ್, ರೇಷ್ಮಾ ಸೋನ್ಸ್ ಅವರಿಗೆ ನ್ಯಾಯ ಒದಗಿಸಬೇಕೆಂದು ಬಿಷಪ್ ಹಾಗೂ ಧರ್ಮಪ್ರಾಂತ್ಯದ ಪದಾಧಿಕಾರಿಗಳನ್ನು ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿಎಸ್‌ಐಟಿಎ ಬೆನೆಫಿಷರೀಸ್ ಅಸೋಸಿಯೇಷನ್ ಕಾರ್ಯದರ್ಶಿ ಎಸ್.ಪ್ರೇಮ್‌ಕುಮಾರ್, ಬಿಷಪ್ ಅವರ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದ ರೇಷ್ಮಾ ಸೋನ್ಸ್ ಅವರನ್ನು ಯಾವುದೇ ಕಾರಣ ಕೊಡದೇ ಕೆಲಸದಿಂದ ತೆಗೆಯಲಾಗಿದೆ. ಅಲ್ಲದೆ, ಅವರಿಗೆ ಲೈಂಗಿಕ ಮತ್ತು ಮಾನಸಿಕ ಕಿರುಕುಳ ಸಹ ನೀಡಲಾಗಿದೆ. ಈ ಸಂಬಂಧ ಮಂಗಳೂರಲ್ಲಿ ಎಫ್‌ಐಆರ್ ಕೂಡ ದಾಖಲಾಗಿದೆ ಎಂದರು.

ಜೊತೆಗೆ ಧರ್ಮಪ್ರಾಂತ್ಯದ ಅಧೀನದ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದ ಇನ್ನೂ ಮೂವರನ್ನು ವಿನಾಕಾರಣ ಕೆಲಸದಿಂದ ತೆಗೆದಿದ್ದು, ಅವರಿಗೆ ಮರಳಿ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿದರು. ಬೆನೆಫಿಷರೀಸ್ ಅಸೋಸಿಯೇಷನ್‌ನ ಉಪಾಧ್ಯಕ್ಷ ವಿ.ಸ್ಯಾಮ್ಯುಯೆಲ್ ಸದಾನಂದ, ಜಿ.ಸುದರ್ಶನ್‌ಕುಮಾರ್ ಗೋಷ್ಠಿಯಲ್ಲಿದ್ದರು.


ಮೈಸೂರು ವಿಜಯನಗರ 4ನೇ ಹಂತದಲ್ಲಿ ಚಿರತೆ ಮತ್ತೆ ಪ್ರತ್ಯಕ್ಷ: ನಿವಾಸಿಗಳಲ್ಲಿ ಆತಂಕ



ಮೈಸೂರು, ಮಾ.15(ಎಂಟಿವೈ)– ಮೈಸೂರಿನ ವಿಜಯನಗರದ ನಾಲ್ಕನೇ ಹಂತದಲ್ಲಿ ಮತ್ತೆ ಚಿರತೆ ಪ್ರತ್ಯಕ್ಷವಾಗಿದೆ. ಬಡಾವಣೆಯ ಮನೆಯೊಂದರ ಮುಂದೆ ಸುಳಿದಾಡುತ್ತಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು ಸ್ಥಳೀಯರಲ್ಲಿ ಆತಂಕ ಮನೆ ಮಾಡಿದೆ.

ವಿಜಯನಗರದ ನಾಲ್ಕನೇ ಹಂತದ ನಿವಾಸಿ ಕೆ.ಹರೀಶ್ ಮಾಚಯ್ಯ ಅವರ ಮನೆ ಮುಂದೆ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಮಾ.14ರಂದು ಮುಂಜಾನೆ 1.14ರಿಂದ 1.19 ಸಮಯದಲ್ಲಿ ಚಿರತೆ ಅವರ ಮನೆ ಗೇಟ್ ಬಳಿ ಬಂದು ಇಣುಕಿದೆ. ಬಳಿಕ ಮನೆ ಸಮೀಪದ ಖಾಲಿ ನಿವೇಶನದಲ್ಲಿ ಬೆಳೆದಿರುವ ಪಾರ್ಥೇನಿಯಂ ಗಿಡಗಳ ನಡುವೆ ಮರೆಯಾಗಿದೆ. ನಾಲ್ಕನೇ ಹಂತದಲ್ಲಿ ಡ್ರಗ್ ಕಂಟ್ರೋಲ್ ಕಚೇರಿ ಸಮೀಪ ಹರೀಶ್ ಮಾಚಯ್ಯ ಅವರ ನಿವಾಸವಿದ್ದು, ಸಮೀಪವಿರುವ ಖಾಲಿ ನಿವೇಶನದಲ್ಲಿ ಬೆಳೆದು ನಿಂತಿರುವ ಗಿಡಗಂಟಿಗಳ ನಡುವೆ ಚಿರತೆ ಬೀಡು ಬಿಟ್ಟಿರಬಹುದು ಎಂಬ ಆತಂಕ ನಿರ್ಮಾಣವಾಗಿದೆ. ಫೆ.26ರಂದು ವಿಜಯನಗರದ ನಾಲ್ಕನೇ ಹಂತದಲ್ಲಿ ಕೆಲ ಮನೆಗಳ ಮುಂದೆ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಚಿರತೆ ಸುಳಿದಾಡುತ್ತಿರುವ ದೃಶ್ಯ ಕಂಡು ಬಂದಿತ್ತು. ಅರಣ್ಯ ಸಿಬ್ಬಂದಿ ಬೋನ್‌ವೊಂದನ್ನು ಇಟ್ಟಿದ್ದರು. ಆದರೆ, ಬೋನ್‌ಗೆ ಬೀಳದ ಚಿರತೆ ಕಳೆದ ರಾತ್ರಿ ಮತ್ತೆ ಪ್ರತ್ಯಕ್ಷವಾಗಿದೆ. ವಾರದ ಹಿಂದೆ ನಾಲ್ಕನೇ ಹಂತದಲ್ಲಿನ ಮನೆಯೊಂದರ ಸಾಕು ನಾಯಿ ಕಣ್ಮರೆಯಾಗಿದ್ದು, ಅದನ್ನು ಚಿರತೆ ಬಲಿ ಪಡೆದಿರಬಹುದು ಎಂಬ ಆತಂಕ ಮನೆ ಮಾಡಿದೆ. ಅರಣ್ಯ ಇಲಾಖೆ ಕೂಡಲೆ ಚಿರತೆ ಸೆರೆಗೆ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.


ನಿಧನ



ಕೃಷ್ಣಂರಾಜು

ಮೈಸೂರು, ಮಾ.15–ಮೈಸೂರಿನ ಭೂದೇವಿ ಫಾರಂ ಮಾಲೀಕರು ಹಾಗೂ ಜಯಲಕ್ಷ್ಮಿಪುರಂ ನಿವಾಸಿಯಾದ ಕೃಷ್ಣಂರಾಜು (ಬಾಬು) ಬುಧವಾರ ಬೆಳಗ್ಗೆ ನಿಧನರಾದರು. ಅವರಿಗೆ 64 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಕೆ.ವಿ. ನಾಗಮಣಿ, ಪುತ್ರ ಕಾರ್ತಿಕ್, ಪುತ್ರಿ ಸಂಯುಕ್ತ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿ ಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಎಸ್.ಸತ್ಯನಾರಾಯಣ ರಾವ್



ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಸಿಪಿಸಿ ಪಾಲಿಟೆಕ್ನಿಕ್‌ನ ಕಮರ್ಷಿಯಲ್ ಪ್ರಾಕ್ಟೀಸಸ್ ವಿಭಾಗದ ನಿವೃತ್ತ ಮುಖ್ಯಸ್ಥರು ಹಾಗೂ ಗಾಯತ್ರಿಪುರಂ 2ನೇ ಹಂತ, ಸೇಂಟ್ ಆಂತೋಣಿ ಚರ್ಚ್ ಸಮೀಪದ ನಿವಾಸಿಗಳಾದ ಎಂ.ಎಸ್. ಸತ್ಯನಾರಾಯಣ ರಾವ್(77) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಸುಮಾ, ಪುತ್ರ ಎಂ.ಎಸ್. ದೀಪಕ್ (ಆಡಿಟರ್ ಮತ್ತು ಟ್ಯಾಕ್ಸ್ ಪ್ರಾಕ್ಟೀಷನರ್), ಸೊಸೆ ಅಶ್ವಿನಿ, ಮೊಮ್ಮಕ್ಕಳಾದ ಶ್ರುಜನ್, ಶುಷ್ರುತ್ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿ.ಬಿ.ಮರಿಸ್ವಾಮಿ ನಿಧನ





ಮೈಸೂರು, ಮಾ.15–ರೈಲ್ವೆ ಇಲಾಖೆಯ ನಿವೃತ್ತ ಎಕ್ಸಿಕ್ಯೂಟಿವ್ ಎಂಜಿನಿಯರ್, ಕುವೆಂಪುನಗರ ನಿವಾಸಿ ಡಿ.ಬಿ.ಮರಿಸ್ವಾಮಿ (86) ಅವರು ಬುಧವಾರ ನಿಧನರಾದರು. ಮೃತರು ಪತ್ನಿ ಹಾಗೂ ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಇಚ್ಛೆಯಂತೆ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜಿನ ದೇಹ ದಾನ ನಿರ್ಧರಿಸಿದ್ದು, ಗುರುವಾರ (ಮಾ.16)ದಂದು ಮಧ್ಯಾಹ್ನ 1ಗಂಟೆಗೆ ಮೆಡಿಕಲ್ ಕಾಲೇಜಿಗೆ ದೇಹವನ್ನು ಹಸ್ತಾಂತರಿಸಲಾಗುತ್ತದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಆಫ್ರಿಕಾದ ಅತೀ ಎತ್ತರದ ಪರ್ವತ 'ಮೌಂಟ್ ಕಿಲಿಮಂಜಾರೋ' ಏರಿದ ಮೈಸೂರು ಸಾಹಸಿ ಮಹಿಳೆ ಕುಂಞ್ಞಯಂಡ ಪ್ರೀತ್ ಅಪ್ಪಯ್ಯ

●ದೈಹಿಕ ಸಮಸ್ಯೆ ನಡುವೆಯೂ ಶಿಖರಗಳನ್ನೇರಿ ಸಾಧನೆ ●ಸಾವಿರಾರು ಅಡಿ ಶಿಖರದಲ್ಲೇ ಮಹಿಳಾ ದಿನಾಚರಣೆ

■ ಮೋಹನ್ ಕಾಯಕ







ಟ್ರಕ್ಕಿಂಗ್ ಮಾಡಬೇಕು ಎಂಬುದಷ್ಟೇ ನನ್ನ ಮನಸ್ಸಿನಲ್ಲಿತ್ತು. ಯಾವಾಗಲೂ ಮೊಬೈಲ್ ಸ್ಟೇಟಸ್‌ನಲ್ಲಿ 'ಕಿಲಿಮಂಜಾರೋ' ಚಿತ್ರ ಹಾಕಿಕೊಳ್ಳುತ್ತಿದ್ದೆ ಆದರೆ ಯಾರಿಗೂ ಹೇಳುತ್ತಿರಲಿಲ್ಲ. ಕಡೆಗೂ 'ಕಿಲಿಮಂಜಾರೋ' ಪರ್ವತ ಹತ್ತಿದ್ದೇನೆ. ಪರಿಸರ ನೋಡುವುದು ನನಗಿಷ್ಟ. ಹಿಮಾಲಯ ನೋಡುವುದೇ ಆನಂದ. – ಕುಂಞ್ಞಯಂಡ ಪ್ರೀತ್ ಅಪ್ಪಯ್ಯ, ಪರ್ವತಾರೋಹಿಣಿ

ಮೈಸೂರು, ಮಾ.15–'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ'ಯಂದು ಆಫ್ರಿಕಾದ ಅತೀ ಎತ್ತರದ ಪರ್ವತ 'ಮೌಂಟ್ ಕಿಲಿಮಂಜಾರೋ' ಏರಿ ಸಾಹಸಿ ಪರ್ವತಾರೋಹಿಣಿ ಎನಿಸಿಕೊಂಡಿರುವ ಮೈಸೂರಿನ ಮಹಿಳೆಯೊಬ್ಬರು, ದೃಢ ಸಂಕಲ್ಪವಿದ್ದರೆ ಅಸಾಧ್ಯವಾದುದೂ ಸಾಧ್ಯ ಎಂಬುದನ್ನು ಸಾಬೀತು ಮಾಡಿದ್ದಾರೆ.

ಮೂಲತಃ ಕೊಡಗಿನ ವಿರಾಜಪೇಟೆ ತಾಲೂಕಿನ ಅಮ್ಮತ್ತಿಯವರಾದ ಕುಂಞ್ಞಯಂಡ ಪ್ರೀತ್ ಅಪ್ಪಯ್ಯ, ಏಕಾಂಗಿಯಾಗಿ ವಿಶ್ವದಲ್ಲಿಯೇ ಅತೀ ಎತ್ತರದ ಸ್ವತಂತ್ರ ಪರ್ವತ(highest freestanding mountain)ಎಂದು ಕರೆಯಲ್ಪಡುವ, 19,341 ಅಡಿಯಷ್ಟು ಎತ್ತರದ ಆಫ್ರಿಕಾದ ಟಾಂಜಾನಿಯಾದಲ್ಲಿರುವ 'ಮೌಂಟ್ ಕಿಲಿಮಂಜಾರೋ' ಏರಿ ಸಾಹಸ ಮೆರೆದಿದ್ದಾರೆ.

ಮೈಸೂರಿನ ಬನ್ನಿಮಂಟಪದಲ್ಲಿ ನೆಲೆಸಿರುವ ಅವರು, ಮನೆಮಂದಿಯ ಪ್ರೋತ್ಸಾಹದಿಂದ ಗೃಹಿಣಿಯಾಗಿದ್ದವರು ಕಳೆದ ಐದಾರು ವರ್ಷದಲ್ಲಿ ಸಾಹಸಿ ಪರ್ವತಾರೋಹಿಣಿಯಾಗಿ ಹೊರಹೊಮ್ಮಿದ್ದಲ್ಲದೆ ದೈಹಿಕ ಸಮಸ್ಯೆಗಳನ್ನು ಮೆಟ್ಟಿನಿಂತಿದ್ದಾರೆ. ಬೆನ್ನಿನ ಮೂಳೆಯ ಕೆಳಭಾಗದಲ್ಲಿ ಕಾಣಿಸಿಕೊಂಡಿದ್ದ ನೋವ (Sciatic nerve problem)ನ್ನು ಸಹಿಸಿಕೊಂಡು ಹೆಜ್ಜೆ ಹಾಕಲು ಕಷ್ಟಪಡುತ್ತಿದ್ದ ಪ್ರೀತ್ ಅಪ್ಪಯ್ಯ, ಮೋಡಗಳ ನಡುವಿನ ಪರ್ವತಗಳನ್ನೇರಿ ಇತರೆ ಮಹಿಳೆಯರಲ್ಲೂ ಆತ್ಮವಿಶ್ವಾಸ ಮೂಡಿಸಿದ್ದಾರೆ.

ತಮ್ಮ ಮಗನಿಗೆ ಟ್ರಕ್ಕಿಂಗ್(ಚಾರಣ) ತರಬೇತಿ ಕೊಡಿಸುತ್ತಲೇ ಟ್ರಕ್ಕಿಂಗ್ ಮೇಲೆ ಆಸಕ್ತಿ ಬೆಳೆಸಿಕೊಂಡ ಅವರು, ರಾಜ್ಯದಲ್ಲಿ 18–20 ಪ್ರವಾಸಿ ತಾಣಗಳಲ್ಲಿ ಚಾರಣ ನಡೆಸಿದ್ದಾರೆ. ರಾಷ್ಟ್ರಮಟ್ಟದಲ್ಲಿ ಮೊದಲ ಬಾರಿಗೆ ಅಂದರೆ 2018ರಲ್ಲಿ ಹಿಮಾಚಲ ಪ್ರದೇಶದಲ್ಲಿರುವ ಮೌಂಟ್ ಭೃಗು ಲೇಕ್(mount Bhrigu Lake), 2019ರಲ್ಲಿ 'ಮೌಂಟ್ ಸರ್ಪಾಸ್', 2021ರಲ್ಲಿ ಉತ್ತರ ಖಂಡದಲ್ಲಿರುವ 'ವ್ಯಾಲಿ ಫ್ಲವರ್ಸ್' ಹಾಗೂ 2022ರಲ್ಲಿ ಕಾಶ್ಮೀರದಲ್ಲಿರುವ ಗ್ರೇಟ್ ಲೇಕ್ಸ್ ಆಫ್ ಕಾಶ್ಮೀರದ ಟ್ರಕ್ಕಿಂಗ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.

ಆಫ್ರಿಕಾದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಪ್ರಪಂಚದಲ್ಲಿಯೇ ಅತ್ಯಂತ ಹಾಗೂ ಜ್ವಾಲಾಮುಖಿಯಿಂದ ರೂಪಗೊಂಡ ಪರ್ವತಗಳ ಸಾಲಿನಲ್ಲಿರುವ ಆಫ್ರಿಕಾದ ಟಾಂಜಾನಿಯಾದಲ್ಲಿರುವ 'ಕಿಲಿಮಂಜಾರೋ' ಪರ್ವತವನ್ನೇರಿ ರಾಷ್ಟ್ರಧ್ವಜ ಹಾಗೂ ಕರ್ನಾಟಕದ ಬಾವುಟ ಹಾರಿಸಿದ್ದಲ್ಲದೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನೂ ಆಚರಿಸಿದ್ದಾರೆ. ಮಾ.7ರ ರಾತ್ರಿ 11 ಗಂಟೆಗೆ 'ಕಿಲಿಮಂಜಾರೋ' ಹತ್ತಲು ಆರಂಭಿಸಿದ ಪ್ರೀತ್ ಅಪ್ಪಯ್ಯ, ಮಾ.8ರ ಬೆಳಗ್ಗೆ 10 ಗಂಟೆ ಸುಮಾರಿಗೆ ಗುರಿತಲುಪಿದ್ದಾರೆ. ಈ ಮೂಲಕ ತಮ್ಮ ಮೊದಲ ಅಂತರರಾಷ್ಟ್ರೀಯ ಮಟ್ಟದ ಚಾರಣದಲ್ಲಿ ಯಶಸ್ವಿಯಾಗಿದ್ದಾರೆ.

ಯಾರಿಗೂ ಹೇಳದೆ ಏಕಾಂಗಿ ಚಾರಣ: ಆಫ್ರಿಕಾದ 'ಕಿಲಿಮಂಜಾರೋ' ಪರ್ವತವನ್ನೇರುವ ಕುರಿತು ಮನೆಯಲ್ಲಿ ಯಾರಿಗೂ ಹೇಳಿರಲಿಲ್ಲ. ಟ್ರಕ್ಕಿಂಗ್ ಟೀಂ ಜೊತೆಗೆ ಹೋಗುತ್ತಿದ್ದೇನಂದಷ್ಟೇ ಹೇಳಿದ್ದೆ. ಆಫ್ರಿಕಾ ತಲುಪಿ 'ಕಿಲಿಮಂಜಾರೋ' ಪರ್ವತ ಹತ್ತುವ ಸಂದರ್ಭದಲ್ಲಿ ತಿಳಿಸಿದೆ. ಪರ್ವತಗಳನ್ನು ಹತ್ತುವುದೇ ವಿಶೇಷ. ಪ್ರಕೃತಿಯ ಸೌಂದರ್ಯ ಸವಿಯುವುದೇ ಚೆಂದ. ಪರ್ವತದ ಮೇಲಿನಿಂದ ನಿಂತು ಭೂಮಿಯ ವಿಸ್ಮಯಗಳನ್ನು ನೋಡುವುದು ಮನಸ್ಸಿಗೆ ಆಹ್ಲಾದಕರ ಅನುಭವ ನೀಡುತ್ತದೆ ಎಂದು 'ಮೈಸೂರು ಮಿತ್ರ'ನಲ್ಲಿ ಚಾರಣದ ಸವಿನೆನಪನ್ನು ಬಿಚ್ಚಿಟ್ಟರು. ಮೂಲ ಕೊಡಗಿನವರಾದರೂ ಓದು, ವೈವಾಹಿಕ ಜೀವನ ಮೈಸೂರಿನಲ್ಲಿ. 2017ರಲ್ಲಿ ನನ್ನ ಬೆನ್ನಿನ ಮೂಳೆಯ ಕೆಳಭಾಗದಲ್ಲಿ ಕಾಣಿಸಿಕೊಂಡಿದ್ದ ನೋವಿನ ಶಮನಕ್ಕಾಗಿ ಯೋಗಾಭ್ಯಾಸ ಶುರುಮಾಡಿದೆ. ಯೋಗಾಭ್ಯಾಸದ ವೇಳೆ ಟ್ರಕಿಂಗ್ ಬಗ್ಗೆ ಕೆಲವರು ಮಾತನಾಡುತ್ತಿರುವುದು ನನ್ನ ಕಿವಿಗೆ ಬಿತ್ತು. ನಂತರ ಮನೆಗೆ ಬಂದು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ನೋಡಿದಾಗ ಟ್ರಕ್ಕಿಂಗ್ ತರಬೇತಿ ಹೇಳಿಕೊಡುವ ಸಂಸ್ಥೆಯ ಜಾಹೀರಾತು ನನ್ನ ಕಣ್ಣಿಗೆ ಬಿತ್ತು. ಕೂಡಲೇ ನನ್ನ ಎರಡನೇ ಮಗ(ಆರ್ಯನ್ ಕುಟ್ಟಪ್ಪ)ನನ್ನು ಟ್ರಕ್ಕಿಂಗ್ ತರಬೇತಿ ಸಂಸ್ಥೆಗೆ ಸೇರಿಕೊಳ್ಳುವಂತೆ ಹೇಳಿದೆ. ನಂತರ ಮಗನನ್ನು ಟ್ರಕ್ಕಿಂಗ್ ತರಬೇತಿ ಸಂಸ್ಥೆಗೆ ಕರೆದುಕೊಂಡು ಹೋಗಿ ಬರುತ್ತಲೇ ನನಗೂ ಟ್ರಕ್ಕಿಂಗ್ ಮೇಲೆ ಆಸಕ್ತಿ ಮೂಡಿತು. ಟೈಗರ್ ಅಡ್ವೆಂಚರ್ ಫೌಂಡೇಶನ್‌ನ ಟೈಗರ್ ಸೋಲಂಕಿ ಅವರಿಂದ ತರಬೇತಿ ಆರಂಭಿಸಿ, ನಂತರ ರಾಯಲ್ ರೈಡರ್ ಮೈಸೂರ್(ಆರ್‌ಆರ್‌ಎಂ) ಸಂಸ್ಥೆ ವಿನಯ್ ಸಿಂಗ್ ಅವರ ಮಾರ್ಗದರ್ಶನದಲ್ಲಿ ಹಲವು ಪರ್ವತಗಳನ್ನು ಹತ್ತಲು ಸಾಧ್ಯವಾಯಿತು ಎಂದು ಸ್ಮರಿಸಿದರು.

ಆಕ್ಸಿಜನ್ ಪ್ರಮಾಣ ಕಡಿಮೆ: 'ಕಿಲಿಮಂಜಾರೋ' ಪರ್ವತದಲ್ಲಿ ಒಂದು ಮಿಲಿಯನ್ ವರ್ಷದ ಹಿಂದೆ ಜ್ವಾಲಾಮುಖಿ ಸ್ಫೋಟವಾಗಿದೆ. ಲಾವಾರಸದಿಂದ ಕೊಬೋ ಹಟ್ ಎಂಬ ಜಾಗವೇ ನಿರ್ಮಾಣವಾಗಿದೆ. ಈ ಪರ್ವತಗಳ ಮೇಲೆ ಆಕ್ಸಿಜನ್ ಪ್ರಮಾಣ ಕಡಿಮೆ ಇರುವುದರಿಂದ ಟ್ರಕ್ಕಿಂಗ್ ಮಾಡುವುದು ತುಂಬಾ ಕಷ್ಟ. ಖುಷಿ ವಿಚಾರವೆಂದರೆ ಈ ಮೊದಲು ಟ್ರಕ್ಕಿಂಗ್ ಮುಗಿಸಿ ವಾಪಸ್ಸಾದಾಗ 10–15 ದಿನ ವಿಶ್ರಾಂತಿ ಬೇಕಾಗುತ್ತಿತ್ತು. ಆದರೆ 'ಕಿಲಿಮಂಜಾರೋ' ಪರ್ವತವೇರಿ ಬಂದಿದ್ದರೂ ಆರಾಮವಾಗಿದ್ದೇನೆ. ಅಂತರರಾಷ್ಟ್ರಿಯ ಮಟ್ಟದ ಟ್ರಕ್ಕಿಂಗ್ ಮಾಡಿದ ಖುಷಿ ಇದೆ ಎಂದು ಹರ್ಷ ವ್ಯಕ್ತಪಡಿಸಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ವಿವಿಧ ಕಾಮಗಾರಿಗಳ ತ್ವರಿತವಾಗಿ ಪೂರ್ಣಗೊಳಿಸಲು ಶಾಸಕ ಜಿಟಿಡಿ ಸೂಚನೆ



ಮೈಸೂರು, ಮಾ.15(ಎಂಕೆ)– ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯಲ್ಲಿನ ಬಹುತೇಕ ಎಲ್ಲಾ ಗ್ರಾಮಗಳಲ್ಲಿ ಕಾಮಗಾರಿಗಳು ಪ್ರಾರಂಭವಾಗಿದ್ದು, ಕಳಪೆಗೆ ಅವಕಾಶ ಕೊಡದೆ ಗುಣಮಟ್ಟ ಕಾಯ್ದುಕೊಳ್ಳುವಂತೆ ಶಾಸಕ ಜಿ.ಟಿ.ದೇವೇಗೌಡ, ಇಂಜಿನಿಯರ್‌ಗಳಿಗೆ ಸೂಚಿಸಿದರು.

ಜಿಪಂ ಸಭಾಂಗಣದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಸೇರಿದಂತೆ ಎಲ್ಲಾ ಸಹಾಯಕ ಮತ್ತು ಕಿರಿಯ ಇಂಜಿನಿಯರ್‌ಗಳ ಸಭೆ ನಡೆಸಿದ ಅವರು, ಕ್ಷೇತ್ರದ ಗ್ರಾಮಗಳ ಅಭಿವೃದ್ಧಿಗೆ ಮೊದಲ ಹಂತದಲ್ಲಿ 25 ಕೋಟಿ ರೂ., ಎರಡನೇ ಹಂತದಲ್ಲಿ 30 ಕೋಟಿ ರೂ. ಮಂಜೂರಾಗಿ ಎಲ್ಲಾ ಕಾಮಗಾರಿಗಳಿಗೆ ಈಗಾಗಲೇ ಚಾಲನೆ ನೀಡಲಾಗಿದೆ. ಆದರೆ ಕೆಲ ಗ್ರಾಮಗಳಲ್ಲಿ ಇನ್ನು ಸಹ ಕಾಮಗಾರಿ ಪ್ರಾರಂಭವಾಗಿಲ್ಲದಿರುವುದು ಗಮನಕ್ಕೆ ಬಂದಿದ್ದು, ಕೂಡಲೇ ಕಾಮಗಾರಿಗಳನ್ನು ಆರಂಭಿಸುವಂತೆ ಸೂಚಿಸಿದರು. ಚುನಾವಣೆ ಸನಿಹದಲ್ಲಿರುವ ಕಾರಣ ಸಮರೋಪಾದಿಯಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯ ಎಲ್ಲಾ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ಕ್ಷೇತ್ರದಲ್ಲಿನ 24 ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ 3 ಕೋಟಿ ರೂ. ಮಂಜೂರಾಗಿದ್ದು, ಕೂಡಲೇ ದೇವಸ್ಥಾನಗಳ ಅಭಿವೃದ್ಧಿ ಕಾಮಗಾರಿ ಪ್ರಾರಂಭಿಸುವಂತೆ ನಿರ್ಮಿತಿ ಕೇಂದ್ರದ ಅಧಿಕಾರಿಗಳಿಗೆ ತಿಳಿಸಿದರಲ್ಲದೆ ಕಾಮಗಾರಿ ಮಾಡುವಾಗ ಯಾವುದೇ ಕಳಪೆ ಆಗಬಾರದು. ಅಧಿಕಾರಿಗಳು ಪ್ರತಿಯೊಂದು ನಿಗಾ ವಹಿಸಬೇಕು. ಗುಣಮಟ್ಟದ ಕಾಮಗಾರಿ ಇರಬೇಕು ಎಂದರು. ಜಿಪಂ ಸಿಇಒ ಕೆ.ಎಂ. ಗಾಯತ್ರಿ, ಇಇ ರಮೇಶ್, ಕೆಆರ್‌ಡಿಎಲ್ ಕಾರ್ಯಪಾಲಕ ಅಭಿಯಂತರ ತಿಪ್ಪಾರೆಡ್ಡಿ, ಎಇಇ ಮಮತಾ, ಎಇ ಸುನಿಲ್ ಸೇರಿದಂತೆ ಮತ್ತಿತರರು ಸಭೆಯಲ್ಲಿದ್ದರು.

ರಘು ಆಚಾರ್ ಉಚ್ಚಾಟನೆಗೆ ವೀರಶೈವ ಮಹಾಸಭಾ ಆಗ್ರಹ



ಚಿತ್ರದುರ್ಗ, ಮಾ.15– ವೀರಶೈವ ಲಿಂಗಾಯತ ಸಮುದಾಯದ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ವಿಧಾನಪರಿಷತ್ ಮಾಜಿ ಸದಸ್ಯ ಜಿ.ರಘು ಆಚಾರ್ ಅವರನ್ನು ಕಾಂಗ್ರೆಸ್ ಕೂಡಲೇ ಉಚ್ಚಾಟನೆ ಮಾಡಬೇಕು ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಒತ್ತಾಯಿಸಿದೆ.

ಸಮುದಾಯವನ್ನು ತೇಜೋವಧೆ ಮಾಡುವಂತಹ ಮಾತುಗಳನ್ನು ಆಡಿರುವ ರಘು ಆಚಾರ್ ಬೇಷರತ್ ಕ್ಷಮೆ ಯಾಚಿಸಬೇಕು. ಕೆಪಿಸಿಸಿ ಹಾಗೂ ಎಐಸಿಸಿ ಇದನ್ನು ಗಂಭೀರವಾಗಿ ಪರಿಗಣಿಸಿ ಶಿಸ್ತು ಕ್ರಮ ಜರುಗಿಸಬೇಕು. ಇಲ್ಲವಾದರೆ ಸಮುದಾಯ ಹೋರಾಟಕ್ಕೆ ಇಳಿಯಲಿದೆ ಎಂದು ಮಹಾಸಭಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎನ್. ಮಹೇಶ್ ಎಚ್ಚರಿಕೆ ನೀಡಿದರು. ಜನಪ್ರತಿನಿಧಿಗಳೊಂದಿಗೆ ಸಮುದಾಯ ಗೌರವಯುತ ಸಂಬಂಧ ಇಟ್ಟುಕೊಂಡಿದೆ. ಜಿಲ್ಲೆಯ ಹೊರ ಭಾಗದವರಾದರೂ ಸೌಹಾರ್ದಯುತವಾಗಿ ನಡೆದುಕೊಂಡಿದೆ.

> "ಯಾವುದೇ ಸಮುದಾಯವನ್ನು ತೇಜೋವಧೆ ಮಾಡುವುದು ಸರಿಯಲ್ಲ. ಗೌರವಯುತವಾಗಿ ನಡೆದುಕೊಳ್ಳುವ ರೀತಿಯನ್ನು ಕಲಿಯಬೇಕು. ಕಾಂಗ್ರೆಸ್ ಪಕ್ಷ ಶಿಸ್ತುಕ್ರಮ ಜರುಗಿಸಬೇಕು.
> – ಎಸ್.ಎಂ.ಎಲ್.ತಿಪ್ಪೇಸ್ವಾಮಿ, ವೀರಶೈವ ಸಮಾಜದ ಮುಖಂಡ


ಆದರೆ, ರಘು ಆಚಾರ್ ನಡೆದುಕೊಳ್ಳುತ್ತಿರುವ ರೀತಿ ಅವರಿಗೆ ಶೋಭೆ ತರುವಂತಹದ್ದಲ್ಲ. ಯಾವುದೇ ಸಮುದಾಯದ ಬಗ್ಗೆ ಹಗುರವಾಗಿ ಮಾತನಾಡುವುದು ತಪ್ಪು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಮಹಡಿ ಶಿವಮೂರ್ತಿ, ರಘು ಆಚಾರ್ ಅವರು ಜನಪ್ರತಿನಿಧಿಯಾದ ಬಳಿಕ ಸಮುದಾಯವನ್ನು ತೇಜೋವಧೆ ಮಾಡುತ್ತ ಬಂದಿದ್ದಾರೆ. ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕುರಿತು ಅವರು ಆಡಿದ ಮಾತುಗಳನ್ನು ಸಮುದಾಯ ಇನ್ನೂ ಮರೆತಿಲ್ಲ. ಉಡಾಫೆಯಿಂದ ನಡೆದುಕೊಳ್ಳುವ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಬಾರದು ಎಂದು ಒತ್ತಾಯಿಸಿದರು.

ರಘು ಆಚಾರ್ ತಪ್ಪು ಮಾಡಿಲ್ಲ

ವಿಧಾನಪರಿಷತ್ ಮಾಜಿ ಸದಸ್ಯ ಜಿ.ರಘು ಆಚಾರ್ ಯಾವುದೇ ಸಮುದಾಯದ ಬಗ್ಗೆ ಹಗುರವಾಗಿ ಮಾತನಾಡಿಲ್ಲ. ತಿರುಚಿದ ಆಡಿಯೊ ಹರಿಬಿಟ್ಟು ತೇಜೋವಧೆ ಮಾಡಲಾಗುತ್ತಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಯುವ ಘಟಕದ ಕಾರ್ಯದರ್ಶಿ ಮಮತಾ ನೇರ್ಲಗಿ ತಿಳಿಸಿದರು. 'ರಘು ಆಚಾರ್ ಅವರು ಎಲ್ಲ ಸಮುದಾಯದ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದಾರೆ. ವೀರಶೈವ ಲಿಂಗಾಯತ ಸಮಾಜದ ಕುರಿತು ಅವರು ಹಗುರವಾಗಿ ಮಾತನಾಡಿಲ್ಲ. ಸಮಾಜದಲ್ಲಿ ತಪ್ಪು ಭಾವನೆ ಮೂಡುವಂತೆ ಮಾಡಲು ನಕಲಿ ಆಡಿಯೊ ಹರಿಬಿಡಲಾಗಿದೆ' ಎಂದು ಬುಧವಾರ ಪ್ರತ್ಯೇಕ ಪತ್ರಿಕಾಗೋಷ್ಠಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.3.2023 ಗುರುವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.03.2023ರಿಂದ 17.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ– ಡಾ.ಕೃಷ್ಣಮೂರ್ತಿ ಹನೂರು, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ– ನಿತಿನ್ ರಾಜಾರಾಂ ಶಾಸ್ತ್ರಿ, ಸದಾಶಿವ ಪಾಟೀಲ್, ವ್ಯಾಖ್ಯಾನ–ಕೆ.ಎಲ್. ಪದ್ಮಿನಿ ಹೆಗಡೆ, 7.15 ಭಾವಗೀತೆ–ಹೇಮಂತ್, 8.30 ಗೆಲುವಿನ ಗುಟ್ಟು–ಪ್ರಹಸನ–ಪ್ರಾಯೋಜಿತ ಕಾರ್ಯಕ್ರಮ, 8.45 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.00 ನಾರಾಯಣ ಕೆ.ಪಿ.–ನಾಗಸ್ವರ ವಾದನ.

ಮಧ್ಯಾಹ್ನ: 12.30 ದೇವರನಾಮ, 1.20 ಭಾವಗೀತೆಗಳು–ದೀಪಾ ಸತ್ಯನಾರಾಯಣ, 4.00 ಜನಪದ ಸಂಗೀತ–ಮಾದಶೆಟ್ಟಿ ಮತ್ತು ತಂಡ, 4.30 ವಿಜ್ಞಾನ ಭಾರತಿ–ಡಾ. ಮನೋಹರ್ ಅವರೊಂದಿಗೆ ಸಂದರ್ಶನ, ವಿದ್ವಾನ್ ಗಣಪತಿ ಭಾತ್ ಸಂಕದಗುಂಡಿ, ಜಿ.ತೇಜಸ್ವಿನಿ ಅವರಿಂದ ಕಥಾವಾಚನ, 6.50 ಕೃಷಿರಂಗ– ಕಿಸಾನ್‌ವಾಣಿ– ಹೂವಿನ ಕೃಷಿ ಹಾಗೂ ಹೈನುಗಾರಿಕೆ ಕುರಿತು ಎಸ್.ಎಂ.ಸುರೇಶ್ ಅವರೊಂದಿಗೆ ಸಂದರ್ಶನ, 8.15 ಯುವವಾಣಿ–ಹಲೋ ಯುವವಾಣಿ–ರಸಪ್ರಶ್ನೆ ಕಾರ್ಯಕ್ರಮ, ನಡೆಸಿಕೊಡುತ್ತಾರೆ ನಿವೇದಿತಾ ಹೆಚ್., 9.30 ಕನ್ನಡ ಭಾರತಿ–ಮಕ್ಕಳ ಸಾಹಿತ್ಯದಲ್ಲಿ ಹೊಸ ಅಲೆ–ಸಂವಾದ, ಭಾಗವಹಿಸುವವರು ಡಾ.ಆನಂದ್ ವಿ.ಪಾಟೀಲ್, ಡಾ.ಕೆ.ಶಿವಲಿಂಗಪ್ಪ, ಡಾ.ಪರಮೇಶ್ವರಯ್ಯ ಸೊಪ್ಪಿಮಠ, 10.30 ಸವಿನೆನಪು

■ **ಪೊಲೀಸ್ ತರಬೇತಿ ಶಾಲೆ:** 4ನೇ ತಂಡದ ಮಹಿಳಾ ನಾಗರಿಕ ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ, ಮುಖ್ಯ ಅತಿಥಿಗಳು: ಪೊಲೀಸ್ ಮಹಾನಿರ್ದೇಶಕ ಡಾ. ಪಿ. ರವೀಂದ್ರನಾಥ್, ಉಪಸ್ಥಿತರು : ಪೊಲೀಸ್ ಮಹಾನಿರೀಕ್ಷಕ, ದಕ್ಷಿಣ ವಲಯ ಪ್ರವೀಣ್ ಮಧುಕರ್ ಪವಾರ್, ಪೊಲೀಸ್ ಆಯುಕ್ತ ಬಿ. ರಮೇಶ್ ಬಾನೋತ್, ಸ್ಥಳ: ಕವಾಯತು ಮೈದಾನ, ಡಿಎಆರ್ ಜ್ಯೋತಿನಗರ, ಬೆಳಗ್ಗೆ 8ಕ್ಕೆ.

■ **ಮೈಸೂರು ಜಿಲ್ಲೆ ಮತ್ತು ನಗರ ಸ್ವಾತಂತ್ರ್ಯ ಹೋರಾಟಗಾರರ ಸಂಘ :** ಕೃಷ್ಣಾಶ್ವತ್ಥ ಆಯುರ್ವೇದ ಸಸ್ಯಕಾಶಿ ಉದ್ಘಾಟನಾ ಸಮಾರಂಭ, ಶಿಲಾನ್ಯಾಸ : ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಂಘದ ಅಧ್ಯಕ್ಷ ವೈ.ಸಿ. ರೇವಣ್ಣ, ಸಸ್ಯಕಾಶಿ ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಪಾಲಿಕೆ ಸದಸ್ಯೆ ಎಂ. ಪ್ರಮೀಳಾ ಭರತ್, ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಸಂಸದ ಪ್ರತಾಪ್ ಸಿಂಹ, ಉಪಮೇಯರ್ ಡಾ. ಜಿ. ರೂಪಾ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ, ಸ್ಥಳ: ಸುಬ್ಬರಾಯನಕೆರೆ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಆವರಣದಲ್ಲಿರುವ ಕೃಷ್ಣಾಶ್ವತ್ಥ ಮೈದಾನ, ಬೆಳಗ್ಗೆ 10ಕ್ಕೆ.

■ **ಜೀವನ್ ಜ್ಯೋತ್ ವೆಲ್ಫೇರ್ ಫೆಡರೇಷನ್, ವಡೋದರ (ಗುಜರಾತ್) :** ಕ್ರಾಫ್ಟ್ ಬಜಾರ್, ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ, ಸ್ಥಳ: ಜೆಎಸ್‌ಎಸ್ ಮೈಸೂರ್ ಹರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್ ಶಾಪಿಂಗ್ ಫೆಸ್ಟಿವಲ್ :** ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30 ರಿಂದ ರಾತ್ರಿ 9.30 ರವರೆಗೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯೂಪ್ರೆಶರ್ ಹಾಗೂ ಸುಜೋಕ್ ಮತ್ತು ಅಕ್ಯೂಡಿಜಿಟಲ್ ಫಿಜೀಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ : ಮಾರಿಯಮ್ಮ ದೇವಸ್ಥಾನ, ಬಂಬೂ ಬಜಾರ್, ಬೆಳಗ್ಗೆ 10.30 ರಿಂದ.

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ :** ಮಕ್ಕಳ ಸ್ನೇಹಿ ಕೊಠಡಿಗಳ ಪೇಯಿಂಟಿಂಗ್, ಕಂಪ್ಯೂಟರ್ ಶಿಕ್ಷಣ ಮತ್ತು ಡಿಜಿಟಲ್ ಸ್ಮಾರ್ಟ್ ಕ್ಲಾಸ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಮಲ್ಲೇಶ್ವರಿ, ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಕಾರ್ಯದರ್ಶಿ ಪ್ರೊ. ವಿ.ಕೆ. ಜೋಸ್, ಶ್ರೀಮತಿ ಸರಸ್ವತಿ, ಜಿತಿನ್ ಸಲ್ಡಾನ, ಶ್ರೀಮತಿ ಪುಷ್ಪಲತಾ, ಸ್ಥಳ: ಹಂಚ್ಯಾ ಸರ್ಕಾರಿ ಶಾಲೆ, ಬೆಳಗ್ಗೆ 11ಕ್ಕೆ.

■ **ಜಿಲ್ಲಾಡಳಿತ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜೆಎಸ್‌ಎಸ್ ಕಾನೂನು ಕಾಲೇಜು :** ವಿಶ್ವ ಗ್ರಾಹಕರ ದಿನಾಚರಣೆ, ಅಧ್ಯಕ್ಷತೆ : ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಎ.ಕೆ. ನವೀನ್‌ಕುಮಾರಿ, ಉದ್ಘಾಟನೆ : ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಮುಖ್ಯ ಅತಿಥಿಗಳು : ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜ ಭೂತೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಎಂ.ಕೆ. ಲಲಿತ, ಮಾರುತಿ ಹೆಚ್. ವಡ್ಡರ್, ಜೆಎಸ್‌ಎಸ್ ಕಾನೂನು ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಕೆ.ಎಸ್. ಸುರೇಶ್, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು, ಕುವೆಂಪುನಗರ, ಬೆಳಗ್ಗೆ 11ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು :** ಪ್ರೊ. ಮಲೆಯೂರು ಗುರುಸ್ವಾಮಿ ಅವರಿಗೆ ನುಡಿನಮನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಸ್ಥಳ: ಸುವರ್ಣ ಮಹೋತ್ಸವ ಸಭಾಂಗಣ, ಸಂಜೆ 4ಕ್ಕೆ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ:** ವಿದ್ವಾನ್ ಪಣೀಂದ್ರಾಚಾರ್ಯ ಅವರಿಂದ ಭಗವದ್ಗೀತೆಯ 6ನೇ ಅಧ್ಯಾಯದ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್:** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಾಂಜಲಿಯ ಯೋಗ ಸೂತ್ರಗಳು–ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಚಿನ್ಮಯ ಮಿಷನ್ ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ

ಉದ್ಘಾಟನೆಯಾದ ವಾರದಲ್ಲೇ ಕಿತ್ತು ಬಂದ ಎಕ್ಸ್‌ಪ್ರೆಸ್‌ವೇ



ರಾಮನಗರ, ಮಾ. 15– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಕಾಮಗಾರಿ ಕಳಪೆಯಾಗಿದೆ ಎಂದು ವಿಪಕ್ಷಗಳ ಟೀಕೆಗಳಿಗೆ ಪುಷ್ಟಿ ನೀಡುವಂತೆ ಉದ್ಘಾಟನೆಗೊಂಡ ಎರಡೇ ದಿನದಲ್ಲಿ ಎಕ್ಸ್‌ಪ್ರೆಸ್‌ವೇ ರಸ್ತೆ ಕಿತ್ತು ಬಂದಿದೆ.

ರಾಮನಗರ ಕಡೆಯಿಂದ ಬಿಡದಿ ಕಡೆಗೆ ಹೋಗುವ ರಸ್ತೆಯು ಬಿಡದಿ ಬೈಪಾಸ್ ಮುಕ್ತಾಯಗೊಳ್ಳುವ ಸ್ಥಳದಲ್ಲಿರುವ ಸೇತುವೆ ಮೇಲೆ ಕಿತ್ತು ಬಂದಿದ್ದು, ಅರ್ಧ ರಸ್ತೆಯಲ್ಲಿ ವಾಹನಗಳು ಸಂಚರಿಸದಂತೆ ಅಧಿಕಾರಿಗಳು ಕೆಂಪು ಬಣ್ಣದ ಬ್ಯಾರಿಕೇಡ್ ಹಾಕಿದ್ದಾರೆ. ಎಕ್ಸ್‌ಪ್ರೆಸ್‌ವೇ ಅತ್ಯುತ್ತಮವಾಗಿದೆ ಹಾಗೂ ಯಾವುದೇ ಅಡೆತಡೆ ಇಲ್ಲ ಎಂದು ವೇಗವಾಗಿ ಬರುವ ವಾಹನಗಳು ಹಠಾತ್ತನೇ ಎದುರಾಗುವ ಕಿತ್ತೋದ ರಸ್ತೆಯನ್ನು ಕಂಡು ಬ್ರೇಕ್ ಹಾಕಿದಾಗ ಸ್ಕಿಡ್ ಆಗುತ್ತಿವೆ ಎಂದು ವಾಹನ ಚಾಲಕರು ತಿಳಿಸಿದ್ದಾರೆ. ಸ್ವಲ್ಪ ಮೈಮರೆತರೂ ಈ ಜಾಗದಲ್ಲಿ ವಾಹನ ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆಯುವ ಅಥವಾ ಹಠಾತ್ತನೇ ಬ್ರೇಕ್ ಹಾಕಿದಾಗ ಪಲ್ಟಿ ಹೊಡೆಯುವ ಅಪಾಯವಿದೆ ಎಂದು ಹೇಳುತ್ತಿದ್ದಾರೆ.

ರಸ್ತೆ ಉದ್ಘಾಟನೆಗೂ ಮುನ್ನ ಈ ರಸ್ತೆಯಲ್ಲಿ ಸಂಚರಿಸುತ್ತಿದ್ದ ಲಾರಿಯೊಂದು ಇದೇ ಸ್ಥಳದಲ್ಲಿ ಪಲ್ಟಿ ಹೊಡೆದಿತ್ತು. ಕೆಎಸ್‌ಆರ್‌ಟಿಸಿ ಓಲ್ವೋ ಬಸ್ ಸೇರಿದಂತೆ ಹಲವು ವಾಹನಗಳು ವೇಗವಾಗಿ ಸಂಚರಿಸಿದಾಗ ಇದೇ ಸ್ಥಳದಲ್ಲಿ ಸ್ಕಿಡ್ ಆಗಿ ಒಂದು ತುದಿಯಿಂದ ಮತ್ತೊಂದು ತುದಿಗೆ ಎಳೆದೊಯ್ದಿತ್ತು ಎಂದು ಕೆಲವರು ಹೇಳುತ್ತಿದ್ದಾರೆ.

ಕಾಮಗಾರಿ ಕಳಪೆಯಲ್ಲ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸ್ಪಷ್ಟನೆ

ಮೈಸೂರು, ಮಾ. 15(ಆರ್‌ಕೆ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಕಳಪೆ ಗುಣಮಟ್ಟದ್ದಲ್ಲ ಎಂದು ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಹೆಚ್‌ಎಐ)ದ ಯೋಜನಾ ನಿರ್ದೇಶಕ ಬಿ.ಟಿ. ಶ್ರೀಧರ್ ತಿಳಿಸಿದ್ದಾರೆ.

ಬೆಂಗಳೂರು–ನಿಡಘಟ್ಟ ನಡುವೆ ಫ್ಲೈಓವರ್‌ನಲ್ಲಿ ರಸ್ತೆಗೆ ಅಡ್ಡಲಾಗಿ ಅಳವಡಿಸಿರುವ ಕಬ್ಬಿಣದ ರಾಡ್‌ಗಳಲ್ಲಿನ ಜಾಯಿಂಟ್ ವೆಲ್ಡಿಂಗ್ ಬಿಟ್ಟು ಹೋಗಿರುವ ವಿಷಯ ತಿಳಿಯಿತು. ಭಾರೀ ವಾಹನಗಳು ಓಡಾಡುವುದರಿಂದ ಏನಾದರೂ ಅನಾಹುತ ಸಂಭವಿಸಬಹುದೆಂದು ನಾವೇ ಆ ಸ್ಥಳದ ಸಿಮೆಂಟ್ ಕಾಂಕ್ರಿಟ್ ತೆಗೆದು ರಿಪೇರಿ ಮಾಡಲು ಮುಂದಾಗಿದ್ದೇವೆ ಎಂದು ತಿಳಿಸಿದರು.

ಮೇನ್ ಕಾರಿಡಾರ್‌ನಲ್ಲಿ ಅಗೆದಿರುವುದನ್ನೇ ಫೋಟೋ ತೆಗೆದು ಸಾಮಾಜಿಕ ಜಾಲತಾಣದಲ್ಲಿ ರಸ್ತೆ ಕಳಪೆ ಕಾಮಗಾರಿ ಎಂದು ಬಿಂಬಿಸಲಾಗುತ್ತಿದೆ. ಇಷ್ಟು ದೊಡ್ಡ ರಸ್ತೆಯಲ್ಲಿ ಇಂತಹ ಸಣ್ಣಪುಟ್ಟ ಕೆಲಸಗಳು ನಿರಂತರವಾಗಿರುತ್ತವೆ. ಅದನ್ನೇ ದೊಡ್ಡದೆಂದು ಅಪಪ್ರಚಾರ ಮಾಡಲಾಗುತ್ತಿದೆ ಎಂದಿರುವ ಅವರು, ರಸ್ತೆ ಕಾಮಗಾರಿ ಗುಣಮಟ್ಟದ್ದಾಗಿದೆ ಎಂದು ಸ್ಪಷ್ಟಪಡಿಸಿದರು.

ಈ ಸಂಬಂಧ ಪ್ರತಿಕ್ರಿಯಿಸಿ ಟ್ವೀಟ್ ಮಾಡಿರುವ ಸಂಸದ ಪ್ರತಾಪ್ ಸಿಂಹ, ಇಂತಹ ಫೋಟೋಗಳನ್ನು ಹಾಕಿ ತಪ್ಪು ಮಾಹಿತಿಯನ್ನು ಹರಿಯಬಿಡಬಾರದು ಎಂದು ಮನವಿ ಮಾಡಿದ್ದು, ಅದು ದೊಡ್ಡ ಸಮಸ್ಯೆ ಏನಲ್ಲ. ಎಲ್ಲೆಲ್ಲಿ ತೊಂದರೆ ಇದೆಯೋ ಅಲ್ಲಲ್ಲಿ ಸರಿಪಡಿಸುವ ಕೆಲಸವನ್ನು ಪ್ರಾಧಿಕಾರ ಮಾಡುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

ಮಾ.18, ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಯುಗಾದಿ ಆಚರಣೆ

ಮೈಸೂರು, ಮಾ. 15– ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಯಕ್ಷಗಾನ, ಹುಲಿವೇಷ, ಕಂಸಾಳೆ ಸೇರಿದಂತೆ ಇನ್ನಿತರ ಕರ್ನಾಟಕದ ಸಾಂಪ್ರದಾಯಿಕ ಕಲಾ ಪ್ರಕಾರಗಳನ್ನು ಪ್ರದರ್ಶಿಸುವ ಮೂಲಕ ಯುಗಾದಿ ಹಬ್ಬವನ್ನು ಮಾರ್ಚ್ 18 ರಂದು ಸಂಜೆ 5 ಗಂಟೆಗೆ ಆಚರಿಸಲಾಗುತ್ತಿದೆ.

nexus CENTRE CITY

ಯುಗಾದಿ ಆಚರಣೆಯಲ್ಲಿ ತೊಡಗಿರುವ ನೆಕ್ಸಸ್ ಸೆಂಟರ್ ಸಿಟಿ ಮಾಲ್, ಪೋಷಕರೊಂದಿಗೆ ಉತ್ತಮ ಸಂಪರ್ಕ ಸಾಧಿಸಲು ಕುಶಲ ಮಾರ್ಗಗಳೊಂದಿಗೆ ಬರುವ ತನ್ನ ಬದ್ಧತೆಯಲ್ಲಿ ಮಾಲ್ ಆವರಣದಲ್ಲಿ ವಿಶಿಷ್ಟ ಕಾರ್ಯಕ್ರಮವನ್ನು ಆಯೋಜಿಸಿದೆ.

ಯಕ್ಷಗಾನ– ನೃತ್ಯ, ಸಂಗೀತ, ಸಂಭಾಷಣೆ ಸಂಗೀತ, ಮೇಕಪ್ ಮತ್ತು ರಂಗ ತಂತ್ರಗಳನ್ನು ವಿಶಿಷ್ಟ ಶೈಲಿಯೊಂದಿಗೆ ಬೆಸೆಯುವ ಸಾಂಪ್ರದಾಯಿಕ ರಂಗಭೂಮಿ. ಹುಲಿ ವೇಷ– ಸಾಂಪ್ರದಾಯಿಕ ಜಾನಪದ ನೃತ್ಯ ಪ್ರಕಾರವು ಹುಲಿ ಮುಖವಾಡವನ್ನು ಧರಿಸಲು ಮನರಂಜನೆಯನ್ನು ಒಳಗೊಂಡಿರುತ್ತದೆ. ಕಂಸಾಲೆ– ಕಂಸಾಲೆ ಎಂಬ ಹಿತ್ತಾಳೆಯಿಂದ ತಯಾರಿಸಿದ ಸಂಗೀತ ವಾದ್ಯವನ್ನು ಬಳಸಿ ಪ್ರದರ್ಶಿಸುವ ವಿಶಿಷ್ಟ ಜಾನಪದ ಕಲೆಯನ್ನು ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾಧಕ ಮಹಿಳೆಯರಿಗೆ ಸನ್ಮಾನ



ಮೈಸೂರು, ಮಾ.15(ಎಸ್‌ಪಿಎನ್)– ಕುಟುಂಬ, ಸಮಾಜಕ್ಕೆ ಚ್ಯುತಿ ಬಾರದ ಹಾಗೆ ನೋಡಿಕೊಳ್ಳುವ ಶಕ್ತಿ ಹೆಣ್ಣಿಗಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿವಿ ಅರ್ಥಶಾಸ್ತ್ರದ ವಿಭಾಗದ ಪ್ರಾಧ್ಯಾಪಕಿ ಡಾ.ಆರ್.ಎಚ್. ಪವಿತ್ರ ತಿಳಿಸಿದರು.

ಮೈಸೂರು ಚಾಮುಂಡಿಪುರಂನಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಬುಧವಾರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಹಾಗೂ ಶ್ರೀ ದುರ್ಗಾ ಫೌಂಡೇಶನ್ ಸಹಕಾರದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಮಹಿಳಾ ಸಾಧಕಿಯರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಸಮಾಜದ ಬೇರೆ ಬೇರೆ ಕ್ಷೇತ್ರಗಳಲ್ಲಿ ಮಹಿಳೆಗೆ ಸಮಾನ ಸ್ಥಾನಮಾನ ಮತ್ತು ಗೌರವ ಸಿಗಬೇಕು. ಸಾಧನೆ ಮಾಡಿದ ಮಹಿಳೆಯರನ್ನು ಸಂಘ–ಸಂಸ್ಥೆಗಳು ಗುರುತಿಸಿ, ಪ್ರೋತ್ಸಾಹಿಸಬೇಕು. ಕುಟುಂಬ, ಸಮಾಜದ ಗೌರವ ಘನತೆಗೆ ಎತ್ತಿ ಹಿಡಿಯುವ ಜವಾಬ್ದಾರಿ ಹೆಣ್ಣಿಗಿದೆ. ಶೋಷಿತ ಮಹಿಳೆಯರಿಗೆ ನ್ಯಾಯ ಒದಗಿಸುವ ಕೆಲಸ ಆಗಬೇಕು ಎಂದು ತಿಳಿಸಿದರು.

ಹೆಣ್ಣನ್ನು ದ್ವೇಷದಿಂದ, ಕೀಳರಿಮೆಯಿಂದ ಕಾಣಬಾರದು. ಸಂವಿಧಾನವು ಮಹಿಳೆಯರಿಗೆ ನೀಡಿರುವ ಹಕ್ಕುಗಳನ್ನು ರಕ್ಷಿಸಿ, ಅವರ ಸಾಧನೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಇದರಲ್ಲಿ ಸಂಘ–ಸಂಸ್ಥೆಗಳ ಪಾತ್ರ ಹೆಚ್ಚಿನದು ಎಂದರು.

ನಗರ ಪಾಲಿಕೆ ಸದಸ್ಯೆ ಪ್ರಮೀಳಾ ಭರತ್ ಮಾತನಾಡಿ, ಆಧುನಿಕ ಮಹಿಳೆ ಎಲ್ಲಾ ರಂಗದಲ್ಲೂ ತನ್ನ ಅಸ್ತಿತ್ವವನ್ನು ಸ್ಥಾಪಿಸುವ ಮೂಲಕ ನಾನು ಸಬಲೆ ಎಂಬುದನ್ನು ನಿರೂಪಿಸಿದ್ದಾಳೆ. ತಾಯಿಯಾಗಿ, ಮಗಳಾಗಿ, ಸಹೋದರಿಯಾಗಿ, ಮಡದಿಯಾಗಿ, ಸ್ನೇಹಿತೆಯಾಗಿ ಮಹಿಳೆ, ಪುರುಷನ ಬೆಳವಣಿಗೆಗೆ ಸ್ಫೂರ್ತಿಯಾಗಿದ್ದಾಳೆ. ಅದೇ ರೀತಿ ಪುರುಷರೂ ಮಹಿಳೆ ಬೆಳವಣಿಗೆಗೆ ಸ್ಫೂರ್ತಿಯಾಗಿ ನಿಲ್ಲಬೇಕು ಎಂದು ಅಭಿಪ್ರಾಯಪಟ್ಟರು.

ಸನ್ಮಾನ: ಡಾ.ರೇಖಾ ಮನಃಶಾಂತಿ(ವೈದ್ಯಕೀಯ ಕ್ಷೇತ್ರ), ರೂಪದರ್ಶಿ ಕ್ಷೇತ್ರದ ತನಿಷ್ಕಾ ಶೆಟ್ಟಿ, ಧಾರ್ಮಿಕ ಕ್ಷೇತ್ರದ ಸವಿತಾ ಘಾಟ್ಕೆ, ಸಂಘಟನಾ ಕ್ಷೇತ್ರದ ಎಸ್.ಪಿ.ರೇವತಿ, ಸಾಮಾಜಿಕ ಕ್ಷೇತ್ರದ ಸುಷ್ಮಾ ಆರಾಧ್ಯ, ಸಹಕಾರಿ ಕ್ಷೇತ್ರದ ಎಸ್.ಭವ್ಯಾ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಮೈಸೂರು ನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಮೃಗಾಲಯ ಪ್ರಾಧಿಕಾರ ಸದಸ್ಯರಾದ ಜ್ಯೋತಿ ರೇಚಣ್ಣ, ಅಪೂರ್ವ ಸುರೇಶ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ರಾಕೇಶ್, ಎಸ್.ಎನ್. ರಾಜೇಶ್, ಚಕ್ರಪಾಣಿ ಹಾಗೂ ಇನ್ನಿತರರು ಭಾಗವಹಿಸಿದ್ದರು.

ಚುನಾವಣಾ ಭ್ರಷ್ಟಾಚಾರ ಮುಕ್ತಗೊಳಿಸುವ ಆಶಯದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು

ವಿದ್ಯಾರ್ಥಿ ಸಮೂಹಕ್ಕೆ ಮೈಸೂರು ಮುಕ್ತ ವೇದಿಕೆ ಆಹ್ವಾನ





ಮೈಸೂರಿನ ಕಲಾಮಂದಿರದಲ್ಲಿ 2023ರ ಜ.25ರಂದು ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜ್ ಭೂತೆ ಅವರು ಹೊಸ ಮತ್ತು ಯುವ ಮತದಾರರಿಗೆ ಗುರುತಿನ ಚೀಟಿ ವಿತರಿಸಿದ್ದರು. ಜಿಲ್ಲಾಧಿಕಾರಿಗಳು ಅಂದು ತಮ್ಮ ಭಾಷಣದಲ್ಲಿ 'ಜಿಲ್ಲೆಯಲ್ಲಿ ಒಂದು ಲಕ್ಷಕ್ಕಿಂತಲೂ ಅಧಿಕ ಯುವ ಮತದಾರರಿದ್ದು, ಈ ಪೈಕಿ ಸುಮಾರು 40 ಸಾವಿರ ಮಂದಿ ಮಾತ್ರ ಮತದಾರರ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ' ಎಂದು ಉಲ್ಲೇಖಿಸಿದ್ದರು. ಇದೇ ಸಂದರ್ಭದಲ್ಲಿ ನೂತನ ಯುವ ಮತದಾರರು ಮತದಾರರ ದಿನಾಚರಣೆಯ ಪ್ರತಿಜ್ಞಾವಿಧಿ ಸ್ವೀಕರಿಸಿದ್ದರು.

ಪ್ರಿಯ ವಿದ್ಯಾರ್ಥಿಗಳೇ,

ನೀವು ಉತ್ತಮ ಗುಣಮಟ್ಟದ ಜೀವನವನ್ನು ನಡೆಸಲು ವಿದೇಶಕ್ಕೆ ಹೋಗುವ ಕನಸು ಕಾಣಲಿಲ್ಲವೇ?

ಅಧ್ಯಯನ ಮತ್ತು ವೃತ್ತಿ ಈ ಎರಡಕ್ಕೂ ವಿದೇಶದ ಪರಿಸ್ಥಿತಿಗಳು ಏಕೆ ಉತ್ತಮವೆಂದು ನೀವು ಯೋಚಿಸಿಲ್ಲವೇ?

ಸಿಂಗಾಪುರ್, ದುಬೈ, ಯುಕೆ, ಯುಎಸ್‌ನಂತಹ ದೇಶಗಳು ಏಕೆ ಸ್ವಚ್ಛವಾಗಿರುತ್ತವೆ ಮತ್ತು ವಾಸಿಸಲು ಅತ್ಯಂತ ಆರಾಮದಾಯಕವಾಗಿವೆ?

ಗೂಗಲ್‌ನ ಸುಂದರ್ ಪಿಚೈ, ಮೈಕ್ರೋಸಾಫ್ಟ್‌ನ ಮುಖ್ಯಸ್ಥ ಸತ್ಯ ನಾಡೆಲ್ಲಾ, ಪಾಲೊ ಆಲ್ಟೊ ನೆಟ್‌ವರ್ಕ್ಸ್‌ನ ಸಿಇಓ ನಿಕೇಶ್ ಅರೋರಾ, ಹರ್ಮನ್ ಇಂಟರ್‌ನ್ಯಾಷನಲ್‌ನ ಸಿಇಓ ದಿನೇಶ್ ಪಲಿವಾಲ್, ಸಿಸ್ಕೋ ಸಿಸ್ಟಂನ ಕಾರ್ಯನಿರ್ವಾಹಕ ಉಪಾಧ್ಯಕ್ಷ ಪಂಕಜ್ ಪಟೇಲ್, ಮೈಕ್ರಾನ್ ಟೆಕ್ನಾಲಜಿಯ ಸಿಇಓ ಸಂಜಯ್ ಮೆಹ್ರೋತ್ರಾ ಹಾಗೂ ವಿಶ್ವದ ಅತಿದೊಡ್ಡ ತಂಪು ಪಾನೀಯ ಕಂಪನಿ ಪೆಪ್ಸಿಕೋ ಮುಖ್ಯಸ್ಥರಾಗಿ ಈಗಷ್ಟೇ ನಿವೃತ್ತರಾದ ಇಂದ್ರಾನೂಯಿ ಇತರ ಭಾರತೀಯರು ವಿದೇಶದಲ್ಲಿ ಅಧ್ಯಯನ ಇಲ್ಲವೇ ಕೆಲಸ ಮಾಡಿದ ನಂತರವಷ್ಟೇ ಏಕೆ ಯಶಸ್ವಿಯಾಗಿದ್ದಾರೆ?

ಇಂತಹ ಆಲೋಚನೆಗಳು ನಿಮ್ಮಲ್ಲಿ ಮೂಡಿರಬಹುದು. ನೀವು (ವಿದ್ಯಾರ್ಥಿಗಳು) ಯಶಸ್ವಿಯಾಗಲು ಈಗಾಗಲೇ ಮೇಲೆ ಉಲ್ಲೇಖಿಸಿದ ಅಭಿವೃದ್ಧಿ ಹೊಂದಿದ ದೇಶಗಳ ಮಾದರಿಯಲ್ಲಿ ಭಾರತದಲ್ಲೂ ಉತ್ತಮ ವಾತಾವರಣ ಸೃಷ್ಟಿಸಲು ನಮ್ಮ ರಾಜಕೀಯ ನಾಯಕರು ಆಡಳಿತದಲ್ಲಿ ಸೂಕ್ತ ಬದಲಾವಣೆ ತರುವುದು ಅಗತ್ಯವಿದೆ ಅಲ್ಲವೇ?

ಭಾರತದಲ್ಲಿ ಅಂತಹ ಉನ್ನತ ಬದಲಾವಣೆ ತರುವ ಆಶಯದೊಂದಿಗೆ ಮೈಸೂರು ಮುಕ್ತ ವೇದಿಕೆ (ಮೈಸೂರು ಓಪನ್ ಫೋರಂ) ವತಿಯಿಂದ ಏರ್ಪಡಿಸಿರುವ ವಿಶೇಷ ಚರ್ಚಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ವಿದ್ಯಾರ್ಥಿ ಸಮೂಹಕ್ಕೆ ಆತ್ಮೀಯ ಆಮಂತ್ರಣವಿದೆ. 'ಭಾರತದಲ್ಲಿ ಭ್ರಷ್ಟ ಚುನಾವಣಾ ವ್ಯವಸ್ಥೆ ಮತ್ತು ಅದರ ಸುಧಾರಣಾ ಮಾರ್ಗಗಳು' ವಿಷಯ ಕುರಿತಂತೆ ಈ ಚರ್ಚಾ ಕಾರ್ಯಕ್ರಮ ನಡೆಯಲಿದೆ

ಮಾ.18ರ ಅಪರಾಹ್ನ 4 ಗಂಟೆಗೆ ಮೈಸೂರಿನ ಮಾನಸ ಗಂಗೋತ್ರಿಯ ಬಿ.ಎನ್.ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ ಆವರಣದಲ್ಲಿ ಸದರಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಭಾರತದಲ್ಲಿ ಚುನಾವಣಾ ಭ್ರಷ್ಟಾಚಾರ ನಿರ್ಮೂಲನೆಯಾದಾಗ ಮಾತ್ರವೇ ಉತ್ತಮ ನಾಯಕರು ಆಯ್ಕೆಯಾಗುತ್ತಾರೆ. ಆಗ ತಂತಾನೆ ದೇಶವೂ ಉನ್ನತ ಬದಲಾವಣೆ ಕಾಣಲಿದೆ. ಹಾಗಾಗಿ ಇಂತಹ ಮಹತ್ವದ ವಿಚಾರ ಕುರಿತು ತಜ್ಞರೊಂದಿಗೆ ಸಂವಾದ ನಡೆಸಲು ಹಾಗೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಇದು ವಿದ್ಯಾರ್ಥಿ ಸಮುದಾಯಕ್ಕೂ ವೇದಿಕೆಯಾಗಲಿದೆ

ಮೈಸೂರು ವಿವಿ ನೌಕರರ ವೇದಿಕೆಯಿಂದ ಮಾಜಿ ಸಂಸದ ಧ್ರುವನಾರಾಯಣರಿಗೆ ಶ್ರದ್ಧಾಂಜಲಿ



ಮೈಸೂರು, ಮಾ.15(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ನೌಕರರ ವೇದಿಕೆ ವತಿಯಿಂದ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮಹಾರಾಜ ಕಾಲೇಜು ಆವರಣದ ಅಪರಾಧ ಮತ್ತು ನ್ಯಾಯವಿಜ್ಞಾನ ವಿಭಾಗದ ಬಳಿ ಬುಧವಾರ ಬೆಳಗ್ಗೆ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಆರ್.ಧ್ರುವ ನಾರಾಯಣ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ, ಮೌನಾಚರಣೆ ಮೂಲಕ ಸಂತಾಪ ಸೂಚಿಸಿದರು.

ಸಭೆಯಲ್ಲಿ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಮಾತನಾಡಿ, ಎರಡು ಬಾರಿ ಸಂಸದರಾಗಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಆರ್.ಧ್ರುವನಾರಾಯಣ ದೇಶದಲ್ಲೇ ಅತ್ಯುತ್ತಮ ಸಂಸದರು ಎಂಬ ಕೀರ್ತಿಗೆ ಪಾತ್ರರಾಗಿದ್ದರು. ಅವರ ಅಕಾಲಿಕ ಸಾವು ದೊಡ್ಡ ಪ್ರಮಾಣದ ನಷ್ಟವನ್ನುಂಟು ಮಾಡಿದೆ. ಅವರ ಹೆಸರನ್ನು ಚಿರಸ್ಥಾಯಿಯಾಗಿಸಲು ಕಾರ್ಯಕ್ರಮ ರೂಪಿಸಬೇಕು. ಇದಕ್ಕಾಗಿ ಮೈಸೂರು ವಿವಿಯಲ್ಲಿ ದತ್ತಿನಿಧಿ ಸ್ಥಾಪಿಸಿ, ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡುವುದಕ್ಕೆ ಕ್ರಮ ಕೈಗೊಳ್ಳಬೇಕು. ದತ್ತಿಗೆ ಬೇಕಾದ ವೆಚ್ಚವನ್ನು ತಾವು ಭರಿಸುವುದಾಗಿ ಭರವಸೆ ನೀಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಮಾತನಾಡಿ, ಆರ್.ಧ್ರುವನಾರಾಯಣ್ ಅವರು ಸಜ್ಜನ ರಾಜಕಾರಣಿಯಾಗಿದ್ದರು. ನೈತಿಕ ಗಟ್ಟಿತನ ಉಳಿಸಿಕೊಂಡು, ಸಿದ್ಧಾಂತದೊಂದಿಗೆ ರಾಜಕಾರಣಕ್ಕೆ ಬಂದಿದ್ದರು. ಅವರು ಬೆಂಗಳೂರು ಕೃಷಿ ವಿವಿಯ ವಿದ್ಯಾರ್ಥಿ ನಾಯಕರಾಗಿದ್ದರು. ನಂತರ ಸಿಂಡಿಕೇಟ್ ಸದಸ್ಯರಾಗಿದ್ದರು. ಬೇರೆ ರಾಜಕಾರಣಿಗಳಿಗೂ ಅವರಿಗೂ ತುಂಬ ವ್ಯತ್ಯಾಸವಿರುತ್ತದೆ. ಹಾಗಾಗಿ ಅವರ ವ್ಯಕ್ತಿತ್ವ ವಿಭಿನ್ನ ಹಾಗೂ ವಿಶಿಷ್ಟವಾಗಿತ್ತು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, 2004ರ ನಂತರ ರಾಜಕಾರಣದ ದಿಕ್ಕು ಬದಲಾಗಿದೆ. ನೈತಿಕ ಅಧಃಪತನ ಕಂಡುಬರುತ್ತಿದೆ. ಪ್ರಸ್ತುತ ಕೋಟಿಗಟ್ಟಲೇ ಹಣವಿಲ್ಲದೇ ಚುನಾವಣೆಗೆ ಸ್ಪರ್ಧಿಸಲಾಗದು ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಧ್ರುವನಾರಾಯಣ 2009 ಮತ್ತು 2014ರಲ್ಲಿ ಸಂಸದರಾಗಿ, ನರೇಗಾ ಸ್ಥಾಯಿ ಸಮಿತಿಯ ಸದಸ್ಯರಾಗಿ ಅದ್ಭುತ ಕೆಲಸವನ್ನು ನಿರ್ವಹಿಸಿದ್ದರು ಎಂದರು.

ಮೈಸೂರು ವಿವಿ ಸಂಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಸಿ.ಡಿ.ಪರಶುರಾಮ ಮಾತನಾಡಿ, ಸರಳ ಸಜ್ಜನಿಕೆಯ ಪ್ರಾಮಾಣಿಕ ರಾಜಕಾರಣಿಗಳಲ್ಲಿ ಧ್ರುವನಾರಾಯಣ ಎಂದೆಂದೂ ಜೀವಂತ. ಎರಡು ಬಾರಿ ಶಾಸಕರು, ಎರಡು ಬಾರಿ ಸಂಸದರಾಗಿ ಧ್ರುವನಾರಾಯಣ ಆಯ್ಕೆಯಾಗಿದ್ದರು. 2004 ರಲ್ಲಿ ಒಂದೇ ಒಂದು ಮತದ ಅಂತರದಿಂದ ಆಯ್ಕೆಯಾಗಿ ಇಡೀ ಭಾರತವೇ ಸಂತೇಮರಹಳ್ಳಿ ಕ್ಷೇತ್ರದತ್ತ ನೋಡುವಂತೆ ಮಾಡಿದರು.

ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎಸ್. ಉಮೇಶ್ ಮಾತನಾಡಿ, ಧ್ರುವನಾರಾಯಣ ಅವರನ್ನು ಕಳೆದುಕೊಂಡಿರುವುದು ಕೇವಲ ಮೈಸೂರು, ಚಾಮರಾಜನಗರಕ್ಕಷ್ಟೇ ಅಲ್ಲ ಇಡೀ ಕರ್ನಾಟಕಕ್ಕೆ ತುಂಬಲಾರದ ನಷ್ಟ ಎಂದರು. ಮಹಾರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ಸಿ.ಎ. ಶ್ರೀಧರ್ ಮಾತನಾಡಿ, ಧ್ರುವತಾರೆಯೊಂದು ಕಳಚಿ ಬಿದ್ದಂತೆ ಆಗಿದೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಸಂಜೆ ಕಾಲೇಜಿನ ಪ್ರಾಂಶುಪಾಲ ಡಾ.ಎಚ್. ಸೋಮಶೇಖರಪ್ಪ, ಲಕ್ಷ್ಮೀಪುರಂ ಠಾಣೆ ಇನ್ಸ್‌ಪೆಕ್ಟರ್ ಮೋಹಿತ್ ಮಾತನಾಡಿದರು. ಕರ್ನಾಟಕ ಪೊಲೀಸ್ ಅಕಾಡೆಮಿ ಡಿವೈಎಸ್ಪಿ ಶಿವಶಂಕರ್, ನಂಜನಗೂಡು ಸಹಾಯಕ ಪ್ರಾಧ್ಯಾಪಕ ಬಿ. ಜಗದೀಶ್, ಮೈವಿವಿ ಪ.ಜಾತಿ ಮತ್ತು ವರ್ಗ ವಿಭಾಗದ ಉಪ ಕುಲಸಚಿವ ಪ್ರೊ.ಮಹದೇವಮೂರ್ತಿ, ಜಿಲ್ಲಾ ಕಸಾಪ ಕೋಶಾಧ್ಯಕ್ಷ ಜಿ. ಪ್ರಕಾಶ್, ವೇದಿಕೆಯ ಅಧ್ಯಕ್ಷ ಆರ್. ವಾಸುದೇವ, ಉಪಾಧ್ಯಕ್ಷ ಭಾಸ್ಕರ್, ಕಾರ್ಯದರ್ಶಿ ವಿನೋದ್, ಸಹ ಕಾರ್ಯದರ್ಶಿ ಯೋಗೇಶ್, ಖಜಾಂಚಿ ಶಿವಕುಮಾರ್, ಉಪನ್ಯಾಸಕಿ ಡಾ.ಬಿ. ಎಸ್. ದಿನಮಣಿ, ಚೆಲುವಾಂಬಿಕೆ, ಆನಂದ್ ಇತರರು ಇದ್ದರು. ಮಹಾರಾಣಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ವಿ.ಆರ್. ರಮೇಶ್ ಬಾಬು ನಿರೂಪಿಸಿದರು.

ದ್ವಿತೀಯ ಪಿಯು ರಸಾಯನಶಾಸ್ತ್ರ ಪತ್ರಿಕೆಗೆ

ಗ್ರಾಮೀಣ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಲು ಒತ್ತಾಯ



ಮೈಸೂರು, ಮಾ.15(ಎಸ್‌ಪಿಎನ್)– ಮಂಗಳವಾರ ನಡೆದ ರಸಾಯನಶಾಸ್ತ್ರ ಪ್ರಶ್ನೆ ಪತ್ರಿಕೆಯಲ್ಲಿ ಎಂಸಿಕ್ಯೂ ಪ್ರಶ್ನೆಗಳು ಕಠಿಣವಾಗಿರುವುದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ 5ರಿಂದ 10 ಕೃಪಾಂಕ ನೀಡುವಂತೆ ಕರ್ನಾಟಕ ಸೇನಾ ಪಡೆ ಪದಾಧಿಕಾರಿಗಳು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಮೈಸೂರು ಜಿಲ್ಲಾಧಿಕಾರಿಗಳ ಮೂಲಕ ಬುಧವಾರ ಮನವಿ ಪತ್ರ ಸಲ್ಲಿಸಿ, ಒತ್ತಾಯಿಸಿದ್ದಾರೆ.

ಮಂಗಳವಾರ ನಡೆದ ಎರಡನೇ ವರ್ಷದ ಪಿಯು ರಸಾಯನಶಾಸ್ತ್ರ ಪ್ರಶ್ನೆ ಪತ್ರಿಕೆಯಲ್ಲಿ ಮೊದಲ 10 ಪ್ರಶ್ನೆಗಳಲ್ಲಿ ಸಿಇಟಿ, ಜೆಇಇ ಲೆವಲ್(ಎಂಸಿಕ್ಯೂ ಮಾದರಿ) ಪ್ರಶ್ನೆಗಳನ್ನು ಪರಿಚಯಿಸಿರುವುದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅದು ಕಬ್ಬಿಣದ ಕಡಲೆಯಾಗಿದೆ. ಇದು ಫಲಿತಾಂಶದಲ್ಲಿ ಇಳಿಮುಖವಾಗುವ ಸಾಧ್ಯತೆಯಿದೆ ಎಂದು ಅವರು ಮನವಿಯಲ್ಲಿ ತಿಳಿಸಿದ್ದಾರೆ.

ಮಂಗಳವಾರ ನಡೆದ ರಸಾಯನಶಾಸ್ತ್ರ ಪ್ರಶ್ನೆ ಪತ್ರಿಕೆಯಲ್ಲಿ ನೀಟ್, ಸಿಇಟಿ, ಜೆಇಇ ಮಾದರಿ ಪ್ರಶ್ನೆಗಳನ್ನು ಕೊಟ್ಟಿರುವುದರಿಂದ ಪರೀಕ್ಷೆ ಎದುರಿಸಿದ ವಿದ್ಯಾರ್ಥಿಗಳಿಗೆ ಕಠಿಣವಾಗಿರುವ ಅಂಶ ಬೆಳಕಿಗೆ ಬಂದಿದೆ ಎಂದಿದ್ದಾರೆ.

ಅಪ್ಲಿಕೇಷನ್ ಲೆವಲ್ ಒಟ್ಟು ಪ್ರಶ್ನೆಗಳಲ್ಲಿ ಶೇ.10ರಷ್ಟು ಮೀರಬಾರದು ಎಂಬ ನಿಯಮವಿದ್ದರೂ ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳು ಈ ನಿಯಮವನ್ನು ಪಾಲಿಸಿಲ್ಲ. ಕಾರ್ಪೋರೇಟ್ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುವ ಉಪನ್ಯಾಸಕರಿಂದ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿರುವುದರಿಂದ ಈ ರೀತಿ ಪ್ರಶ್ನೆ ಪತ್ರಿಕೆ ಸಿದ್ಧವಾಗಿದ್ದು, ಇಂತಹ ಉಪನ್ಯಾಸಕರನ್ನು ಇನ್ನು ಮುಂದೆ ಈ ಕಾರ್ಯಕ್ಕೆ ನೇಮಿಸಬಾರದು ಎಂದು ಒತ್ತಾಯಿಸಿದ್ದಾರೆ.

ಕೂಡಲೇ ಇಲಾಖೆಯು ರಾಜ್ಯವ್ಯಾಪ್ತಿ ವಿದ್ಯಾರ್ಥಿಗಳ ಮಾಹಿತಿ ಪಡೆದುಕೊಂಡು ರಸಾಯನ ಶಾಸ್ತ್ರ ವಿದ್ಯಾರ್ಥಿಗಳಿಗೆ ಒಟ್ಟು 15 ಎಂಸಿಕ್ಯೂ ಪ್ರಶ್ನೆಗಳಿಗೆ ಕನಿಷ್ಠ ಪಕ್ಷ 5ರಿಂದ 10 ಅಂಕಗಳನ್ನು ಕೃಪಾಂಕ ನೀಡಿ, ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂದು ಕರ್ನಾಟಕ ಸೇನಾಪಡೆ ಒತ್ತಾಯಿಸಿದೆ ಈ ವೇಳೆ ಕರ್ನಾಟಕ ಸೇನಾ ಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಡಾ. ಶಾಂತರಾಜೇಅರಸ್, ಸಿ.ಎಚ್.ಕೃಷ್ಣಯ್ಯ, ಡಾ. ಮೊಗಣ್ಣ, ದರ್ಶನ್ ಗೌಡ, ರಾಧಾಕೃಷ್ಣ, ಗಣೇಶ್ ಪ್ರಸಾದ್, ಗೊರೂರು ಮಲ್ಲೇಶ್, ಸಿದ್ದರಾಜು ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಸಾಮಾನ್ಯ ಕೌನ್ಸಿಲ್ ಸಭೆ ಮುಂದೂಡಿಕೆ

ಮೈಸೂರು, ಮಾ.15– ಮಾ.16ರಂದು ಮೈಸೂರು ಮಹಾನಗರ ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ನಿಗದಿಯಾಗಿದ್ದ ಮಾರ್ಚ್ ಮಾಹೆಯ ಸಾಮಾನ್ಯ ಕೌನ್ಸಿಲ್ ಸಭೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ.

ಮುಂದಿನ ಕೌನ್ಸಿಲಿಂಗ್ ಸಭೆಯ ದಿನಾಂಕವನ್ನು ತಿಳಿಸಲಾಗುವುದು ಎಂದು ಮೈಸೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ಟೋಲ್ ವಸೂಲಿ ವಿರೋಧಿಸಿ

ನಾಳೆ ಎಂಎಲ್‌ಸಿ ವಿಶ್ವನಾಥ್ ಪ್ರತಿಭಟನೆ ; ಹಲವು ಸಂಘ–ಸಂಸ್ಥೆಗಳ ಬೆಂಬಲ

ಮೈಸೂರು, ಮಾ.15(ಜಿಎ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಪೂರ್ಣಗೊಂಡ ನಂತರ ನ್ಯಾಯಯುತ ಟೋಲ್ ಸಂಗ್ರಹಿಸುವಂತೆ ಆಗ್ರಹಿಸಿ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಶುಕ್ರವಾರ (ಮಾ.17)ದಂದು ಶಾಂತಿಯುತ ಪ್ರತಿಭಟನೆ ಮಾಡಲು ನಿರ್ಧರಿಸಿದ್ದು, ಇದಕ್ಕೆ ನಗರದ ವಿವಿಧ ಸಂಘ–ಸಂಸ್ಥೆಗಳು ಬೆಂಬಲ ಸೂಚಿಸಿವೆ.

ನಗರದ ಹುಣಸೂರು ರಸ್ತೆಯಲ್ಲಿರುವ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದಲ್ಲಿ ಬುಧವಾರ ಸಂಜೆ ವಿಶ್ವನಾಥ್ ಅವರು ನಡೆಸಿದ ಪ್ರತಿಭಟನೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಶುಕ್ರವಾರ ನಡೆಯುವ ಪ್ರತಿಭಟನೆಗೆ ಬೆಂಬಲ ನೀಡುವುದಾಗಿ ತಿಳಿಸಿದರು.

ಈ ವೇಳೆ ವಿಶ್ವನಾಥ್ ಮಾತನಾಡಿ, ನಮ್ಮ ಹೋರಾಟ ಧನದಾಹಿ ಸರ್ಕಾರದ ವಿರುದ್ಧವಾಗಿದ್ದು, ಜನರ ಬೆವರಿನ ಶ್ರಮದ ಖಜಾನೆಯ ಹಣದಲ್ಲಿ ದಶಪಥ ರಸ್ತೆ ನಿರ್ಮಾಣವಾಗಿರುವುದು. ಆದ್ದರಿಂದ ಜನರ ಹಣದಿಂದ ಮಾಡಿರುವ ಕಾಮಗಾರಿಯಲ್ಲಿ ರಾಜಕಾರಣಿಗಳು ಕ್ರೆಡಿಟ್ ತೆಗೆದುಕೊಳ್ಳುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಬೆಂಗಳೂರು–ಮೈಸೂರು ರಸ್ತೆಯನ್ನು ಎಸ್.ಎಂ. ಕೃಷ್ಣ ಅವಧಿಯಲ್ಲಿ 4 ಪಥದ ರಸ್ತೆ ಮಾಡಿ, ಆಗ ಟೋಲ್ ಸಂಗ್ರಹಿಸಲಿಲ್ಲ. ಹಾಗೇ ಶ್ರೀರಂಗಪಟ್ಟಣ–ಕೊಡಗು ಮತ್ತು ಕೊಡಗು–ಮಂಗಳೂರಿಗೆ ರಸ್ತೆ ನಿರ್ಮಾಣ ಮಾಡಲು ಅಂದೇ ನಿರ್ಧರಿಸಲಾಗಿತ್ತು. ನಂತರ ಬಂದ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಹೆಚ್.ಸಿ.ಮಹದೇವಪ್ಪ ಅವರು ಎಕ್ಸ್‌ಪ್ರೆಸ್ ವೇ ನಿರ್ಮಾಣ ಮಾಡಲು ಕೇಂದ್ರ ಸರ್ಕಾರಕ್ಕೆ ಎಲ್ಲಾ ರೀತಿಯ ದಾಖಲೆಗಳನ್ನು ಸಲ್ಲಿಸಿದರು. ಆದ್ದರಿಂದ ಈ ರಸ್ತೆಯ ಕ್ರೆಡಿಟ್ ಅಂದಿನ ಪ್ರಧಾನಮಂತ್ರಿಯಾಗಿದ್ದ ಡಾ.ಮನಮೋಹನ್ ಸಿಂಗ್



ಮತ್ತು ಎಸ್.ಎಂ.ಕೃಷ್ಣ ಅವರಿಗೆ ಸಲ್ಲಬೇಕು ಎಂದರು.

ಎಕ್ಸ್‌ಪ್ರೆಸ್‌ವೇ ಅವೈಜ್ಞಾನಿಕವಾಗಿ ಮಾಡಿರುವುದರಿಂದ ಈಗಾಗಲೇ 93 ಜನ ಸಾವನ್ನಪ್ಪಿದ್ದಾರೆ. 91ಪೆಟ್ರೋಲ್ ಬಂಕ್‌ಗಳು ಬಂದ್ ಆಗಿವೆ. ಜೊತೆಗೆ 400ಕ್ಕೂ ಹೆಚ್ಚು ಅಂಗಡಿಗಳು ಮುಚ್ಚಿವೆ. ಇದರೊಟ್ಟಿಗೆ ಮೋದಿ ಅವರು ಚನ್ನಪಟ್ಟಣದ ಗೊಂಬೆಗಳಿಗೆ ಜಾಗತಿಕ ಮಟ್ಟದಲ್ಲಿ ಮಾನ್ಯತೆ ಸಿಗುವಂತೆ ಮಾಡುತ್ತೇನೆ ಎಂದಿದ್ದರು. ಆದರೆ, ಈಗ ನಮ್ಮ ಕಲೆ, ಸಂಸ್ಕೃತಿಯನ್ನು ಬಿಂಬಿಸುವ ಗೊಂಬೆ ಖರೀದಿ ಮಾಡುವವರೇ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಟೋಲ್ ಕಟ್ಟಲು ಸಾಧ್ಯವಾಗದವರಿಗೆ ಸರ್ವಿಸ್ ರಸ್ತೆ ಮಾಡಬೇಕಿತ್ತು. ಅಲ್ಲದೇ ಬೆಂಗಳೂರು–ನಿಡಘಟ್ಟಕ್ಕೆ 270 ರೂ. ಟೋಲ್ ನಿಗದಿ ಮಾಡಿ ಜನರನ್ನು ಯಾಮಾರಿಸುತ್ತಿದ್ದಾರೆ. ನಿತಿನ್ ಗಡ್ಕರಿ ಅವರ ಕಡೆಯವರೇ ಎಲ್ಲಾ ರೀತಿಯ ಗುತ್ತಿಗೆಯನ್ನು ಪಡೆದುಕೊಂಡಿದ್ದು, ಕರ್ನಾಟಕದವರಿಗೆ ಯಾವುದೇ ಅವಕಾಶ ಇಲ್ಲದಂತಾಗಿದೆ. ಎಲ್ಲೋ ಒಂದು ಕಡೆ ಮೋದಿ ಅವಧಿಯಲ್ಲಿ ಉತ್ತರ ಭಾರತದವರಿಗೆ ಕರ್ನಾಟಕವನ್ನೂ ಅಡಮಾನ ಇಡುತ್ತಿದ್ದೇವೆ ಎಂದು ಭಾಸವಾಗುತ್ತಿದೆ. ಈ ರೀತಿ ಸಮಸ್ಯೆಗಳನ್ನು ಪ್ರಶ್ನಿಸಲಿಲ್ಲ ಎಂದರೆ ಜನರು 'ನೀನು ಎಷ್ಟು ತೆಗೆದುಕೊಂಡಿದ್ದಿಯಾ' ಎಂದು ಪ್ರಶ್ನಿಸಲಿದ್ದಾರೆ ಎಂದರು.

ನಿಡಘಟ್ಟ–ಬೆಂಗಳೂರು 55 ಕಿ.ಮೀಗೆ 290 ರೂ. ಟೋಲ್ ತೆಗೆದುಕೊಳ್ಳುತ್ತಿದ್ದಾರೆ. ಬಾಕಿ ಇರುವ 65 ಕಿ.ಮೀ ರಸ್ತೆ ಸರಿಯಾದರೆ ಇನ್ನೂ ಎಷ್ಟು ಹಣ ನೀಡಬೇಕು. ನಮಗೆ ಗೊತ್ತಿಲ್ಲದೆ ಜೇಬಿನಿಂದ ಹಣ ಖಾಲಿಯಾಗುತ್ತಿದೆ. ಈಗಾಗಲೇ ಮುಂಜಾನೆಯಿಂದ ಸಂಜೆಯವರೆಗೆ ಜಿಎಸ್‌ಟಿ ಹಣ ಕಟ್ಟಬೇಕಿದೆ. ಸದ್ಯ ಮೋದಿ ಅವರು ಮೊಬೈಲ್‌ನಲ್ಲಿ ತೆಗೆದುಕೊಳ್ಳುವ ಸೆಲ್ಫಿಗೆ ಜಿಎಸ್‌ಟಿ ಹಾಕಿಲ್ಲ ಅಷ್ಟೇ. ಚಳುವಳಿಯಿಂದಲೇ ಸ್ವಾತಂತ್ರ್ಯ ಸಿಕ್ಕಿರೋದು. ಆದರೆ, ಸರ್ಕಾರಗಳು ಚಳುವಳಿಯನ್ನು ಹತ್ತಿಕ್ಕುವುದನ್ನು ರಾಮಕೃಷ್ಣ ಹೆಗ್ಡೆ ಅವರ ಆ ಕಾಲದಿಂದಲೂ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ನಾವು ಪ್ರಶ್ನಿಸಬೇಕು ಈ ಹಿನ್ನೆಲೆಯಲ್ಲಿ ಯಾರು ಬರದಿದ್ದರೂ ಒಬ್ಬನೇ ಶುಕ್ರವಾರ(ಮಾ.17) ಬೆಳಗ್ಗೆ 10.30ಕ್ಕೆ ವಾಹನ ಸವಾರರಿಗೆ ಯಾವುದೇ ತೊಂದರೆಯಾಗದಂತೆ ಮಣಿಪಾಲ್ ಆಸ್ಪತ್ರೆಯ ಜಂಕ್ಷನ್ ಬಳಿ ಕುಳಿತು ಶಾಂತಿಯುತ ಪ್ರತಿಭಟನೆ ಮಾಡುತ್ತೇನೆ ಎಂದು ತಿಳಿಸಿದರು.

ಸಭೆಯಲ್ಲಿ ಇತಿಹಾಸ ತಜ್ಞ ಪ್ರೊ.ನಂಜರಾಜ ಅರಸ್, ಮುಖಂಡ ಎಂ.ಎಫ್. ಕಲೀಂ, ಮೈಸೂರು ಜಿಲ್ಲಾ ಕನ್ನಡ ಚಳವಳಿಗಾರರ ಸಂಘದ ಅಧ್ಯಕ್ಷ ಬಿ.ಎ.ಶಿವಶಂಕರ್, ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪ ನಾಯಕ, ನಗರಪಾಲಿಕೆ ಮಾಜಿ ಸದಸ್ಯ ಶೌಕತ್ ಪಾಷ, ದೇವರಾಜು ಅರಸು ಪ್ರತಿಷ್ಠಾನ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್, ಕನ್ನಡ ಪರ ಹೋರಾಟಗಾರ ಸ.ರ.ಸುದರ್ಶನ, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಅಜೀಜ್ ಸೇಠ್ ಬ್ಲಾಕ್ ಅಧ್ಯಕ್ಷ ಸೈಯದ್ ಇಕ್ಬಾಲ್, ಡಿಎಸ್‌ಎಸ್ ಮುಖಂಡ ಕಲ್ಲಹಳ್ಳಿ ಕುಮಾರ್, ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಅಧ್ಯಕ್ಷೆ ಎಚ್.ಎಲ್. ಯಮುನಾ, ನಗರಪಾಲಿಕೆ ಮಾಜಿ ಸದಸ್ಯ ಸೋಮಸುಂದರ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಕನ್ನಡ ಸಾಹಿತ್ ಪರಿಷತ್ ಅಧ್ಯಕ್ಷ ಮಡ್ಡಿಗೆರೆ ಗೋಪಾಲ್, ಕನ್ನಡ ಪರ ಹೋರಾಟಗಾರ ತಾಯೂರು ವಿಠಲಮೂರ್ತಿ, ಮೂಗೂರು ನಂಜುಂಡಸ್ವಾಮಿ, ಸಮಗ್ರ ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಅರವಿಂದ್ ಶರ್ಮ ಸೇರಿದಂತೆ ಮತ್ತಿತರರು ಭಾಗಿಯಾಗಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : (ಕ್ಲಿನಿಕ್‌ನಿಂದ ವಾಪಸ್ ಬಂದು)
ರೀ ಡಾಕ್ಟರ್ ಹೇಳಿದ್ರು,
ಒಂದು ತಿಂಗಳು ಕಾಲ ನಾನು ಸಮುದ್ರ ತೀರ ಇರೋ
ಊರಲ್ಲಿ ಇರಬೇಕಂತೆ. ಎಲ್ಲಿಗೆ ಹೋಗೋಣ?
ಗಂಡ : (ಹೌಹಾರಿ) ಬೇರೆ ಡಾಕ್ಟರಲ್ಲಿಗೆ!

ಮೈಸೂರು ಮಿತ್ರ

ಗುರುವಾರ, 16 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ತನ್ನೊಳಗಿನ ಅರಿವು ತನ್ನಲ್ಲಿ ತೋರಿದಲ್ಲದೆ ಅನ್ಯರಲ್ಲಿ ತೋರಬಲ್ಲದೆ?

– ದೇವರ ದಾಸಿಮಯ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೂಡಿದರೆ ಒಲೆ, ಮಾಡಿದರೆ ಮನೆ

ನಿಮ್ಮ ಪತ್ರಗಳು

ಸಾಮಾಜಿಕ ಕಳಕಳಿಯ ಚಿತ್ರವನ್ನು ವೀಕ್ಷಿಸಿ, ಪ್ರೋತ್ಸಾಹಿಸಿ

ಮಾನ್ಯರೆ,



ಇತ್ತೀಚೆಗೆ ಬಹಳಷ್ಟು ಸುದ್ದಿ ಮಾಡಿ ಬೆಂಗಳೂರು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಪ್ರಥಮ ಸ್ಥಾನವನ್ನು ಪಡೆದು ಘನತೆವೆತ್ತ ರಾಜ್ಯಪಾಲರಿಂದ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದ "ದೊಡ್ಡಹಟ್ಟಿ ಬೋರೇಗೌಡ" ಚಲನ ಚಿತ್ರವನ್ನು ಪರಸಂಗ, ತರ್ಲೆ ವಿಲೇಜ್ ಖ್ಯಾತಿಯ ನಿರ್ದೇಶಕರಾದ ಕೆ.ಎಂ.ರಘು ಅವರು ಸಾಮಾಜಿಕ ಕಳಕಳಿಯಿಂದ ಅತ್ಯುತ್ತಮವಾಗಿ ನಿರ್ದೇಶಿಸಿದ್ದಾರೆ. ಗ್ರಾಮೀಣ ಸೊಗಡಿನ ನೈಜ ಕಥೆಯನ್ನಾಧರಿಸಿದ ಚಿತ್ರವಸ್ತುವನ್ನು ಇರಿಸಿಕೊಂಡು ಬಹಳ ಸೊಗಸಾಗಿ ಕಥೆಯನ್ನು ಹೆಣೆದಿದ್ದಾರೆ. ಸರ್ಕಾರದಿಂದ ದೊರೆಯುವ ಮನೆ ಅಥವಾ ಯಾವುದೇ ಸವಲತ್ತಾದರೂ ಅದು ಫಲಾನುಭವಿಗೆ ತಲುಪುವವರೆಗೆ ಅನುಭವಿಸುವ ನರಕಯಾತನೆಯನ್ನು ಬಹಳ ಅಚ್ಚುಕಟ್ಟಾಗಿ ಭರವಸೆಯ ಕಲಾವಿದರನ್ನು ಬಳಸಿಕೊಂಡು ನವನವೀನವಾಗಿ ತೆರೆಯ ಮೇಲೆ ಮೂಡಿಸಿದ್ದಾರೆ. ಆದರೆ ನಮ್ಮ ಜನಗಳು ಸಮಾಜಕ್ಕೆ ಒಳ್ಳೆಯ ಸಂದೇಶ ಸಾರುವ ಚಿತ್ರಗಳನ್ನು ವೀಕ್ಷಿಸುವ ಮನಸ್ಸನ್ನೇ ಮಾಡುವುದಿಲ್ಲ. ಬರೀ ಮಚ್ಚು, ಲಾಂಗು, ಕೊಲೆ, ಸುಲಿಗೆ, ದರೋಡೆ ಇತ್ಯಾದಿ ಅತಿರಂಜನೆಯ ಚಿತ್ರಗಳನ್ನು ಪೋಷಿಸುವಷ್ಟು, ಒಳ್ಳೆಯ ಉದ್ದೇಶ ಮತ್ತು ಬದಲಾವಣೆಯ ದೃಷ್ಟಿಕೋನವನ್ನು ಇಟ್ಟುಕೊಂಡು ತಯಾರಿಸಿದ ಸಾಮಾಜಿಕ ಚಿತ್ರಗಳನ್ನು ಪ್ರೋತ್ಸಾಹಿಸುವುದಿಲ್ಲ. ಇದು ನೋವಿನ ಸಂಗತಿ.

ಶಾಲಾ ಕಾಲೇಜಿನ ದಿನಗಳು ಮತ್ತು ಗಣೇಶೋತ್ಸವ, ಗ್ರಾಮದೇವತೆ ಹಬ್ಬಗಳಲ್ಲಿ ನಾಟಕದ ಕಲೆಯನ್ನು ಮೈಗೂಡಿಸಿಕೊಂಡು ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಬೆಳ್ಳಿತೆರೆಯಲ್ಲಿ ಅಭಿನಯಿಸುವ ಅವಕಾಶವನ್ನು ಗಳಿಸಿದ ಬೀರಿಹುಂಡಿಯ ಅಪ್ಪಟ ಗ್ರಾಮೀಣ ಪ್ರತಿಭೆ ಕೆ.ಶಿವಣ್ಣ ಮುಖ್ಯ ಭೂಮಿಕೆಯಲ್ಲಿ "ದೊಡ್ಡಹಟ್ಟಿ ಬೋರೇಗೌಡ" ಚಲನ ಚಿತ್ರವು ಅತ್ಯಂತ ಯಶಸ್ವಿಯಾಗಿ ಮೂಡಿಬಂದಿದೆ. ಕನ್ನಡ ಸಿನಿರಸಿಕರು ಹಾಗೂ ಕನ್ನಡ ಜನತೆ ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಸಿದ್ಧಪಡಿಸಿರುವ ಯಾವುದೇ ಚಿತ್ರಗಳನ್ನಾದರೂ ಸಹ ವೀಕ್ಷಿಸಿ ಅಂತಹ ಚಿತ್ರಗಳನ್ನು ಗೆಲ್ಲಿಸಬೇಕು. ಆಗಲೇ ಸಣ್ಣಮಟ್ಟ ಕಲಾವಿದರಿಗೆ ಒಂದು ಹೊಸ ಹುಮ್ಮಸ್ಸು ಹಾಗೂ ಅವಕಾಶಗಳ ಬಾಗಿಲು ತೆರೆದುಕೊಳ್ಳುತ್ತವೆ. ಚಿತ್ರದಲ್ಲಿ ಅಭಿನಯಿಸಿರುವ ಎಲ್ಲಾ ಕಲಾವಿದರೂ ಉತ್ತಮವಾಗಿ ಅಭಿನಯಿಸಿದ್ದು, ನಿರ್ದೇಶಕರಾದ ಕೆ.ಎಂ.ರಘು ಮತ್ತು ತಂಡದವರಿಂದ ಇನ್ನಷ್ಟು ಸದಭಿರುಚಿಯ ಚಿತ್ರಗಳನ್ನು ನಿರ್ದೇಶಿಸುವಂತಹ ಶಕ್ತಿ ಕೊಡಲಿ ಎಂದು ಕನ್ನಡದ ಜನತೆಯ ಪರವಾಗಿ ಕೋರುತ್ತೇನೆ.

–ವೇಣು ಬೀರಿಹುಂಡಿ, ಮೈಸೂರು

ಸುಸಜ್ಜಿತ ಶೌಚಾಲಯವಿಲ್ಲದ ದಶಪಥ ರಸ್ತೆ

ಮಾನ್ಯರೆ,

ಮಂಗಳವಾರದಿಂದ ಮೈಸೂರು– ಬೆಂಗಳೂರು ಎಕ್ಸ್ ಪ್ರೆಸ್‌ವೇ ದಶಪಥ ರಸ್ತೆಗೆ ಟೋಲ್ ಸಂಗ್ರಹ ಮಾಡಲಾಗುತ್ತಿದೆ. ಆದರೆ ಈ ರಸ್ತೆಯಲ್ಲಿ ಸಂಚಾರ ಮಾಡುವ ಪ್ರಯಾಣಿಕರಿಗೆ ಯಾವುದೇ ರೀತಿಯ ಕನಿಷ್ಟ ಸೌಲಭ್ಯವು ಇಲ್ಲ. ವಯಸ್ಸಾದ ಮತ್ತು ಮಧುಮೇಹ ರೋಗಿಗಳಿದ್ದರಂತೂ ಅವರು ಕಾಫಿ, ಟೀ ಕುಡಿಯಲು ಇರಲಿ ಮೂತ್ರ ವಿಸರ್ಜನೆ ಮಾಡಲು ಜಾಗವಿಲ್ಲ. ನೀವು ಮೈಸೂರಿನಿಂದ ಚನ್ನಪಟ್ಟಣ ಅಥವಾ ರಾಮನಗರಕ್ಕೆ ಹೋಗಬೇಕಾದರೆ ಎಲ್ಲಿ ತಿರುಗಬೇಕೆಂಬ ಸೂಚನಾ ಫಲಕಗಳೇ ಇಲ್ಲ. ಈ ಗೊಂದಲದಿಂದಾಗಿ ಕೆಂಗೇರಿ ತನಕವೂ ಹೋಗಬೇಕಾಗುತ್ತದೆ. ಈ ದಶಪಥ ರಸ್ತೆಯ ಬದಿಯಲ್ಲಿ ಎರಡೂ ಕಡೆಯೂ ನಾಲ್ಕಾರು ಹೋಟೆಲ್‌ಗಳು ಮತ್ತು ಹತ್ತಾರು ಸುಸಜ್ಜಿತ ಶೌಚಾಲಯಗಳನ್ನು ನಿರ್ಮಿಸಿ, ನಂತರ ಟೋಲ್ ವಸೂಲಿ ಮಾಡಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು

ಪರೀಕ್ಷಾ ವಿದ್ಯಾರ್ಥಿಗಳೆಡೆಗೆ ಕಾಳಜಿ ಇರಲಿ!

ಮಾನ್ಯರೆ,

ಮಾರ್ಚ್ ತಿಂಗಳು ವಿದ್ಯಾರ್ಥಿಗಳಿಗಿದು ಪರೀಕ್ಷಾ ಸಮಯ
ಇದೀಗ ಪಿಯುಸಿ ಪರೀಕ್ಷೆಗಳು ನಡೆಯುತ್ತಿದೆ
ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಸನಿಹದಲ್ಲಿದೆ
ವಿವಿಧ ತರಗತಿಗಳ ವಿದ್ಯಾರ್ಥಿಗಳು ಪರೀಕ್ಷಾ ಸಿದ್ಧತೆಯಲ್ಲಿದ್ದಾರೆ
ಹೀಗಿರುವಾಗ ಸಾರ್ವಜನಿಕ ಧಾರ್ಮಿಕ ರಾಜಕೀಯ
ಸೇರಿದಂತೆ ಸಂಜೆಯ ವೇಳೆ ನಡೆಯುವ
ಆರ್ಕೆಸ್ಟ್ರಾ ಮುಂತಾದ ಮನರಂಜನಾ ಕಾರ್ಯಕ್ರಮಗಳಿಗೆ
ಬಳಸುವ ಧ್ವನಿವರ್ಧಕಗಳ ಬಳಕೆ ನಿಲ್ಲಿಸೋಣ.
ಓದುವ ಮಕ್ಕಳಿಗೆ ಶಬ್ದಮಾಲಿನ್ಯದ ಕಿರಿಕಿರಿ ತಪ್ಪಿಸೋಣ.
ಆ ಮೂಲಕ ವಿದ್ಯಾರ್ಥಿಗಳ ಕಡೆಗೆ ನಮ್ಮ ಕಾಳಜಿ ತೋರಿಸೋಣ!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಎಲ್‌ಇಡಿ ವಿದ್ಯುತ್ ಕಂಬ ಅಳವಡಿಸಿ



ಮಾನ್ಯರೆ,

ನಂಜನಗೂಡು ತಾಲೂಕಿನ ಕಾಡಂಚಿನಲ್ಲಿರುವ ಬಳ್ಳೂರುಹುಂಡಿ ಗ್ರಾಮದ ಮುಂಭಾಗ ವಿದ್ಯುತ್ ಕಂಬದ ಅವಶ್ಯಕತೆ ಇದೆ. ಮೊದಲೇ ಕಾಡಂಚಿನ ಗ್ರಾಮವಾಗಿರುವುದರಿಂದ ರಾತ್ರಿ ಹೊತ್ತು ಕತ್ತಲೆ ಇರುವ ಕಾರಣ ಗ್ರಾಮದ ಮುಂಭಾಗವೇ ಕಾಡು ಪ್ರಾಣಿಗಳು ಬರುತ್ತಿವೆ. ರಾತ್ರಿ ಹೊತ್ತು ಸರಿಯಾಗಿ ದಾರಿ ದೀಪಗಳಿಲ್ಲದ ಕಾರಣ ಜನರು ಓಡಾಡಲು ತೊಂದರೆಯಾಗುತ್ತಿದೆ. ದಯವಿಟ್ಟು ಅಧಿಕಾರಿಗಳು ಗ್ರಾಮದ ದ್ವಾರದಲ್ಲಿ ಒಂದು ದೊಡ್ಡದಾದ ಎಲ್‌ಇಡಿ ದ್ವೀಪದ ಕಂಬವನ್ನು ಅಳವಡಿಸಬೇಕೆಂದು ಮನವಿ.

– ಮಹಾಂತೇಶ್ ಬಸಪ್ಪ, ಬಳ್ಳೂರುಹುಂಡಿ, ನಂಜನಗೂಡು ತಾ.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಕೋವಿಡ್ ಸಮಯದ ಲಾಕ್‌ಡೌನ್ ತಂದಿಟ್ಟ ಮಹಾ ಆರ್ಥಿಕ ಅಭದ್ರತೆ

ಕೋವಿಡ್–19 ತಂದಿಟ್ಟ ಆರ್ಥಿಕ ಆಘಾತಗಳ ಪರಿಣಾಮವಾಗಿ ಜಾಗತಿಕ ಮಟ್ಟದಲ್ಲಿ ಎರಡೂವರೆ ಕೋಟಿ ಉದ್ಯೋಗಗಳು ಅಪಾಯದ ಅಂಚಿನಲ್ಲಿವೆ ಎಂದು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಅಂದಾಜು ಮಾಡಿದೆ. ಇದು ಎರಡನೆಯ ವಿಶ್ವ ಮಹಾಯುದ್ಧದ ನಂತರ ಸಂಭವಿಸಿರುವ ಅತ್ಯಂತ ಗಂಭೀರವಾದ ಜಾಗತಿಕ ಬಿಕ್ಕಟ್ಟು ಎಂದು ಹೇಳಿರುವ ಐ.ಎಲ್.ಓ. ವಿಶ್ವದ ಒಟ್ಟು ಶ್ರಮಿಕ ಜನಸಂಖ್ಯೆಯಲ್ಲಿ ಶೇ.81ರಷ್ಟು ಮಂದಿ ಲಾಕ್‌ಡೌನ್‌ನ ಪರಿಣಾಮವನ್ನು ಎದುರಿಸುತ್ತಿದ್ದಾರೆ ಎಂಬ ಎಚ್ಚರಿಕೆಯನ್ನು ಇತ್ತಿದೆ. ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯ ಒಂದು ವರದಿಯ ಪ್ರಕಾರ 1930ರ ಆರ್ಥಿಕ ಮುಗ್ಗಟ್ಟಿನ ನಂತರ ವಿಶ್ವ ಕಾಣುತ್ತಿರುವ ಅತ್ಯಂತ ಉತ್ಕಟವೆನಿಸುವ ಸಂದಿಗ್ಧ ಪರಿಸ್ಥಿತಿ ಇದಾಗಿದೆ.

ಜಗತ್ತಿನ ಅತೀ ಹೆಚ್ಚಿನ ತಳ ಸಮುದಾಯಗಳು ಜೀವನ ನಿರ್ವಹಣೆಗಾಗಿ ಆಶ್ರಯಿಸುವುದು ಅನೌಪಚಾರಿಕ ಉದ್ಯೋಗ ಕ್ಷೇತ್ರವನ್ನು. ಯಾವುದೇ ಬಗೆಯ ಕಾನೂನಾತ್ಮಕ ರಕ್ಷಣೆಯಿಲ್ಲದ, ಉದ್ಯೋಗ ಭದ್ರತೆಯಿಂದ ವಂಚಿತವಾದ, ಅತೀ ಕಡಿಮೆ ವೇತನವನ್ನು ನೀಡುವ, ಕಾರ್ಮಿಕ ವರ್ಗಕ್ಕೆ ಸುರಕ್ಷಿತ ಉದ್ಯೋಗ ಪರಿಸರವನ್ನು ಒದಗಿಸದ, ಎಲ್ಲಕಿಂತ ಮಿಗಿಲಾಗಿ ಯಾವುದೇ ಸೂಚನೆಯನ್ನು ನೀಡದೆ ನೂರಾರು ಜನರನ್ನು ಕೆಲಸದಿಂದ ತೆಗೆದು ಹಾಕುವಂಥ ಕ್ಷೇತ್ರ ಇದಾಗಿದ್ದು, ಅಭಿವೃದ್ಧಿಯ ಅಸಮತೋಲನವನ್ನು ತೀವ್ರವಾಗಿ ಎದುರಿಸುತ್ತಿರುವ ಸಮಾಜಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯ ದುಡಿಮೆಗಾರರು ಕಂಡು ಬರುತ್ತಿರುವುದು ಈ ವರ್ಗದಲ್ಲಿಯೇ. ಈ ಕ್ಷೇತ್ರವನ್ನು ಅಸಂಘಟಿತ ಕ್ಷೇತ್ರ ಎಂದೂ ಕರೆಯಲಾಗುತ್ತದೆ.

ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಪ್ರಕಾರ ಭಾರತದಲ್ಲಿ 40 ಕೋಟಿಗೂ ಹೆಚ್ಚು ಅನೌಪಚಾರಿಕ ಕ್ಷೇತ್ರದ ಕಾರ್ಮಿಕರು ಬಡತನದ ಸ್ಥಿತಿಗೆ ತಲುಪಿದ್ದಾರೆ ಅಥವಾ ನಿಧಾನವಾಗಿ ಆರ್ಥಿಕ ಮುಗ್ಗಟ್ಟಿನ ಸ್ಥಿತಿಗೆ ಇಳಿಯುತ್ತಿದ್ದಾರೆ. ಈ ಕ್ಷೇತ್ರದಲ್ಲಿ ತೀವ್ರ ಆಘಾತಕ್ಕೆ ಒಳಗಾದ ಉದ್ಯೋಗಗಳೆಂದರೆ ಹೋಟೆಲ್ ಮತ್ತು ಪ್ರವಾಸೋದ್ಯಮ, ಬೃಹತ್ ಮತ್ತು ಸಣ್ಣ ಮಾಲುಗಳು, ಕಟ್ಟಡ ನಿರ್ಮಾಣ, ಸಣ್ಣ ವ್ಯಾಪಾರ ಮತ್ತು ಸಗಟು ವ್ಯಾಪಾರೋದ್ಯಮ, ಸಿದ್ಧ ಉಡುಪುಗಳ ತಯಾರಿಕಾ ಘಟಕಗಳು ಮತ್ತು ಐ.ಟಿ. ಉದ್ಯಮ. ಈ ಎಲ್ಲ ಕ್ಷೇತ್ರಗಳಲ್ಲಿ ಉದ್ಯೋಗಗಳನ್ನು ಕಳೆದುಕೊಂಡವರು ಅಥವಾ ವೇತನ ಕಡಿತವನ್ನು ಎದುರಿಸುತ್ತಿರುವವರು ಕೋಟ್ಯಾಂತರ ಮಂದಿ. ಈ ಪರಿಸ್ಥಿತಿ ಕಡಿಮೆ ಆದಾಯ ಪಡೆಯುವ ಕೌಶಲ್ಯ ವಂಚಿತ ಕಾರ್ಮಿಕ ವರ್ಗಕ್ಕೆ ನಮ್ಮ ದೇಶದಲ್ಲಷ್ಟೇ ಅಲ್ಲ, ಇಡೀ ವಿಶ್ವದಲ್ಲೇ, ಅದರಲ್ಲೂ ಅಭಿವೃದ್ಧಿ ಅಸಮತೋಲನವನ್ನು ಎದುರಿಸುತ್ತಿರುವ ಎಲ್ಲ ದೇಶಗಳಿಗೂ ಅನ್ವಯಿಸುತ್ತದೆ. ಈ ವರ್ಗದಲ್ಲಿರುವ ಉದ್ಯೋಗಿಗಳ ಪ್ರಮಾಣ ಜಾಗತಿಕ ಮಟ್ಟದಲ್ಲಿ ಶೇಕಡಾ 60ರಷ್ಟಿದೆ ಎನ್ನುವುದು ಭವಿಷ್ಯದ ಬಗ್ಗೆ ಭಯ ಹುಟ್ಟಿಸುವಂಥ ಒಂದು ಸಂಗತಿಯೇ ಸರಿ.

ಮೇಲೆ ಪ್ರಸ್ತಾಪಿಸಿದ ವಿಚಾರಗಳು ಕೇವಲ ಅನೌಪಚಾರಿಕ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದಲ್ಲ. ಉದ್ಯೋಗ ಕ್ಷೇತ್ರದ ಈ ಅನೌಪಚಾರಿಕರಣ ಪ್ರಕ್ರಿಯೆ, ಈ ಹೊತ್ತು ಸಂಘಟಿತ ಅಥವಾ ಔಪಚಾರಿಕ ವಲಯದಲ್ಲಿರುವ ಸಂಸ್ಥೆಗಳನ್ನೂ ಪಸರಿಸುತ್ತಿದೆ. ಇದನ್ನೇ 'ಔಪಚಾರಿಕ ವಲಯದಲ್ಲಿರುವ ಅನೌಪಚಾರಿಕ ಉದ್ಯೋಗಗಳು' ಎಂದು ಕರೆಯಲಾಗುತ್ತಿದೆ. ಉದಾಹರಣೆಗೆ ಶಿಕ್ಷಣ ಕ್ಷೇತ್ರವನ್ನೇ ತೆಗೆದುಕೊಳ್ಳೋಣ. ಇಂದು ಬಹುತೇಕ ರಾಜ್ಯ ವಿಶ್ವವಿದ್ಯಾನಿಲಯಗಳಲ್ಲಿ ಬೋಧನೆ ನಡೆಯುತ್ತಿರುವುದು ಅತಿಥಿ ಉಪನ್ಯಾಸಕರಿಂದ.. ಕೆಲ ವಿಶ್ವವಿದ್ಯಾನಿಲಯಗಳ, ಅನೇಕ ಕಾಲೇಜುಗಳ ಕೆಲ ವಿಭಾಗಗಳಲ್ಲಿ ಖಾಯಂ ಅಧ್ಯಾಪಕರು ಒಬ್ಬರೂ ಇಲ್ಲದಿರುವಂಥ ಪರಿಸ್ಥಿತಿಯೂ ಇದೆ. ಇವರಲ್ಲನೇಕರು ಒಂದು ಅಥವಾ ಎರಡು ದಶಕಗಳಿಂದ ಉದ್ಯೋಗ ಅಭದ್ರತೆಯನ್ನು ಎದುರಿಸುತ್ತಿದ್ದಾರೆ. ಓರ್ವ ಅಧ್ಯಾಪಕ ಅತಿಥಿಯೇ ಆಗಲಿ ಖಾಯಂ ಆಗಲಿ ಅದಕ್ಕೆ ಮಾಡಿಕೊಳ್ಳಬೇಕಾದ ತಯಾರಿ, ಅಳವಡಿಸಿಕೊಳ್ಳಬೇಕಾದ ಬೋಧನಾ ಶೈಲಿ ಮತ್ತು ಕ್ರಮಗಳೆಲ್ಲ ಒಂದೇ ಇರಬೇಕು ತಾನೇ? ಕಾಲದಿಂದ ಕಾಲಕ್ಕೆ ಅವರಿಗೆ ದೊರೆಯುವ ವೇತನದಲ್ಲಿ ಸ್ವಲ್ಪ ಮಟ್ಟಿನ ಹೆಚ್ಚಳವಾಗುತ್ತಾ ಬಂದಿದ್ದರೂ ಇವರಿಗೆ ಮತ್ತು ಖಾಯಂ ಉಪನ್ಯಾಸಕರಿಗೆ ದೊರೆಯುವ ವೇತನದ ನಡುವೆ ದೊಡ್ಡ ಅಂತರವಿದೆ. ಅನೇಕ ಸಂದರ್ಭಗಳಲ್ಲಿ ವೇತನ ನೀಡಿಕೆಯಲ್ಲಿ ವಿಳಂಬ, ಎರಡು ಅಥವಾ ಹೆಚ್ಚಿನ ಸಂಸ್ಥೆಗಳಲ್ಲಿ ಕೆಲಸ ಮಾಡಬೇಕಾದಂತಹ ಅನಿವಾರ್ಯತೆ ಹಾಗೂ ಅವಶ್ಯಕತೆ– ಈ ಪರಿಸ್ಥಿತಿಗಳನ್ನೂ ಅತಿಥಿ ಉಪನ್ಯಾಸಕರು ಎದುರಿಸುತ್ತಿದ್ದಾರೆ. ಎಲ್ಲಕಿಂತ ಮಿಗಿಲಾಗಿ ತಾತ್ಕಾಲಿಕ ಉದ್ಯೋಗಿಗಳಿಂದಲೇ ಸಂಸ್ಥೆ ನಡೆಯಬಹುದು ಎಂಬ ಸಂದೇಶವನ್ನು ಈ ವ್ಯವಸ್ಥೆ ಕಳುಹಿಸುವುದರಿಂದ ಆಡಳಿತಾರೂಢ ವ್ಯವಸ್ಥೆಯೂ ನೇಮಕಾತಿ ಪ್ರಕ್ರಿಯೆಯನ್ನು ಮುಂದುಮುಂದಕ್ಕೆ ಹಾಕುತ್ತಾ ಬರುತ್ತಿರುವುದನ್ನು ನಾವು ದೇಶದ ಅನೇಕ ಕಡೆಗಳಲ್ಲಿ ಕಾಣಬಹುದು. ಇಳಿಮುಖವಾಗುತ್ತಿರುವ ಸಾಮಾಜಿಕ ವೆಚ್ಚ, ಬರಿದಾಗುತ್ತಿರುವ ಸಾರ್ವಜನಿಕ ಬೊಕ್ಕಸ ಹಾಗೂ ಜನಪರವಲ್ಲದ ಅನೇಕ ಅಭಿವೃದ್ಧಿ ಯೋಜನೆಗಳು– ಇವುಗಳೆಲ್ಲ ಮುಂಬರುವ ದಿನಗಳಲ್ಲಿ ಔಪಚಾರಿಕ ವಲಯದ ಅನೌಪಚಾರಿಕ ಉದ್ಯೋಗಗಳ ಹೆಚ್ಚಳಕ್ಕೆ ಕಾರಣವಾಗುವುದರಲ್ಲಿ ಸಂದೇಹವಿಲ್ಲ.



> ಲಾಕ್‌ಡೌನ್ ಸಮಯದಲ್ಲಿ ಈ ಉದ್ಯೋಗಗಳಿಂದ ಅವರು ಹೊರದೂಡಲ್ಪಟ್ಟರು., ಕೋವಿಡ್ ನಂತರದ ಕಾಲದಲ್ಲಿ ಉದ್ಯೋಗಾವಕಾಶಗಳು ತೆರೆದು ಕೊಂಡಾಗ ಮಹಿಳೆಯರು ಮಾಡುತ್ತಿದ್ದ ಅನೇಕ ಕೆಲಸಗಳಿಗೆ ಪುರುಷರು ಹೋಗಲಾರಂಭಿಸಿದರು. ಮಹಿಳೆಯರ ಜೈವಿಕತೆಯ ಕಾರಣದಿಂದಾಗಿ ಅವರಿಗೆ ರಜೆ, ರಜೆ ಭತ್ಯೆ ಅಥವಾ ಶಿಶು ಪಾಲನಾ ವ್ಯವಸ್ಥೆ ಮುಂತಾದುವನ್ನು ಒದಗಿಸ ಬೇಕಾಗಬಹುದು ಎಂಬ ಕಾರಣವನ್ನು ಮುಂದಿಟ್ಟುಕೊಂಡು ಅನೇಕ ಉದ್ಯೋಗ ಸಂಸ್ಥೆಗಳು ಪುರುಷರನ್ನು ನೇಮಕ ಮಾಡಿಕೊಳ್ಳಲಾರಂಭಿಸಿದವು. 2010 ರಿಂದ 2020ರವರೆಗೆ ಮನೆಯಿಂದ ಹೊರಗೆ ದುಡಿಯುತ್ತಿದ್ದ ಮಹಿಳೆಯರ ಸಂಖ್ಯೆ ಶೇಕಡಾ 26ರಿಂದ 19ಕ್ಕೆ ಇಳಿದಿದ್ದು, 2022ರ ವೇಳೆಗೆ ಈ ಪ್ರಮಾಣ ಶೇಕಡಾ 9ಕ್ಕೆ ಕುಸಿದಿತ್ತು ಎಂದು ಕೆಲ ಅಧ್ಯಯನಗಳು ಸೂಚಿಸುತ್ತಿವೆ.

ಹೆಚ್ಚುತ್ತಿರುವ ಉದ್ಯೋಗ ಅಭದ್ರತೆಯ ಪರಿಣಾಮವನ್ನು ಗಂಭೀರವಾಗಿ ಎದುರಿಸುತ್ತಿರುವವರು ಸಮಾಜದ ತಳ ಸ್ತರದಲ್ಲಿರುವ ವರ್ಗಗಳು. ಕೋವಿಡ್ ಪೂರ್ವದಲ್ಲಿಯೇ ಸಂಭವಿಸಿದ ಅಪನಗದೀಕರಣ ಸಾಮಾಜಿಕ–ಆರ್ಥಿಕ ಅನುಕೂಲಗಳಿಂದ ವಂಚಿತರಾದ ಜನಸಮುದಾಯಗಳ ಬದುಕಿನ ಮೇಲೆ ಗದಾ ಪ್ರಹಾರ ಮಾಡಿದ್ದು, ಲಾಕ್‌ಡೌನ್ ಅವರ ಜೀವನ ನಿರ್ವಹಣಾ ಮಾರ್ಗಗಳನ್ನು ಮುಚ್ಚುತ್ತಾ ಬಂತು. ಈ ಪರಿಸ್ಥಿತಿಯನ್ನು ಸಮಾಜಶಾಸ್ತ್ರೀಯ ಭಾಷೆಯಲ್ಲಿ 'ಹೊರಗುಳಿಯುವಿಕೆಯ ತೀವ್ರಗೊಳಿ ಸುವಿಕೆ' ಎಂದು ಗುರುತಿಸಬಹುದು. ವಿಶೇಷವಾಗಿ ಈ ಪ್ರಕ್ರಿಯೆಗೆ ಒಳಗಾದವರು ದಲಿತ–ಬುಡಕಟ್ಟು–ಅಲ್ಪಸಂಖ್ಯಾತ–ಹಿಂದುಳಿದ ವರ್ಗಗಳ ಅವಕಾಶ ವಂಚಿತರು. ಉನ್ನತ ಶಿಕ್ಷಣಾವಕಾಶಗಳ ಅಲಭ್ಯತೆ, ಮೇಲ್ಮುಖ ಸಾಮಾಜಿಕ–ಆರ್ಥಿಕ ಚಲನೆಯನ್ನು ಸಾಧಿಸಲು ಅಗತ್ಯವಾದ ಕೌಶಲಗಳನ್ನು ಪಡೆಯಲಾಗದ ಸ್ಥಿತಿ, ಜೀವನ ನಿರ್ವಹಣಾ ಮಾರ್ಗಗಳು ಮುಚ್ಚಿದಾಗ ಪರ್ಯಾಯ ಪಥಗಳನ್ನು ಹುಡುಕಿಕೊಳ್ಳಲಾಗದ ಅಸಹಾಯಕ ಸ್ಥಿತಿ–ಇವುಗಳು ಕ್ರಮೇಣ ಬಡತನದ ವಲಯದ ವಿಸ್ತೃತಿಗೆ ಕಾರಣವಾಗುತ್ತಾ ಹೋದವು. ಅಧ್ಯಯನ ವರದಿ ಯೊಂದರ ಪ್ರಕಾರ ತೀವ್ರ ಬಡತನವನ್ನು ಎದುರಿಸುತ್ತಿದ್ದ 20%ರಷ್ಟು ಕುಟುಂಬಗಳು ತಮ್ಮ ಎಲ್ಲ ಆದಾಯ ಮೂಲಗಳನ್ನೂ ಸಂಪೂರ್ಣವಾಗಿ ಕಳೆದು ಕೊಂಡಿವೆ.

ಲಾಕ್‌ಡೌನ್‌ನ ನಕಾರಾತ್ಮಕ ಪರಿಣಾಮಗಳ ತೀವ್ರತೆಯನ್ನು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಅನುಭವಿಸಿದವರು ಸಮಾಜದ 'ಉಳ್ಳ ವರ್ಗ'ಗಳು. ಔಪಚಾರಿಕ ಆರ್ಥಿಕ ವಲಯದಲ್ಲಿ ಇಂದಿಗೂ ಅತೀ ಹೆಚ್ಚಿನ ಸಂಖ್ಯೆಯಲ್ಲಿರುವ ಜಾತಿ ಮತ್ತು ವರ್ಗ ಶ್ರೇಣಿಯ ಮೇಲಿನ ಸ್ತರಗಳಲ್ಲಿರುವ ಕುಟುಂಬಗಳ ಜೀವನಶೈಲಿಯ ಮೇಲಾಗಲಿ, ಮಾಸಿಕ ವೇತನಗಳಿಕೆಯ ಮಾರ್ಗಗಳ ಮೇಲಾಗಲಿ, ಖಾಯಂ ಸರ್ಕಾರಿ ಉದ್ಯೋಗಗಳಲ್ಲಿರುವವರ ಮೇಲಾಗಲಿ ಲಾಕ್‌ಡೌನ್ ಗಂಭೀರವಾದ ಪರಿಣಾಮಗಳನ್ನು ಬೀರಲಿಲ್ಲ ಎನ್ನುವ ವಿಚಾರವನ್ನು ನಾವು ಕೋವಿಡ್ ಕೇಂದ್ರಿತ ಚರ್ಚೆಗಳಲ್ಲಿ ತರುವುದು ಬಹು ಮುಖ್ಯ.

ಲಾಕ್‌ಡೌನ್ ತಂದಿಟ್ಟ ಉದ್ಯೋಗ ರಹಿತ ಸ್ಥಿತಿಯ ಪರಿಣಾಮವನ್ನು ಅತ್ಯಂತ ಗಹನವಾದ ರೀತಿಯಲ್ಲಿ ಎದುರಿಸಿದವರು ಮಹಿಳೆಯರು. ಲಿಂಗ ಅಸಮಾನತೆ ಜಾತಿ–ಧರ್ಮ–ಜನಾಂಗ–ವರ್ಗ–ಗ್ರಾಮ–ನಗರ–ಈ ಎಲ್ಲ ಪ್ರಕಾರದ ಅಸಮಾನತೆಯನ್ನು ಭೇದಿಸುವಂಥಹುದು. ಕೋವಿಡ್ ಬಂದ ಪ್ರಥಮ ವರ್ಷದಲ್ಲೇ ದೇಶದ ದುಡಿಯುವ ವರ್ಗದಲ್ಲಿ ಮಹಿಳಾ ಭಾಗವಹಿಸುವಿಕೆಯ ಪ್ರಮಾಣ ಗಮನಾರ್ಹ ಇಳಿಕೆಯನ್ನು ಕಂಡಿತು. ಕೋವಿಡ್ ಇರಲಿ ಇಲ್ಲದಿರಲಿ ಗೃಹ ಕೃತ್ಯಗಳ ಜವಾಬ್ದಾರಿ, ಮಕ್ಕಳ– ಹಿರಿಯರ– ಅನಾರೋಗ್ಯ ಪರಿಸ್ಥಿತಿಗಳನ್ನು ಎದುರಿಸುತ್ತಿರುವವರ ಪಾಲನೆ ಮುಂತಾದ ಲಿಂಗ ಸ್ಥಿರಮಾದರಿಗಳನ್ನು ನಿಭಾಯಿಸುವುದರ ಜೊತೆ ಜೊತೆಗೆ ಕೌಟುಂಬಿಕ ದೌರ್ಜನ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಎದುರಿಸಬೇಕಾಗಿದ್ದು ಹಾಗೂ ಅವರು ಮನೆಯಿಂದ ಹೊರಗೆ ಮಾಡುತ್ತಿದ್ದ ಕೆಲಸಗಳಿಂದ ಹೊರಗಿಡಲ್ಪಟ್ಟದ್ದು, ಇವೆಲ್ಲ ಮಹಿಳೆಯರ ಸೀಮಾಂತೀಕರವನ್ನು ಮತ್ತಷ್ಟು ಉಲ್ಬಣಗೊಳಿಸಿತು.

ಮನೆಗೆಲಸ, ತೋಟಗಾರಿಕೆ, ಪ್ರವಾಸೋದ್ಯಮ, ಮಾಲುಗಳು, ಕಟ್ಟಡ ನಿರ್ಮಾಣ ಕಾರ್ಯ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿದ್ದು ಲಾಕ್‌ಡೌನ್ ಸಮಯದಲ್ಲಿ ಈ ಉದ್ಯೋಗಗಳಿಂದ ಅವರು ಹೊರದೂಡಲ್ಪಟ್ಟರು., ಕೋವಿಡ್ ನಂತರದ ಕಾಲದಲ್ಲಿ ಉದ್ಯೋಗಾವಕಾಶಗಳು ತೆರೆದು ಕೊಂಡಾಗ ಮಹಿಳೆಯರು ಮಾಡುತ್ತಿದ್ದ ಅನೇಕ ಕೆಲಸಗಳಿಗೆ ಪುರುಷರು ಹೋಗಲಾರಂಭಿಸಿದರು. ಮಹಿಳೆಯರ ಜೈವಿಕತೆಯ ಕಾರಣದಿಂದಾಗಿ ಅವರಿಗೆ ರಜೆ, ರಜೆ ಭತ್ಯೆ ಅಥವಾ ಶಿಶು ಪಾಲನಾ ವ್ಯವಸ್ಥೆ ಮುಂತಾದುವನ್ನು ಒದಗಿಸಬೇಕಾಗಬಹುದು ಎಂಬ ಕಾರಣವನ್ನು ಮುಂದಿಟ್ಟುಕೊಂಡು ಅನೇಕ ಉದ್ಯೋಗ ಸಂಸ್ಥೆಗಳು ಪುರುಷರನ್ನು ನೇಮಕ ಮಾಡಿಕೊಳ್ಳಲಾರಂಭಿಸಿದವು. 2010 ರಿಂದ 2020ರವರೆಗೆ ಮನೆಯಿಂದ ಹೊರಗೆ ದುಡಿಯುತ್ತಿದ್ದ ಮಹಿಳೆಯರ ಸಂಖ್ಯೆ ಶೇಕಡಾ 26ರಿಂದ 19ಕ್ಕೆ ಇಳಿದಿದ್ದು, 2022ರ ವೇಳೆಗೆ ಈ ಪ್ರಮಾಣ ಶೇಕಡಾ 9ಕ್ಕೆ ಕುಸಿದಿತ್ತು ಎಂದು ಕೆಲ ಅಧ್ಯಯನಗಳು ಸೂಚಿಸುತ್ತಿವೆ.

ಹೆಚ್ಚುತ್ತಿರುವ ನಗರ ಜನಸಂಖ್ಯೆ, ಈಗಾಗಲೇ ನಗರಗಳಿಗೆ ವಲಸೆ ಬಂದು ಜೀವನ ಮೂಲಗಳಾಗಿದ್ದ ಉದ್ಯೋಗಗಳನ್ನು ಕಳೆದುಕೊಂಡು ಜೀವನ ನಿರ್ವಹಣೆಗಾಗಿ ಕಷ್ಟ ಪಡುತ್ತಿರುವ ವರ್ಗ ಒಂದೆಡೆ, ಆರ್ಥಿಕ ಅಭಿವೃದ್ಧಿ ಮತ್ತು ಆಧುನೀಕರಣದ ಹುಚ್ಚು ಹೊಳೆಯಲ್ಲಿ ತೇಲುತ್ತಾ ಪ್ರಾಕೃತಿಕ ಸಂಪನ್ಮೂಲಗಳು ಹಾಗೂ ಜನರ ಜೀವನಾಧಾರಗಳನ್ನು ಕಿತ್ತೊಗೆಯುತ್ತಿರುವ ನವ–ಬಂಡವಾಳಶಾಹಿ ಸಂಸ್ಕೃತಿ ಮತ್ತೊಂದೆಡೆ–ಇವೆಲ್ಲ ಲಾಕ್‌ಡೌನ್ ಪರಿಣಾಮಗಳಿಂದ ಚೇತರಿಸಿಕೊಳ್ಳಲು ಕಷ್ಟಪಡುತ್ತಿರುವ ಜನ ಸಮುದಾಯಗಳನ್ನು ಮತ್ತಷ್ಟು ಸಂಕಷ್ಟದತ್ತ ತಳ್ಳುತ್ತಿವೆ. ಈಗಲಾದರೂ ಜನಪರವಾದ ಅಭಿವೃದ್ಧಿಯ ಬಗ್ಗೆ ಆಳುವ ವರ್ಗ ಕಾಳಜಿ ವಹಿಸದಿದ್ದರೆ ಭವಿಷ್ಯ ಈ ದೇಶದ ಅನೇಕರಿಗೆ ಅಸಹನೀಯ ಅನುಭವವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ರಾಜ್ಯ ವಿಧಾನಸಭಾ ಚುನಾವಣೆಗೆ ದಿನಗಣನೆ....


ನಾಟಕೀಯವಯ್ಯಾ ಈ ರಾಜಕೀಯ ರಂಗ

ಚುನಾವಣೆ ಹತ್ತಿರ ಬರುತ್ತಿದ್ದಂತೆ ನಮ್ಮ ಜನಪ್ರತಿನಿಧಿಗಳ ತಲೆಯಲ್ಲಿರುವ ಜವಾಬ್ದಾರಿಗಳೆಲ್ಲ ತಲೆ, ಜೊತೆಗೆ ಹೆಗಲ ಮೇಲೆ ಬಂದು ಕೂರುತ್ತವೆ. ಐದು ವರ್ಷದಲ್ಲಿ ಮಾಡದೇ ಇರುವ ಹಾಗೂ ಆಗದೆ ಇರುವ ಕೆಲಸಗಳೆಲ್ಲ ಐದು ತಿಂಗಳಲ್ಲಿ ಆಗುತ್ತವೆ. ರಸ್ತೆ ಕಾಮಗಾರಿ, ವಿದ್ಯುತ್, ನೀರು, ಹೀಗೆ ಜನರ ಸಮಸ್ಯೆಗಳನ್ನು ಒಂದೇ ಬಾರಿ ಮಾಡಿ ಮುಗಿಸಿ ಅವರ ಕಣ್ಣಲ್ಲಿ, ಮನಸ್ಸಲ್ಲಿ ಜನಾರ್ಧನನಾಗಿ ಉಳಿಯುವ ಬಯಕೆ.

ಅಲ್ಲದೇ ರಾಜಕೀಯ ಪಕ್ಷಗಳು ಸಹ ಏನು ಹಿಂದೆ ಉಳಿದಿಲ್ಲ. ನಾಯಕರು, ತಮ್ಮ ಪಕ್ಷವನ್ನು ಅಧಿಕಾರಕ್ಕೆ ತರಲು ರಾಜ್ಯಾದ್ಯಂತ ಪ್ರತಿ ಹಳ್ಳಿ, ಗ್ರಾಮ ಹಾಗೂ ಕುಗ್ರಾಮಗಳಿಗೆ ಯಾತ್ರೆ ನಡೆಸುತ್ತಿದ್ದಾರೆ. ಆದರೆ ಅಧಿಕಾರದಲ್ಲಿದ್ದಾಗ ಅಂತ ಒಂದು ಗ್ರಾಮ, ಕುಗ್ರಾಮ ಇತ್ತು ಎಂಬುದನ್ನು ಯಾರೂ ಗಮನಿಸುವುದಿಲ್ಲ.

ಈಗ ಎಲ್ಲೆಂದರಲ್ಲಿ ಸರ್ಕಾರದ ಅಭಿವೃದ್ಧಿಯ ಪೋಸ್ಟರ್. ಆದರೆ ಆ ಕೆಲಸ ಸಂಪೂರ್ಣವಾಗಿ ಆಗಿದೆಯಾ ಎಂಬುದು ಯಾರಿಗೂ ತಿಳಿದಿಲ್ಲ. ಆದರೆ ಹಿಂದೆ ಎಲ್ಲೆಂದರಲ್ಲಿ ಪೋಸ್ಟರ್ ಹಾಗೂ ಬ್ಯಾನರ್‌ಗಳನ್ನು ಹಾಕುವುದನ್ನು ಖಂಡಿಸಿ, ನಿಯಮ ಉಲ್ಲಂಘನೆ ಮಾಡಿದರೆ ಕಠಿಣ ಕ್ರಮ ಎಂದರು. ಆದರೆ ಈಗ ಸರ್ಕಾರ ಮಾಡುತ್ತಿರುವುದಾದರೂ ಏನು.


ಇನ್ನು ಮೈಸೂರು–ಬೆಂಗಳೂರು ಹೆದ್ದಾರಿಯ ವಿಚಾರಕ್ಕೆ ಬಂದರೆ, ಅದರ ಕ್ರೆಡಿಟ್ ಯಾರಿಗೆ ಸಲ್ಲಬೇಕು ಎಂಬ ವಿಷಯ ಗಿರಕಿ ಹೊಡೆಯುತ್ತಿದೆ. ಪ್ರತಿಯೊಬ್ಬರೂ ಆದರ ಲಾಭ ಪಡೆಯಲು ತುದಿಗಾಲಲ್ಲಿ ನಿಂತಿರುವವರೇ. ಆದರೆ ಹಿಂದೆ ಮಳೆಯಿಂದ ನೀರು ತುಂಬಿ, ಸುತ್ತ–ಮುತ್ತಲ ಹಳ್ಳಿಗಳಿಗೆ ತೊಂದರೆಯಾಗಿ, ಇದಕ್ಕೆಲ್ಲ ಹೆದ್ದಾರಿ ನಿರ್ಮಾಣ ಕಾರಣ ಎಂದಾಗ ಅದರ ಜವಾಬ್ದಾರಿಗೆ



ಯಾರೂ ಕೂಡ ಮುಂದೆ ಬರಲಿಲ್ಲ, ಮಾತಾಡಲಿಲ್ಲ.

ಇನ್ನು ಈ ವರ್ಷದ ಬಜೆಟ್ ವಿಚಾರಕ್ಕೆ ಬಂದರೆ ಬಿಪಿಎಲ್ ಪಡಿತರದಾರರಿಗೆ ಹತ್ತು ಕೆಜಿ ಅಕ್ಕಿ ಎಂದು ಘೋಷಣೆ ಮಾಡಿದರು. ಆದರೆ ನೆನಪಿನಲ್ಲಿಡಬೇಕಾದ ಮಹತ್ವದ ವಿಚಾರವೇನೆಂದರೆ; ಇದೇ ಸರ್ಕಾರ ಅಧಿಕಾರಕ್ಕೆ ಬಂದಾಗ ಬಿಪಿಎಲ್ ಪಡಿತರದಾರರಿಗೆ ಧಾನ್ಯಗಳ ಕೆಜಿಗಳನ್ನು ಕಡಿಮೆಗೊಳಿಸಿತ್ತು. ಇನ್ನು ಪ್ರತಿ ಕಾಮಗಾರಿ ಅಥವಾ ಸರ್ಕಾರಿ ಕಾರ್ಯಕ್ರಮದಲ್ಲಿ ನಮ್ಮ ಜನಪ್ರತಿನಿಧಿಗಳ ಚಿತ್ರಗಳು, ಫ್ಲೆಕ್ಸ್‌ಗಳಲ್ಲಿ ರಾರಾಜಿಸಬೇಕು. ಆಹ್ವಾನ ಪತ್ರಿಕೆಗಳಲ್ಲಿ ಅವರ ಹೆಸರು ಇರಬೇಕು. ಇಲ್ಲವೆಂದರೆ ಕೋಪಗೊಳ್ಳುತ್ತಾರೆ. ಚುನಾವಣೆ ಹತ್ತಿರ ಬಂದಾಗ ತಮ್ಮ ಕ್ಷೇತ್ರದ ಜನರ ಮನೆ ಮನೆಗೆ ಹೋಗಿ ಮತ ಕೇಳುವ ಇವರು, ಅದೇ ಚುನಾವಣೆ ಮುಗಿದ ನಂತರ ಜನರ ಕಣ್ಣಿಂದ ಮಾಯವಾಗಿ ಬಿಡುತ್ತಾರೆ.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಎಂದು ಜನರ ಕಾಲಿಗೆ ಬೀಳುವ ನಮ್ಮ ಜನಪ್ರತಿನಿಧಿಗಳು. ಚುನಾವಣೆಯಲ್ಲಿ ಗೆದ್ದ ನಂತರ ಆ ಪ್ರಜೆ ಎಂಬುವ ಪ್ರಭು ಪ್ರತಿಯೊಂದಕ್ಕೂ ತಮ್ಮ ಕಾಲಿಗೆ ಬೀಳುವ ಹಾಗೆ ಮಾಡುತ್ತಾರೆ. ಆದರೆ ಒಂದು ಗಮನಿಸಬೇಕಾದ ವಿಷಯವೇನೆಂದರೆ ಮೊದಲು ಇದ್ದಂತಹ ರಾಜಕೀಯದ ಆಡಂಬರ ಈಗ ಅಷ್ಟು ಇಲ್ಲ ಕಾರಣ, ನಮ್ಮ ಪ್ರಜೆಗಳು ಹಾಗೂ ಯುವಜನರು ರಾಜಕೀಯದ ಹೊರ ಹಾಗೂ ಒಳ ಕೆಲಸಗಳನ್ನು ಕೂಲಂಕಷವಾಗಿ ಗಮನಿಸುತ್ತಿದ್ದಾರೆ.



ರವಿ ಜೋಷಿ
ಈ ಹಿಂದೆ ಕ್ಯಾಬಿನೆಟ್ ಸೆಕ್ರೆಟರಿಯೇಟ್‌ನಲ್ಲಿದ್ದವರು

ಮೊನ್ನೆ ಯಾವುದೋ ಮಾರ್ಗವಾಗಿ ಹೋಗಬೇಕಾದರೆ, ಒಬ್ಬ ಶಾಸಕರು ಗೂಡ್ಸ್ ಗಾಡಿಯಲ್ಲಿ ನಿಂತು ಮೈಕ್‌ನಲ್ಲಿ ಪ್ರಚಾರ ಮಾಡುತಿದ್ದರು. ಮುಂಚೆ ಆದರೆ ಒಂದಷ್ಟು ಜನ ಸೇರುತಿದ್ದರು ಇಲ್ಲ ಒಂದಷ್ಟು ಜನ ನಿಂತು ನೋಡುತಿದ್ದರು. ಆದರೆ ಅಂದು ಯಾವುದು ಇರಲಿಲ್ಲ. ಜನರು ಸಹ ಅವರವರ ಕೆಲಸ–ಕಾರ್ಯದಲ್ಲಿ ನಿರತರಾಗಿದ್ದರು. ಅವರಿಗೂ ಈಗೀಗ ತಿಳಿಯುತ್ತಿದೆ–ದುಡಿದರೆ ಬಾಳು ಇಲ್ಲವೇ ಗೋಳು ಎಂಬುದು. ಯಾವಾಗ ಒಬ್ಬ ವ್ಯಕ್ತಿ ಚುನಾವಣೆಯಲ್ಲಿ ಹಣವನ್ನು ಖರ್ಚು ಮಾಡದೇ, ಬರಿ ತನ್ನ ಕೆಲಸದಿಂದ ಹೆಸರು ಮಾಡಿ ಚುನಾವಣೆಯಲ್ಲಿ ಗೆಲುತ್ತಾನೋ ಅವನದು ನಿಜವಾದ ಗೆಲುವು. ಅದು ಪ್ರಜಾಪ್ರಭುತ್ವದ ಗೆಲುವು. ಇನ್ನೇನು ಚುನಾವಣೆ ಹತ್ತಿರದಲ್ಲಿ ಇದೆ. ಜನಪ್ರತಿನಿಧಿಗಳು ನಿಮ್ಮ ಮನೆಯ ಬಾಗಿಲಿಗೆ ಬರುತ್ತಾರೆ. ಆಗ ಅವರು ನಿಮಗಾಗಿ ಈ ಐದು ವರ್ಷದಲ್ಲಿ ಏನು ಮಾಡಿದ್ದಾರೆ ಹಾಗೂ ಮುಂದಿನ ಐದು ವರ್ಷದಲ್ಲಿ ನಿಮಗಾಗಿ ಏನು ಮಾಡುತ್ತಾರೆ ಎಂದು ಕೇಳಿ, ನಂತರ ಉತ್ತಮರಿಗೆ ನಿಮ್ಮ ಮತ ನೀಡಿ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಟೋಲ್ ಸಂಗ್ರಹ

3 ವಾರದಲ್ಲಿ ಪ್ರತಿಕ್ರಿಯೆಗೆ ಹೆದ್ದಾರಿ ಪ್ರಾಧಿಕಾರಕ್ಕೆ ಹೈಕೋರ್ಟ್ ಚಾಲನೆ

ಬೆಂಗಳೂರು, ಮಾ. 15– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಟೋಲ್ ಸಂಗ್ರಹ ಕುರಿತು ಸಾರ್ವಜನಿಕರ ಆಕ್ಷೇಪಣೆಗಳ ಬಗ್ಗೆ ಮಾಧ್ಯಮಗಳ ವರದಿ ಆಧರಿಸಿ ಸ್ವಯಂಪ್ರೇರಿತವಾಗಿ ವಿಚಾರಣೆಗೆತ್ತಿಕೊಂಡಿರುವ ಹೈಕೋರ್ಟ್ ಈ ಸಂಬಂಧ ಮೂರು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ನೋಟಿಸ್ ಜಾರಿಗೊಳಿಸಿದೆ. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ರವಾಳೆ ಮತ್ತು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ವಿಭಾಗೀಯ ಪೀಠವು ಬೆಂಗಳೂರು–ಕನಕಪುರ ಹೆದ್ದಾರಿ ಕಾಮಗಾರಿ ಕುರಿತು 2022ರಲ್ಲಿ ದಾಖಲಾಗಿದ್ದ ಅರ್ಜಿ ವಿಚಾರಣೆ ಬುಧವಾರ ನಡೆಯುತ್ತಿದ್ದ ವೇಳೆ ಪೀಠವು ಬೆಂಗಳೂರು–ಕನಕಪುರ ಹೆದ್ದಾರಿ ಸಮಸ್ಯೆ ಮತ್ತು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಸಮಸ್ಯೆ ಒಂದೇ ರೀತಿಯದ್ದಾಗಿದೆ ಎಂದು ಅಭಿಪ್ರಾಯಪಟ್ಟಿದೆ. ಎಕ್ಸ್‌ಪ್ರೆಸ್ ವೇ ಕಾಮಗಾರಿ ಮುಗಿಯುವ ಮುನ್ನವೇ ಟೋಲ್ ಸಂಗ್ರಹಿಸುತ್ತಿರುವ ಹಾಗೂ ಫಾಸ್ಟ್‌ಟ್ಯಾಗ್ ಇಲ್ಲದೇ ಮ್ಯಾನ್ಯುಯಲ್ ಆಗಿ ಟೋಲ್ ಸಂಗ್ರಹ ಮಾಡುತ್ತಿರುವುದು ಸೇರಿದಂತೆ ಕೆಲವು ಆರೋಪಗಳ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹೈಕೋರ್ಟ್ ಸೂಚಿಸಿದೆ. ಎಕ್ಸ್‌ಪ್ರೆಸ್ ವೇ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಟೋಲ್ ಸಂಗ್ರಹಿಸುತ್ತಿರುವ ಬಗ್ಗೆ ವಿಚಾರಣೆಯನ್ನು ಏಪ್ರಿಲ್ 11ಕ್ಕೆ ಮುಂದೂಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WALK - IN
for B.E./ MCA Students @ Diliber info Systems on 17th Mar 2023 & on 20th Mar 2023 Freshers only (30+ openings) #15 FES 2nd Stage Kesare, Naidu Nagara Main Road, Near KSRTC Satellite BUS Stand, Mysore - 570007
9663579654

AL-KABIR SCHOOL
(English Medium) S.S.Nagar, Bannimantap, 'B' Layout, Mysore - 570015
TEACHERS REQUIRED
1) NST / Montessori Trained
2) PUC, D.Ed (Arts / Science / Maths)
3) B.A., B.Ed, (Hindi, Kannada, Histroy & English)
4) B.Sc, B.Ed, (CBZ & PCMB)
5) Physical Education (C.P.Ed / B.P.Ed)
Admissions open for LKG to Xth Standard (English Medium) - 2023-2024 (Timing 10.30am to 1.00 pm. Contact:
9972166786

ಮಾರಾಟಕ್ಕಿದೆ
20x30 ಡ್ಯೂಪ್ಲೆಕ್ಸ್ ಹೊಸಮನೆ 68 ಲಕ್ಷ
30x40 ಸೈಟ್ ದಟ್ಟಗಳ್ಳಿ
20x30 ಸೈಟ್ ದಟ್ಟಗಳ್ಳಿ 25 ಲಕ್ಷ
ಹಳೆಮನೆ–ಹೊಸಮನೆ ಮಾರುವವರು ಕೊಳ್ಳುವವರು
9945042875

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಮತ್ತು ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಹುಡುಗಿಯರು / ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 8000 ದಿಂದ 11 ಸಾವಿರದವರೆಗೆ (ಅನುಭವದ ಆಧಾರದ ಮೇಲೆ). ಸಮಯ ಬೆ. 9.30 ಯಿಂದ ರಾತ್ರಿ 9.00 ರವರೆಗೆ. ಸ್ಥಳ: ಹೆಬ್ಬಾಳ್, ಅಗ್ರಹಾರ, ನಜರ್‌ಬಾದ್ ಹಾಗೂ ಕೆ.ಜಿ.ಕೊಪ್ಪಲ್, ಮೈಸೂರು. ಸ್ಥಳೀಯರಿಗೆ ಆದ್ಯತೆ. ಸಂಪರ್ಕಿಸಿ:
9986311444 / 6361227510

ಮನೆ ಭೋಗ್ಯ / ಬಾಡಿಗೆಗೆ ಲಭ್ಯವಿದೆ
2BHK ಮೊದಲ ಮಹಡಿ ಪೂರ್ವ–ಪಶ್ಚಿಮ ಬಾಗಿಲು ಕಾಶಿಪತಿ ಅಗ್ರಹಾರ ಲಕ್ಷ್ಮೀ ಥಿಯೇಟರ್ ಹಿಂಭಾಗ
9606378026

ನಟ ನಟಿಯರು ಬೇಕಾಗಿದ್ದಾರೆ
ಹೊಸದಾಗಿ ಪ್ರಾರಂಭವಾಗಿರುವ ಚಿತ್ರ, ನಟ, ನಟಿಯರ ವಯೋಮಿತಿ 18 ರಿಂದ 40 ವರ್ಷ, ಸಂದರ್ಶನ ದಿನಾಂಕ: 19–03–2023 ಭಾನುವಾರ, ಸಮಯ: 10 ರಿಂದ 5 ರವರೆಗೆ, ಸ್ಥಳ: ರಂಗಾಂತರಂಗ ಮೈಸೂರು (ರಿ), ಅಕ್ಷಯ ಭಂಡಾರ ಹತ್ತಿರ, #2346, ಕುವೆಂಪುನಗರ, ಮೈಸೂರು.
7975096243 / 9448390707

ಬೇಕಾಗಿದ್ದಾರೆ
ಡ್ರೈವರ್‌ಗಳು ಹಾಗೂ ಲೋಡರ್‌ಗಳು ಬೇಕಾಗಿದ್ದಾರೆ. ಡ್ರೈವರ್‌ಗಳಿಗೆ ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ.
7829668666

ಬೇಕಾಗಿದ್ದಾರೆ
ಮೆಸ್ ಹೋಟೆಲ್ ಕೆಲಸಕ್ಕೆ Helper ಹುಡುಗರು, ದೋಸೆ Expert ಹಾಗೂ Supplier ಕೆಲಸಕ್ಕೆ (ಹುಡುಗರು, ಹುಡುಗಿಯರು) ಬೇಕಾಗಿದ್ದಾರೆ. (ರೂಂ ವ್ಯವಸ್ಥೆ ಇದೆ) (ಶಾರದಾದೇವಿನಗರ, ಕುವೆಂಪುನಗರ, ರಾಜಾರಾಜೇಶ್ವರಿನಗರ, ದಟ್ಟಗಳ್ಳಿ, ಹಿನಕಲ್, ಬೋಗಾದಿ) ಹತ್ತಿರದವರಿಗೂ ಆದ್ಯತೆ ಇದೆ. ಸಂಪರ್ಕಿಸಿ:
7795518038 / 8884208814

ವಧು ಬೇಕಾಗಿದ್ದಾರೆ
32 ವರ್ಷದ ಗೌಡ ಸಮುದಾಯದ ವರನಿಗೆ ವಧು ಬೇಕಾಗಿದ್ದಾರೆ. (ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ). ಸಂಪರ್ಕಿಸಿ:
9738410632


ಸೈಟುಗಳು ಮಾರಾಟಕ್ಕಿವೆ
DTCP APPROVED
ವರುಣ ಹತ್ತಿರ 30X40 ಅಳತೆಯ ನಿವೇಶನಗಳು ಮಾರಾಟಕ್ಕಿವೆ.
80% ಬ್ಯಾಂಕ್ ಲೋನ್ ದೊರೆಯುತ್ತದೆ.
Rs. 18 Lakh Onwards
Contact: 9945111044

SITE FOR SALE
40x75 West facing site at RT Nagar (Keragalli) is available for sale. Brokers please Excuse. Only genuine buyers can contact owner at
96633 74402

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

SITES FOR SALE
MUDA Approved, Cauvery Enclave
40x60, 30x40, 20x30
In between Manipal & NH Hospital
LOAN AVAILABLE from all major Banks.
8971119292/9611223444

ಉಚಿತ!!! ಉಚಿತ!!! ಉಚಿತ!!!
ಉಚಿತ ಟೈಲರಿಂಗ್ ಮಷೀನ್ ರಿಪೇರಿ / ಎಕ್ಸ್ಚೇಂಜ್ ಮೇಳ



ಯುಗಾದಿ ಹಬ್ಬದ ಪ್ರಯುಕ್ತ ಮಾರ್ಚ್ 17 ಮತ್ತು 18 ರಂದು ಉಚಿತ ಟೈಲರಿಂಗ್ ಮಷೀನ್ ರಿಪೇರಿ / ಎಕ್ಸ್ಚೇಂಜ್ ಮೇಳ ಈ ಸದಾವಕಾಶವನ್ನು ಉಪಯೋಗಿಸಿಕೊಳ್ಳಿ, ಗಾನವಿ ಇಂಟರ್ ನ್ಯಾಷನಲ್: ಫೋರಮ್ ಮಾಲ್ ಹತ್ತಿರ, ಉದಯಗಿರಿ ಮೈಸೂರು.
9620546665 / 9620036665 / 0821-2977765

ಬೇಕಾಗಿದ್ದಾರೆ
ಇಂಡಸ್ಟ್ರಿಯಲ್ ಏರಿಯಾ ಕ್ಯಾಂಟೀನ್‌ನಲ್ಲಿ 12 ಗಂಟೆ ಸಮಯ ಕಾರ್ಯ ನಿರ್ವಹಿಸಲು ಮ್ಯಾನೇಜರ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
8123630683

ಬೇಕಾಗಿದ್ದಾರೆ
15 ವರ್ಷ ಸರ್ಕಾರದಿಂದ ಮಾನ್ಯತೆ ಪಡೆದಿರುವ ಮೈಸೂರಿನ ಹೆಸರಾಂತ ವರದಾನಿ ನರ್ಸಿಂಗ್ ಕಂಪನಿಗೆ ಹೋಮ್ ನರ್ಸಿಂಗ್ ಅನುಭವ ಇರುವ, ಇಲ್ಲದೆ ಇರುವ 8th, 9th, 10th, PUC ಪಾಸ್ ಫೇಲಾದ ಯುವಕ, ಯುವತಿಯರು ಬೇಕಾಗಿದ್ದಾರೆ. ಉಳಿದುಕೊಳ್ಳಲು ವ್ಯವಸ್ಥೆ ಊಟ ಲಭ್ಯವಿರುತ್ತದೆ. ಸಂಪರ್ಕಿಸಿ.
8123630683

ACTIVELY HIRING
DATA ENTRY ASSISTANT
Any Qualification, Fresher or Experienced
Typing speed 60-80 WPM
9 AM to 6 PM (MON-SAT)
VLOOKUP BUSINESS SOLUTIONS PVT LTD.
Vijayanagar 1st Stage, Mysore
CONTACT : +91 6366940936

ಸೋಲಾರ್ ವಾಟರ್ ಹೀಟರ್
Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

(30X40) SALE
@ "OLIVE ENCLAVE" Mys - B'Lore High Way 3km from Columbia Hospital.
28 Lakhs
9538839926

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ಬೇಕಾಗಿದ್ದಾರೆ
ಹೋಟೆಲ್ ಬಾಲಾಜಿ
#566, ಉದಯಗಿರಿ ರೋಡ್, ಗಾಯತ್ರಿಪುರಂ, 2ನೇ ಹಂತ ಮುಖ್ಯ ರಸ್ತೆ, ಮೈಸೂರು.
ದೋಸೆ ಭಟ್ಟರು, ಚೈನೀಸ್ ಭಟ್ಟರು ಬೇಕಾಗಿದ್ದಾರೆ. ಮಾಹಿತಿಗಾಗಿ ಕರೆ ಮಾಡಿ
9663142444
9738142774

ಸಪ್ತಪದಿ ಮ್ಯಾರೇಜ್ ಬ್ಯೂರೋ (ರಿ)
ಹಿಂದೂ ಒಕ್ಕಲಿಗ/ಬ್ರಾಹ್ಮಣ / ಲಿಂಗಾಯತ ಹಾಗೂ ಎಲ್ಲಾ ಜಾತಿಯ BE / MBA / M.Tech / MD / MS/ Ph.D ಹಾಗೂ ಎಲ್ಲಾ ಡಿಗ್ರಿಯ ದೇಶಿಯ / ವಿದೇಶಿಯ ವಧು – ವರರಿಗಾಗಿ ಸಂಪರ್ಕಿಸಿ.
9663199511
web: http://www.sapthapadhimatrimony.com
ಕಂಪ್ಯೂಟರ್ ಗೊತ್ತಿರುವ ಮಹಿಳೆ ಕೆಲಸಕ್ಕೆ ಬೇಕಾಗಿದ್ದಾರೆ.

ಶ್ರೀ ಮಾರುತಿ ರಿಯಲ್ ಎಸ್ಟೇಟ್
ಸೈಟುಗಳನ್ನು ಕೊಳ್ಳಲು / ಮಾರಲು & ಸೈಟು ಮಾರಾಟಕ್ಕಿದೆ. 40x60 ಪರಮಾನಂದ ಸಾಗರ (ಟೆಲಿಕಾಂ ಲೇಔಟ್) ಬೆಲೆ : 36 ಲಕ್ಷ.
ಸಂಪರ್ಕಿಸಿ:
9538412881

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು
Mob.: 9986926101

ನಾಟಿ ಔಷಧಿ
ಮಂಡಿನೋವು ಎಷ್ಟು ಹಳೆಯದಾದರೂ ನಾವು ಕೊಡುವ ನಾಟಿ ಔಷಧದಿಂದ ಕೇವಲ 15 ದಿವಸಗಳಲ್ಲಿ ಶಾಶ್ವತ ಪರಿಹಾರವಾಗುತ್ತದೆ.
8884766288

WANTED PART TIME
Sales Boys for a Sports Shop, Located at Dewan's Road, Mysore. Timings: 5pm to 9.30pm
7760109047
8105368325

100% ಕೆಲಸ
ಮೈಸೂರಿನ ಪ್ರತಿಷ್ಠಿತ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma Any Degree Pass / Fail ಆದವರಿಗೆ packing, Helper, Quality, Production, Maintenance, Telephone attender, Receptionist, Data Entry ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000 – 39000 (ESI+PF+OT) ಸೇರಿ. ಷರತ್ತು ಅನ್ವಯ. ಸಂಪರ್ಕಿಸಿ.
9980850141 / 9663704915

WANTED
Female Sales Executive - 5 Nos.
Graduates with computer knowledge, may walk-in interview with handwritten bio-data to:
Sharada Jewellers
58, D.D. Urs Road, Opp. Anjaneyaswamy Temple, Mysore.

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸಿನಲ್ಲಿ, ಫ್ರಂಟ್ ಆಫೀಸ್ ಮತ್ತು ಅಕೌಂಟ್ಸ್ ನಿರ್ವಹಣೆಗಾಗಿ, ಬಿ.ಕಾಂ. ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕಂಪ್ಯೂಟರ್ ಮತ್ತು ಅಕೌಂಟ್ಸ್‌ನಲ್ಲಿ ಅನುಭವವುಳ್ಳವರಿಗೆ ಹೆಚ್ಚಿನ ಆದ್ಯತೆ. ಸಂಪರ್ಕಿಸಿ:
Mob: 8073393505

ಬೇಕಾಗಿದ್ದಾರೆ
ಮೈಸೂರು ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಉನ್ನತ ಕಂಪನಿಗಳಲ್ಲಿ ಹಾಗೂ ಹಾಸ್ಪಿಟಲ್‌ಗಳಲ್ಲಿ ಕೆಲಸ ಮಾಡಲು Staff Nursing (ICU, ICN, NICU), Accounts knowledge. ಸೆಕ್ಯೂರಿಟಿ, ಹೌಸ್‌ಕೀಪಿಂಗ್ ಬೇಕಾಗಿದ್ದಾರೆ. 10th, PUC, Any Degree (B.Com.), ಪುರುಷರು / ಮಹಿಳೆಯರು (ESI, PF) ಸೌಲಭ್ಯ. ಫೀಲ್ಡ್ ಆಫೀಸರ್ (ಪುರುಷರು / ಮಹಿಳೆಯರು) ಬೇಕಾಗಿದ್ದಾರೆ.
9036461347, 8296280922

ಮನೆ ಮಾರಾಟಕ್ಕಿದೆ
ಮೈಸೂರು ನಗರ, ಕೃಷ್ಣಮೂರ್ತಿಪುರಂ, 4ನೇ ಕ್ರಾಸ್, ಮನೆ ನಂ. 1299, ನಿವೇಶನದ ಅಳತೆ 32'x70'+3'x40' = 2360 ಚದರ ಅಡಿ. ಇದರಲ್ಲಿ ಕಟ್ಟಿರುವ 4 ಮನೆಗಳು, ಕೆಳ ಅಂತಸ್ತು = 2 ಮನೆಗಳು, ಒಂದನೇ ಮಹಡಿ = 2 ಮನೆಗಳು. ತಿಂಗಳಿಗೆ 52 ಸಾವಿರ ರೂ. ಬಾಡಿಗೆ ಬರುತ್ತದೆ. ಕಟ್ಟಡ 41 ಚದರ. ಸಂಪರ್ಕಿಸಿ:
9845120632, 8105087957

ಮನೆ ಬಾಡಿಗೆಗೆ ಇದೆ
ದಟ್ಟಗಳ್ಳಿ, ಇಂಡಿಪೆಂಡೆಂಟ್ ಮನೆ 2 ರೂಮ್, ಉತ್ತರ ಮುಖ ಎನ್.ಆರ್.ಮೊಹಲ್ಲಾ, ಶಿವಾಜಿ ರಸ್ತೆ ಕ್ರಾಸ್‌ನಲ್ಲಿ ಬಾಡಿಗೆಗೆ ಇದೆ
9742723842
9164184642

SITE FOR SALE
MUDA Allotted 30x40 Site for Sale, Vijayanagar 4th Stage First Phase, Near Ring Road, (South Facing) Brokers Excuse. Contact:
6364322628

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

WANTED JOB !
PART TIME ! HOME BASSED
ಗ್ಯಾಸ್ ಸೇಫ್ ಬಗ್ಗೆ
ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಫೋನ್ ಹೊಂದಿರಬೇಕು

EDUCATION	WORK TIME	SALARY
SSLC, PUC any Deegree	4 HOURS	8000/-

9986621226

SITE FOR SALE
20x30
SITE FOR SALE
Near BEML Rajarajeshwari Nagar
9740088990

ಬೇಕಾಗಿದ್ದಾರೆ
ಕುಶಾಲನಗರ, ಕೊಡಗು, ಅನುಭವವುಳ್ಳ ಇಂಡಕ್ಷನ್ ಹಾಗೂ ಸಬ್‌ಮರ್ಸಿಬಲ್ ಮೋಟಾರ್ ರಿವೈಂಡರ್, ಸ್ಟಾರ್ಟರ್ ರಿಪೇರಿ ಮಾಡುವವರು ಮತ್ತು ಲೇತ್ ಟರ್ನರ್ ಬೇಕಾಗಿದ್ದಾರೆ. ವೇತನ 20,000 ರಿಂದ 25,000 ವರೆಗೆ ಹಾಗೂ ಉಚಿತ ವಸತಿ ಸೌಲಭ್ಯ ನೀಡಲಾಗುವುದು.
9448433350, 9945465002

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳದಲ್ಲಿರುವ CMS ಕಂಪನಿಗೆ ಕೆಲಸ ಮಾಡಲು ಟೆಲಿಕಾಲರ್ಸ್ (ಯುವತಿಯರು) ಬೇಕಾಗಿದ್ದಾರೆ. ವಿದ್ಯಾರ್ಹತೆ SSLC, PUC, Any Degree, ವೇತನ: 7,000 – 14,300, ವಯೋಮಿತಿ : 18–30. ಸಂಪರ್ಕಿಸಿ:
7899369558
7338009488

Sudarshan Saur
SOLAR WATER HEATER



ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ಎಲ್ಲಾ ವಯಸ್ಸಿನ ಎಲ್ಲಾ ವಿದ್ಯಾವಂತ ವಧು ವರರು ವಿಧುರರು, ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ:
ಡಾ.ಗುರೂಜಿ
9448229184
7899625268

20x30 SITE OF SALE -3
Dattagalli, Mysore
9900251194
9738884777

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

Match Makers Bride & Grooms
ವಧುವರರ ಮಾಹಿತಿ ಕೇಂದ್ರ
ಎಲ್ಲಾ ಜಾತಿಯ upto 65 years Govt Jobs / Private Jobs / Own ಡಾಕ್ಟರ್ BE, M.tech, Diploma All Degrees
22000 ವಧುಗಳಿಗೆ ವರ ಬೇಕಾಗಿದೆ
32000 ವರಗಳಿಗೆ ವಧುಗಳು ಬೇಕಾಗಿದೆ
3200 ಡೈವೋರ್ಸಿಗಳು ವಿಧುರರು, ವಿಧವೆಯರು ಮದುವೆಗೆ ವಧು/ವರು ಬೇಕಾಗಿದೆ.
800 ಸ್ವತಂತ್ರ ವಧುಗಳಿಗೆ ವರ ಬೇಕಾಗಿದೆ
ಕಾಣಬಹುದಾದಂತ ಕಡೆಗಳಿಂದ ಮದುವೆಯಾಗುವವರು ನೇರ ಸಂಪರ್ಕಿಸಿ
7975728012

WANTED
ಹೆಲ್ಪರ್ಸ್ ಹುಡುಗರು ಬೇಕಾಗಿದ್ದಾರೆ
99011 63200
97435 65907

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ತಕ್ಷಣವೇ ಕೆಲಸ
ಮೈಸೂರು, ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಹೆಲ್ಪರುಗಳು, ಟೈಲರುಗಳು, ಹುಡುಗರು, ಹುಡುಗಿಯರು ಮತ್ತು ಗಂಡಸರು, ಹೆಂಗಸರುಗಳು ಬೇಕಾಗಿದ್ದಾರೆ. ESI ಮತ್ತು PF ಹಾಗೂ ವಾರದ ರಜೆ ಇರುತ್ತದೆ. ಸಂಪರ್ಕಿಸಿ:
7795285485
8105249880

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 40 ವರ್ಷ, ವಿದ್ಯಾರ್ಹತೆ: 7 ರಿಂದ PUC, ಮತ್ತು ITI Fitter ರಿಯಾಯಿತಿ ದರದಲ್ಲಿ ಊಟ ಮತ್ತು ರೂಂಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:
9035381989

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಬೇಕಾಗಿದ್ದಾರೆ
DTP Operator ಕೆಲಸಕ್ಕೆ ಹುಡುಗ /ಹುಡುಗಿಯರು ಬೇಕಾಗಿದ್ದಾರೆ
ಸಂಬಳ: Rs.20000/-
Ph: 9380142144
ಶಿವರಾಂಪೇಟೆ, ಮೈಸೂರು

FOR SALE
1) 30x40 13 lakhs sites in Defence Apartment Near Kote Road
2) 30x40 12 lakhs Elwala
3)40x60 site in before Brahmins Layout Near Ring Road
4) 17/60 3 BHK Kamakshi Hospital Near Saraswathi Puram
4)30x40 N G+2 House Near Ashwini Choultry Srirampura
5)40x60 N/E Corner Aravind Nagar
6) 12/36 House G+2 Kuvempu Nagar
90359 90359, 95386 90359

ತಕ್ಷಣ ಬೇಕಾಗಿದ್ದಾರೆ
ಕಡಕೊಳ, ನಂಜನಗೂಡು, ತಾಂಡ್ಯ, ಹಿಮ್ಮಾವು ಇಂಡಸ್ಟ್ರೀಯಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: 19,000/–, ESI ಮತ್ತು PF ಊಟ, ತಿಂಡಿ ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು
9620667819
9880727819

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
8/6:– ಚಾರ್ಧಾಮ್ ಯಾತ್ರೆ ಕೇದಾರನಾಥ, ಬದರಿನಾಥ್, ಗಂಗೋತ್ರಿ, ಯಮುನೋತ್ರಿ,
17/4:– ಜಾರ್ಖಂಡ್, ಕೋಲ್ಕತ್ತಾ, ಭುವನೇಶ್ವರ, ಪುರಿ ಜಗನ್ನಾಥ್, ಕೋನಾರ್ಕ್.
26/4:–ಜಮ್ಮು, ಕಾಶ್ಮೀರ, ವೈಷ್ಣೋದೇವಿ, ಪಂಜಾಬ್.
8/5:– ಗುಜರಾತ್, ನಾಗಂತ, ಸೋಮನಾಥ, ದ್ವಾರಕಾ.
7/5:–ನೇಪಾಳ ಮುಕ್ತಿನಾಥ್, ಪಶುಪತಿನಾಥ
27/3:– ಕಾಶಿ , ಗಯಾ, ಬುದ್ಧಗಂಯಾ, ಅಯೋಧ್ಯ.
9591017782 / 9964527782

ಬೇಕಾಗಿದ್ದಾರೆ
ಉಚಿತ ನರ್ಸಿಂಗ್ ತರಬೇತಿ 10 ವರ್ಷದಿಂದ ಸರ್ಕಾರದಿಂದ ಅನುಮತಿ ಪಡೆದಿರುವ ಹೆಲ್ತ್, & ವೆಲ್‌ನೆಸ್ ನರ್ಸಿಂಗ್ ಕಂಪನಿಗೆ ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ, ಇಲ್ಲದೆ ಇರುವ 8th, 9th, 10th PUC ಪಾಸ್ ಫೇಲಾದ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಉಳಿದುಕೊಳ್ಳಲು ಊಟ, ತಿಂಡಿ, ನರ್ಸಿಂಗ್ ಯುನಿಫಾರ್ಮ್ ಇರುತ್ತದೆ.
9035113222

ಬೇಕಾಗಿದ್ದಾರೆ
ಕೆಫೆಗೆ ಟೀ, ಕಾಫಿ, ತಿಂಡಿ ತಿನಿಸುಗಳು ಮಾಡಲು ಬೇಕಾಗಿದ್ದಾರೆ
ಸರಸ್ವತಿಪುರಂ, ಮೈಸೂರು
8660433815

SITE FOR SALE
40x55 in Police Layout 3rd Stage, 50 ft Road, T Narasipura Road. By Owner
7676171798

WANTED
Immediately Joiner for Telecaller Male 10Nos, Female 10Nos
Telugu, Hindi Language required
Salary-15k
Meghana H R
7829803426

URGENT REQUIREMENT
Factory Workers M/F.
Male: Age 18-35. Salary 15k Onwards, Conditional.
Female: Age No Bar.
Salary 9k Onwards. Conditional.
C-165, Yadavgiri Industrial Estate
9448664411

ಬೇಕಾಗಿದ್ದಾರೆ
ಸಸ್ಯಹಾರಿ ಹೋಟೆಲ್‌ಗೆ ಒಬ್ಬ ಸೂಪರ್‌ವೈಸರ್ ಹಾಗೂ ಕ್ಯಾಶಿಯರ್ ಬೇಕಾಗಿದ್ದಾರೆ. ಪಾನಿಪುರಿ, ಚಾಟ್ ಮಾರಲು ಜಾಗ ದೊರಕುತದೆ. ನಗರದ ಮಧ್ಯಭಾಗದಲ್ಲಿದೆ.
9916206561

ಬೇಕಾಗಿದ್ದಾರೆ [Job Opportunity]
ಮೈಸೂರ್‌ನಲ್ಲಿ KD ರೋಡ್‌ನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ, ಅನುಭವವುಳ್ಳ, (1) ಅಸಿಸ್ಟೆಂಟ್ ಕುಕ್ (ಸಹಾಯಕ ಕುಕ್) (2) ಕೌಂಟರ್ – ಪಾರ್ಸೆಲ್ (Counter, Parcel) ಮತ್ತು (3) ಸಪ್ಲೇಯರ್ / ವೇಯಿಟರ್ (Supplier, Waiter) (4) ತಂದೂರ್ ಕುಕ್ (Tandoor Cook) (5) Kitchen All rounder ಆಕರ್ಷಕ ಸಂಬಳ, ವಸತಿ ಹಾಗು ಉತ್ತಮ ಸೌಲಭ್ಯಗಳನ್ನೂ ನೀಡಲಾಗುತ್ತದೆ – ಸಂಪರ್ಕಿಸಿ :
7899028086

ಶ್ರೀ ಓಂಶಕ್ತಿ ಜ್ಯೋತಿಷ್ಯರು
ಕೇರಳ ಶ್ರೀ ಗುರುಗಳ ಕೃಪೆಯಿಂದ
ಪ.: ನಾಗರಾಜು ಪಣಿಕರ್
ಮೊ.: 9448033798
ನಿಮ್ಮ ಯಾವುದೇ ಸಮಸ್ಯೆಗಳಿಗೆ ನೇರ ಉತ್ತರ ಶೀಘ್ರ ಪರಿಹಾರವಿದೆ. 1ನೇ ಕ್ರಾಸ್, ಶನೇಶ್ವರ ಗೋಪುರ ಪಕ್ಕ, ಆರ್.ಎಂ.ಸಿ. ಹತ್ತಿರ, ತಿಲಕ್‌ನಗರ, ಮೈಸೂರು.

WANTED
Electrical Maintenance Person ITI / Diploma, Experience 3-5 years, Kadkola Industrial Area, Mysore.
7353480662

WANTED ACCOUNTANT
Min 1 year Experience in Tally ERP 9, Salary 14,000 Married women prefered to work in Irwin Road. Timing 10 am to 7 pm
8050744784

ಮನೆಯಿಂದಲೇ ಕೆಲಸ
ತಿಂಗಳಿಗೆ 50 ಸಾವಿರದಿಂದ 60 ಸಾವಿರದವರೆಗೆ ಹಾಗೂ ಟೆಲಿಕಾಲರ್ಸ್, ಬಿ.ಇ, ಸಿವಿಲ್ ಫೀಲ್ಡ್ ವೆರಿಫಿಕೇಶನ್ ಆಫೀಸರ್ (ಪಿಯುಸಿ ಪಾಸ್ ಪುರುಷರಿಗೆ ಮಾತ್ರ) ಸರ್ವಿಸ್ ಅಡ್ವೈಸರ್ ಬೇಕಾಗಿದ್ದಾರೆ.
8867196098

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಆಕರ್ಷಕ ಸಂಬಳದೊಂದಿಗೆ ಊಟ – ವಸತಿ ಉಚಿತ
9880059793

ಟೆಲಿಕಾಮ್ ಲೇಔಟ್
30x40 ಸೈಟು N/F @ Rs. 25 ಲಕ್ಷ
ತಕ್ಷಣ ಮನೆ ಕಟ್ಟಬಹುದು, ಬ್ಯಾಂಕ್ ಲೋನ್ ಲಭ್ಯ, ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರೋಡ್, ಮೈಸೂರು
9538583377

Govt. Job ಇರುವ ವಿಧವೆಗೆ 2ನೇ ಸಂಬಂಧಕ್ಕೆ ವರ ಬೇಕಾಗಿದ್ದಾರೆ
Beautiful ಲಿಂಗಾಯತ 48/5.4/ M.A, Govt. Senior Asst. Secretary, Salary 65,000/-, ಇರುವಂತಹ ವಿಧವೆಗೆ ಯಾವುದೇ ಜಾತಿಯ ಅಭ್ಯಂತರವಿಲ್ಲದೆ ವಿಧುರ / ವಿಚ್ಛೇದಿತ / ನೌಕರಸ್ಥ / ವ್ಯಾಪಾರಸ್ಥ ವರ ತಕ್ಷಣ ಬೇಕಾಗಿದ್ದಾರೆ. ಮಕ್ಕಳಿದ್ದರೂ ಪರವಾಗಿಲ್ಲ. (ಸರಳ ವಿವಾಹಕ್ಕೆ ಮೊದಲ ಆದ್ಯತೆ) ಬೆಂಗಳೂರು.
9742458242

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ : 8th to 2nd PUC ವರಗೆ. ಊಟ, ವಸತಿ, ESI, PF ಸೌಲಭ್ಯವಿರುತ್ತದೆ.
8951869646
9902645646

ಬಾಡಿಗೆಗೆ ಇದೆ
12x10 ಅಡಿಗಳುಳ್ಳ ಮೊದಲ ಅಂತಸ್ತಿನ ಮಳಿಗೆ ತ್ಯಾಗರಾಜ ರಸ್ತೆ, 5ನೇ ಕ್ರಾಸ್, ಅಕ್ಕನ ಬಳಗ ಅಡ್ಡ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು. ಅರಸು ಮಂಡಳಿ ಸಹಕಾರ ಸಂಘದ ಕಟ್ಟಡ. ಕಚೇರಿ ವೇಳೆ:– ಬೆಳಿಗ್ಗೆ 10 ರಿಂದ ಸಂಜೆ 8.00 ಗಂಟೆ.
ಸಹಿ/– ಆಡಳಿತ ಮಂಡಳಿ ಪರವಾಗಿ ಕಾರ್ಯದರ್ಶಿ
0821-2439609 / 7019480195

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಕನ್ನಡ, ತೆಲುಗು, ಹಿಂದಿ) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, ಸಂಬಳ: 8000.
8150005111

SITE FOR SALE 5KM FROM CITY
ತಕ್ಷಣ ಮನೆ ಕಟ್ಟಲು ಯೋಗ್ಯ ಸೈಟುಗಳು, ಬ್ಯಾಂಕ್ ಲೋನ್‌ನೊಂದಿಗೆ ಲಭ್ಯವಿದೆ. Telecom Layout, ಬೋಗಾದಿ @ 68 ಲಕ್ಷ, Manipal Hospital, ರಿಂಗ್ ರಸ್ತೆ ಹತ್ತಿರ 36 ಲಕ್ಷ
Brokers Excuse
7892445689

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮಂಡ್ಯ ಕಾಂಗ್ರೆಸ್ ಬಂಡಾಯ ಖರ್ಗೆ ಅಂಗಳಕ್ಕೆ

ಮೂಲ ಕಾಂಗ್ರೆಸ್ಸಿಗರಿಗೆ ಟಿಕೆಟ್ ಕೊಡುವಂತೆ ಕೈ ನಿಯೋಗ ಒತ್ತಾಯ



ಮಂಡ್ಯ,ಮಾ.15(ಮೋಹನ್‌ರಾಜ್)– ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ವಲಸಿಗ ಕಾಂಗ್ರೆಸ್ಸಿಗರ ವಿರುದ್ಧ ಮೂಲ ಕಾಂಗ್ರೆಸ್ಸಿಗರ ಬಂಡಾಯ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಂಗಳಕ್ಕೆ ತಲುಪಿದ್ದು, ಬುಧವಾರ ರಾತ್ರಿ ಮಾಜಿ ಸಚಿವ ಎಂ.ಎಸ್. ಆತ್ಮಾನಂದ ನೇತೃತ್ವದ ನಿಯೋಗ ನವದೆಹಲಿಯಲ್ಲಿರುವ ಖರ್ಗೆ ನಿವಾಸದಲ್ಲಿ ಈ ಬಗ್ಗೆ ಅರ್ಧ ಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆಸಿದೆ.

ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್‌ಗೆ 16 ಮಂದಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದು, ಈ ಪೈಕಿ ಹಲವು ಮಂದಿ ಮೂಲ ಕಾಂಗ್ರೆಸ್ಸಿಗರಿದ್ದರೆ ಕೆಲವು ಮಂದಿ ಇತ್ತೀಚೆಗಷ್ಟೇ ಬೇರೆ ಪಕ್ಷದಿಂದ ಕಾಂಗ್ರೆಸ್‌ಗೆ ಸೇರ್ಪಡೆಯಾದವರಾಗಿದ್ದಾರೆ. ಈ ಪೈಕಿ ಜೆಡಿಎಸ್‌ನಿಂದ ಬಂದಿರುವ ಕೀಲಾರ ರಾಧಾಕೃಷ್ಣ ಹೆಸರು ಟಿಕೆಟ್ ವಿಚಾರದಲ್ಲಿ ಮುಂಚೂಣಿಗೆ ಬಂದಿದ್ದು, ರಾಧಾಕೃಷ್ಣ, ನಗರದಾದ್ಯಂತ ಫ್ಲೆಕ್ಸ್ ಹಾಕಿಸಿ, ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿದ್ದಾರೆ. ಕಾಂಗ್ರೆಸ್ ವಲಯದಲ್ಲಿ ಅವರಿಗೆ ಟಿಕೆಟ್ ಎಂಬ ಗುಸು ಗುಸು ಹರಿದಾಡುತ್ತಿದೆ. ಇದರಿಂದ ದಿಕ್ಕೆಟ್ಟಿರುವ ಮೂಲ ಕಾಂಗ್ರೆಸ್ಸಿಗರು ನಮ್ಮಲ್ಲೇ ಒಬ್ಬರಿಗೆ ಟಿಕೆಟ್ ಕೊಡಿ, ವಲಸಿಗರಿಗೆ ಟಿಕೆಟ್ ನೀಡಬೇಡಿ ಎಂದು ದುಂಬಾಲು ಬಿದ್ದಿದ್ದು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿಯಾಗಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಆದರೆ ಇಂದು ಒಂದು ಹೆಜ್ಜೆ ಮುಂದೆ ಹೋಗಿ ಖರ್ಗೆ ಅವರನ್ನೇ ಭೇಟಿ ಮಾಡಿದ್ದಾರೆ.

ಮಾಜಿ ಸಚಿವ ಹಾಗೂ ಕೈ ಟಿಕೆಟ್‌ನ ಪ್ರಬಲ ಆಕಾಂಕ್ಷಿ ಎಂ.ಎಸ್.ಆತ್ಮಾನಂದ ನೇತೃತ್ವದಲ್ಲಿ ಕೆಪಿಸಿಸಿಗೆ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವ ಮಾಜಿ ಶಾಸಕ ಹೆಚ್.ಬಿ. ರಾಮು, ಮುಖಂಡರಾದ ಅಮರಾವತಿ ಚಂದ್ರಶೇಖರ್, ಸಿದ್ದಾರೂಢ ಸತೀಶ್‌ಗೌಡ, ಬಿ.ಸಿ.ಶಿವಾನಂದ, ಹಾಲಹಳ್ಳಿ ರಾಮಲಿಂಗಯ್ಯ, ಹೊಸಹಳ್ಳಿ ಶಿವು ಮುಖಂಡರಾದ ಚಂದೂಪುರ ಪಾಪಣ್ಣ, ಹುಲಿವಾನ ಯೋಗೇಶ್ ಸೇರಿದಂತೆ ಅನೇಕರು ಖರ್ಗೆ ಅವರನ್ನು ಭೇಟಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ನಿಯೋಗದ ನೇತೃತ್ವ ವಹಿಸಿದ್ದ ಆತ್ಮಾನಂದ ಮಾತನಾಡಿ, ಮಂಡ್ಯ ಕ್ಷೇತ್ರದಲ್ಲಿ ಟಿಕೆಟ್‌ಗಾಗಿ ಹಲವರು ಅರ್ಜಿ ಸಲ್ಲಿಸಿದ್ದಾರೆ. ಈ ಪೈಕಿ ಪಕ್ಷಕ್ಕಾಗಿ ಹಿಂದಿನಿಂದ ದುಡಿದವರಿಗೆ ಆದ್ಯತೆ ನೀಡಿ. ಇತ್ತೀಚೆಗೆ ಪಕ್ಷ ಸೇರಿ ಟಿಕೆಟ್‌ಗೆ ಅರ್ಜಿ ಸಲ್ಲಿಸಿದವರಿಗೆ ಆದ್ಯತೆ ನೀಡಬೇಡಿ ಎಂದು ತಮ್ಮ ಸಮಕಾಲೀನರೂ ಆಗಿರುವ ಎಐಸಿಸಿ ಅಧ್ಯಕ್ಷರಿಗೆ ಮನವಿ ಮಾಡಿದ್ದಾರೆ.

> ಮೂಲ ಕಾಂಗ್ರೆಸ್ಸಿಗರಿಗೆ ಒತ್ತು ನೀಡಿ, ಹೊಸಬರಿಗೆ ಮಣೆ ಹಾಕಬೇಡಿ. ಹಲವು ವರ್ಷಗಳಿಂದ ಪಕ್ಷಕ್ಕಾಗಿ ದುಡಿದವರಿಗೆ ಟಿಕೆಟ್ ಕೊಟ್ಟರೆ ಪಕ್ಷಕ್ಕೆ ಒಳಿತಾಗಲಿದೆ ಎಂದು ಖರ್ಗೆ ಅವರಿಗೆ ತಿಳಿಸಿದ್ದು, ಅವರು ನಮಗೆ ಪೂರಕವಾಗಿ ಸ್ಪಂದಿಸಿದ್ದಾರೆ. ನಿಮ್ಮ ನಿರ್ಧಾರಕ್ಕೆ ತಕ್ಕಂತೆ ಅವರ ಮನಸ್ಸಿಗೂ ನೋಯಿಸದಂತೆ ಒಂದು ನಿರ್ಧಾರಕ್ಕೆ ಬರಲಿದ್ದೇವೆ ಎಂದು ತಿಳಿಸಿದ್ದಾರೆ.
>
> – ಎಂ.ಎಸ್.ಆತ್ಮಾನಂದ, ಮಾಜಿ ಸಚಿವ

ಆತ್ಮಾನಂದ ಬೇಡಿಕೆಗೆ ಪ್ರತಿಕ್ರಿಯಿಸಿದ ಖರ್ಗೆ, ಮಂಡ್ಯ ಕ್ಷೇತ್ರದ ಬಗ್ಗೆ ನನಗೂ ಅರಿವಿದೆ. ಸುಮಾರು 16 ಮಂದಿ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದು, ಹಳಬರು, ಹೊಸಬರು ಎಲ್ಲರೂ ಟಿಕೆಟ್‌ಗಾಗಿ ಬೇಡಿಕೆ ಇಟ್ಟಿದ್ದೀರಿ. ಟಿಕೆಟ್ ಹಂಚಿಕೆ ಹತ್ತಿರ ಬಂದಾಗ ಈ ಬಗ್ಗೆ ನಿಮ್ಮ ನಿಲುವಿಗೂ ಪೂರಕವಾದಂತೆ ಅಂತಿಮ ನಿರ್ಧಾರವನ್ನು ಕೈಗೊಳ್ಳುವೆ. ಅಲ್ಲಿಯವರೆಗೂ ದುಡುಕದೇ ಪಕ್ಷ ಸಂಘಟನೆಗೆ ಎಲ್ಲರೂ ಒಗ್ಗಟ್ಟಿನಿಂದ ದುಡಿಯಿರಿ. ಕಾಂಗ್ರೆಸ್ ಪಕ್ಷ ಯಾರಿಗೂ ಅನ್ಯಾಯ ಮಾಡುವುದಿಲ್ಲ. ಎಲ್ಲರನ್ನು ಕೂರಿಸಿ, ಚರ್ಚಿಸಿ ಒಂದು ನಿರ್ಧಾರಕ್ಕೆ ಬರೋಣ ಎಂದು ನಿಯೋಗಕ್ಕೆ ತಿಳಿಸಿದ್ದಾರೆ.

ಕೆಪಿಸಿಸಿ ಅರ್ಜಿ ಆಹ್ವಾನಿಸಿದ ಬಳಿಕ 16 ಮಂದಿ ಟಿಕೆಟ್‌ಗೆ ಅರ್ಜಿ ಸಲ್ಲಿಸಿ, ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ತಾರಕಕ್ಕೇರಿದೆ. ಒಂದು ಕಡೆ ಟಿಕೆಟ್‌ಗಾಗಿ ಕೀಲಾರ ರಾಧಾಕೃಷ್ಣ ಹೆಸರು ಮುಂಚೂಣಿಗೆ ಬಂದಿದ್ದರೆ, ಕಳೆದ ಬಾರಿಯ ಪರಾಜಿತ ಅಭ್ಯರ್ಥಿ ಗಣಿಗ ರವಿಕುಮಾರ್ ಪ್ರಬಲ ಪೈಪೋಟಿ ನೀಡುತ್ತಿದ್ದಾರೆ. ಇಬ್ಬರಲ್ಲಿ ಒಬ್ಬರನ್ನು ಅಭ್ಯರ್ಥಿ ಮಾಡಬೇಕೆಂದು ಮಾಜಿ ಸಚಿವ ಎನ್. ಚಲುವರಾಯಸ್ವಾಮಿ ತಂತ್ರಗಾರಿಕೆ ಮಾಡುತ್ತಿರುವಾಗ, ಮೂಲ ಕಾಂಗ್ರೆಸ್ಸಿಗರಾದ ಆತ್ಮಾನಂದ, ರಾಮು, ಸಿದ್ದಾರೂಢ, ಬಿ.ಸಿ.ಶಿವಾನಂದ, ಅಮರಾವತಿ ಚಂದ್ರಶೇಖರ್, ಹಾಲಹಳ್ಳಿ ರಾಮಲಿಂಗಯ್ಯ, ಶಿವು ಹೊಂದಾಗಿ ಖರ್ಗೆವರೆಗೂ ಹೋಗಿರುವುದು ತೀವ್ರ ಸಂಚಲನ ಸೃಷ್ಟಿಸಿದೆ.

16 ಮಂದಿ ಪೈಕಿ ಕೀಲಾರ ರಾಧಾಕೃಷ್ಣ ವರ್ಚಸ್ಸು ಬಳಸಿ ಟಿಕೆಟ್ ತರುತ್ತಾರಾ, ಇತ್ತ ಗಣಿಗ ರವಿಕುಮಾರ್ ಕಳೆದ ಬಾರಿಯ ಸೋಲಿನ ಅನುಕಂಪದಿಂದ ಬಿ.ಫಾರಂ ಪಡೆಯುತ್ತಾರಾ ಅಥವಾ ಆತ್ಮಾನಂದ ತಮ್ಮ ಸಮಕಾಲೀನರಾದ ಖರ್ಗೆ ಅವರ ಮೇಲೆ ಟಿಕೆಟ್‌ಗಾಗಿ ಒತ್ತಡ ತರುತ್ತಾರಾ ಅಥವಾ ಕೈ ನಾಯಕರು ಈ ಮೂವರನ್ನು ಬಿಟ್ಟು ಮತ್ತೆ ಇನ್ಯಾರಿಗಾದರೂ ಮಣೆ ಹಾಕಲಿದ್ದಾರಾ ಕಾದು ನೋಡಬೇಕಿದೆ.

— ವರ್ಷಕ್ಕೆ 8 ದಿನ ಮಾತ್ರ ನಡೆಯುವ —

ಅಣ್ಣೂರು ಗ್ರಾಮದ ಮಂಚಮ್ಮ ದೇವಿ ಪೂಜೆಗೆ ಚಾಲನೆ



ಭಾರತೀನಗರ, ಮಾ.15– ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದಲ್ಲಿ ಮಂಚಮ್ಮ ದೇವಿಗೆ ವರ್ಷದಲ್ಲಿ 8 ದಿನ ಮಾತ್ರ ನಡೆಯುವ ಪೂಜಾ ಕಾರ್ಯಕ್ರಮಕ್ಕೆ ಚಾಲನೆ ದೊರಕಿತು.

ಮಂಗಳವಾರ ಮಧ್ಯರಾತ್ರಿ ಕೊಂಡ ಬಂಡಿ ಉತ್ಸವದ ನಂತರ ಕೊಂಡಕ್ಕೆ ಹಾಕಲಾಗಿದ್ದ ಸೌದೆಗೆ ವಿಶೇಷ ಪೂಜೆ ಸಲ್ಲಿಸಿ ಬೆಂಕಿಯನ್ನು ಹಾಕಲಾಯಿತು. ನಂತರ ಮಂಚಮ್ಮ, ಮಾಕಳಮ್ಮ, ಮಾರಮ್ಮ, ಅಟ್ಟಿ ಮಾರಮ್ಮ, ಬೊಪ್ಪಸಮುದ್ರ ಚೌಡೇಶ್ವರಿ ಸೇರಿದಂತೆ ಗ್ರಾಮ ದೇವತೆಗಳ ಹೂ–ಹೊಂಬಾಳೆ ಹಾಗೂ ಉತ್ಸವವು ಭಕ್ತಿಪ್ರಧಾನವಾಗಿ ಜರುಗಿತು.

ವರ್ಷವೆಲ್ಲಾ ಬಾಗಿಲು ಮುಚ್ಚಿದ್ದ ಮಂಚಮ್ಮ ದೇವಿಗೆ ಮಂಗಳವಾರ ರಾತ್ರಿಯಿಂದ ಬಾಗಿಲು ತೆರೆದು 8 ದಿನಗಳ ಕಾಲ ವಿಶೇಷ ಪೂಜೆ ಸಲ್ಲಿಸಲಾಗುವುದು. ಬುಧವಾರ ಮುಂಜಾನೆ ಮಾರಮ್ಮ ದೇವತೆಯ ಕೊಂಡೋತ್ಸವವು ಜರುಗಿತು. ವಾರಮ್ಮ ದೇವಿಯು ಕೊಂಡೋತ್ಸವ, ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ಗ್ರಾಮ ದೇವತೆಗಳ ಉತ್ಸವ ಸಂಭ್ರಮದಿಂದ ಜರುಗಿದವು.

ಮಾರಮ್ಮ ದೇವಿಯ ಹಬ್ಬದ ವಿಶೇಷವಾಗಿ ಮಂಗಳವಾರದಿಂದಲೇ ದೇವರುಗಳಿಗೆ ಹೋಮ, ಹವನ ಮತ್ತು ವಿಶೇಷ ಪೂಜಾ ಕೈಂಕರ್ಯಗಳು ಜರುಗುವುದರೊಂದಿಗೆ ಗ್ರಾಮದಲ್ಲಿ ಹಬ್ಬಕ್ಕೆ ಮೆರಗು ಬಂದಿತು. ಗ್ರಾಮ ದೇವತೆಗಳ ಉತ್ಸವವು ಮತ್ತು ಮೆರವಣಿಗೆ, ತಂಬಿಟ್ಟಿನ ಆರತಿ ಪ್ರತಿಯೊಂದು ಬೀದಿಯಲ್ಲಿ ಬುಧವಾರ ಮಧ್ಯಾಹ್ನ 2 ಗಂಟೆಯ ತನಕ ಜರುಗಿತು.

ಗುರುವಾರ ಶ್ರೀಬೊಮ್ಮಲಿಂಗೇಶ್ವರ ದೇವಸ್ಥಾನದಲ್ಲಿ ಗ್ರಾಮದವರೆಲ್ಲಾ ವಿಶೇಷ ಪೂಜೆ ಸಲ್ಲಿಸಲಾಗುವುದು. ಹೀಗೆ ಯುಗಾದಿ ಹಬ್ಬದವರೆವಿಗೂ ಗ್ರಾಮದಲ್ಲಿರುವ ತಿಮ್ಮಪ್ಪ, ಅಮೃತೇಶ್ವರ, ಚೌಡಮ್ಮ, ಮಾಕಳಮ್ಮ, ಲಕ್ಷ್ಮಿದೇವಿ, ಗುರುಮೂರ್ತಿ, ಅಟ್ಟಿಮಾರಮ್ಮ ಸೇರಿದಂತೆ ಎಲ್ಲಾ ದೇವತೆಗಳಿಗೂ ಗ್ರಾಮಸ್ಥರು ಪೂಜೆ ಸಲ್ಲಿಸಲಿದ್ದಾರೆ. ಹಾಗೆಯೇ ಮಂಚಮ್ಮ ದೇವಿಗೆ 8 ದಿನಗಳ ಕಾಲವೂ ದೇವಸ್ಥಾನದ ಬಾಗಿಲು ತೆರೆದು ವಿಶೇಷ ಪೂಜೆ ಸಲ್ಲಿಸಲಾಗುವುದು.

ಯುಗಾದಿ ಹಬ್ಬದ ತನಕ ಮಂಚಮ್ಮ ದೇವಿಗೆ ಗ್ರಾಮದವರು ಸೇರಿದಂತೆ ಇತರೆ ಗ್ರಾಮದ ಭಕ್ತರು ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದ ನಂತರ ಯುಗಾದಿಹಬ್ಬಕ್ಕೆ ಪೂಜೆಯನ್ನು ಅಂತ್ಯಗೊಳಿಸಿ ಬಾಗಿಲು ಮುಚ್ಚಲಾಗುವುದೆಂದು ಗ್ರಾಮದ ಹಿರಿಯರು ತಿಳಿಸಿದರು.

ಬೈಕ್‌ಗೆ ಟಿಪ್ಪರ್ ಡಿಕ್ಕಿ: ಖಾಸಗಿ ಕಂಪನಿ ಉದ್ಯೋಗಿ ಸಾವು

ಮದ್ದೂರು, ಮಾ.15– ತಾಲೂಕಿನ ಗೆಜ್ಜಲಗೆರೆ ಕಾಲೋನಿ ಸಮೀಪ ಬೈಕ್‌ಗೆ ಟಿಪ್ಪರ್ ಡಿಕ್ಕಿ ಹೊಡೆದು ಖಾಸಗಿ ಕಂಪನಿ ಉದ್ಯೋಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬೆಂಗಳೂರಿನ ಖಾಸಗಿ ಕಂಪನಿ ಉದ್ಯೋಗಿ ಮಂಡ್ಯದ ಹಾಲಹಳ್ಳಿ ಬಡಾವಣೆಯ ಕೃಷ್ಣಮೂರ್ತಿ ಪುತ್ರ ಸುಹಾಸ್(25) ಅಪಘಾತದಲ್ಲಿ ಮೃತಪಟ್ಟವರು. ಬೆಂಗಳೂರಿನಲ್ಲಿರುವ ಸುಕಾನ್ ಕಂಪನಿಯಲ್ಲಿ ಸೈಟ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಸುಹಾಸ್ ಮೈಸೂರು–ಬೆಂಗಳೂರು ಸರ್ವೀಸ್ ರಸ್ತೆಗೆ ಹೋಗುತ್ತಿದ್ದ ವೇಳೆ ಮುಖ್ಯ ರಸ್ತೆ ಕಡೆಯಿಂದ ಬಂದ ಟಿಪ್ಪರ್ ಅವರ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಸ್ಥಳಕ್ಕೆ ಧಾವಿಸಿದ ಸಂಚಾರಿ ಪೊಲೀಸರು ಪರಿಶೀಲನೆ ನಡೆಸಿ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದರು. ಈ ಸಂಬಂಧ ಪಿಎಸ್‌ಐ ಅಯ್ಯನಗೌಡ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪಿಂಚಣಿ ಹೆಚ್ಚಳಕ್ಕೆ ಆಗ್ರಹಿಸಿ ರಾಷ್ಟ್ರೀಯ ಸಂಘರ್ಷ ಸಮಿತಿ ರಸ್ತೆತಡೆ



ಮಂಡ್ಯ, ಮಾ.15– ಕನಿಷ್ಠ 7500 ರೂ. ಪಿಂಚಣಿ ನೀಡಬೇಕು. ಸರ್ಕಾರದ ವಿವಿಧ ಸೌಲಭ್ಯಗಳನ್ನು ನೀಡಬೇಕು. ಪಿಂಚಣಿದಾರ ಮೃತಪಟ್ಟ ಬಳಿಕ ಕುಟುಂಬಸ್ಥರಿಗೆ ಅದನ್ನು ಪೂರ್ಣ ಪ್ರಮಾಣದಲ್ಲಿ ಪಿಂಚಣಿ ನೀಡಬೇಕು ಎಂದು ಆಗ್ರಹಿಸಿ ನಗರದಲ್ಲಿ ರಾಷ್ಟ್ರೀಯ ಸಂಘರ್ಷ ಸಮಿತಿ ಜಿಲ್ಲಾ ಪದಾಧಿಕಾರಿಗಳು ಪ್ರತಿಭಟಿಸಿ ರಸ್ತೆತಡೆ ನಡೆಸಿದರು.

ನಗರದ ಜೆಸಿ ವೃತ್ತದಲ್ಲಿ ಜಮಾವಣೆಗೊಂಡ ಪದಾಧಿಕಾರಿಗಳು, ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಮಾನವ ಸರಪಳಿ ನಿರ್ಮಿಸಿ ಹೆದ್ದಾರಿ ತಡೆ ಚಳವಳಿ ನಡೆಸಿದರು.

ಬಳಿಕ ಮಾತನಾಡಿದ ಜಿಲ್ಲಾ ಸಂಚಾಲಕ ಹುಚ್ಚಪ್ಪ, ರಾಷ್ಟ್ರೀಯ ಅಧ್ಯಕ್ಷ ಕಮಾಂಡರ್ ಅಶೋಕ್ ರಾವತ್, ವೀರೇಂದ್ರ ಸಿಂಗ್ ಅವರ ನಾಯಕತ್ವ ಮತ್ತು ಮಾರ್ಗದರ್ಶನದಲ್ಲಿ ರಾಷ್ಟ್ರೀಯ ಸಂಘರ್ಷ ಸಮಿತಿ ಮೂವತ್ತು ವರ್ಷಗಳಿಂದ ಕೆಲಸ ಮಾಡಿದ ಇಪಿಎಸ್ 95 ನಿವೃತ್ತ ಉದ್ಯೋಗಿಗಳು ಹೆಚ್ಚಿನ ಪಿಂಚಣಿ ನೀಡುವಂತೆ ಆಗ್ರಹಿಸಿ ದೇಶಾದ್ಯಂತ ಚಳುವಳಿ ಆರಂಭಗೊಂಡಿದೆ ಎಂದರು.

30–35 ವರ್ಷಗಳಿಂದ ಸೇವೆ ಸಲ್ಲಿಸಿದ ನಮಗೆ ತಿಂಗಳಿಗೆ 2000 ರೂ. ಪಿಂಚಣಿ ನೀಡಲಾಗುತ್ತಿದ್ದು, ನಾವು ಎನ್‌ಎಸಿ ನಾಯಕತ್ವದಲ್ಲಿ ನಮ್ಮ ಬೇಡಿಕೆಗಳನ್ನು ಮನವರಿಕೆ ಮಾಡಲು ಹಲವಾರು ಪ್ರಯತ್ನಗಳನ್ನು ಮಾಡಿದ್ದೇವೆ. ಎರಡು ಬಾರಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ಭೇಟಿಯಾಗಿದ್ದೇವೆ. ಇಷ್ಟಾದರೂ ನಮ್ಮ ಬೇಡಿಕೆ ಈಡೇರಿಲ್ಲ. ಹೀಗಾಗಿ ಪ್ರತಿಭಟನೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಬೇಡಿಕೆಗಳು ಏನು?: 7,500 ರೂ.ಗಳ ಪಿಂಚಣಿ ಹೆಚ್ಚಳ ಜಾರಿಯಾಗುವ ತನಕ, ಪಿಂಚಣಿದಾರರಿಗೆ 5,000 ರೂ. ಮತ್ತು ತುಟ್ಟಿಭತ್ಯೆಯನ್ನು ಸರಕಾರ ನೀಡಬೇಕು. ಏರುತ್ತಿರುವ ಹಣದುಬ್ಬರದ ಅನ್ವಯ ಮಧ್ಯಂತರ ಪರಿಹಾರವಾಗಿ 5,000 ರೂ. ಮತ್ತು ತುಟ್ಟಿಭತ್ಯೆಯನ್ನು ಸರಕಾರ ನೀಡಬೇಕು ಎಂದು ಇಪಿಎಸ್–95 ಪಿಂಚಣಿದಾರರ ಸಂಘರ್ಷ ಸಮಿತಿಯ ರಾಷ್ಟ್ರೀಯ ಸಂಚಾಲಕ ಅಶೋಕ್ ರಾವತ್ ಒತ್ತಾಯಿಸಿದ್ದಾರೆ. ಕೋಶಿಯಾರಿ ಸಮಿತಿಯು ಕನಿಷ್ಠ 3,000 ರೂ.ಗಳ ಮಾಸಿಕ ಪಿಂಚಣಿ ನೀಡಬೇಕು ಎಂದು ಶಿಫಾರಸ್ಸು ಮಾಡಿದೆ. ಅದನ್ನು ಜಾರಿಗೊಳಿಸಬೇಕು. ಪಿಂಚಣಿದಾರರಿಗೆ ಉಚಿತ ಆರೋಗ್ಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಸಮಿತಿ ಆಗ್ರಹಿಸಿದ್ದಾರೆ.

ಪ್ರತಿಭಟನೆಯಲ್ಲಿ ಬಾಲಕೃಷ್ಣ, ಶಿವಣ್ಣ, ಮಹದೇವಸ್ವಾಮಿ, ಶ್ರೀನಿವಾಸ್, ನಾಗಾರಾಜುಮೂರ್ತಿ, ಶಿವಲಿಂಗಪ್ಪ, ದೇವರಾಜ್, ಪುರುಷೋತ್ತಮ್ ಮತ್ತಿತರರಿದ್ದರು.

ಇಂದಿನಿಂದ ರಾಜ್ಯಮಟ್ಟದ ಗ್ರಾಮೀಣ ಕ್ರೀಡಾಕೂಟ

ಮಂಡ್ಯ, ಮಾ.15– ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದೊಂದಿಗೆ 2023ರ ರಾಜ್ಯ ಮಟ್ಟದ ಗ್ರಾಮೀಣ ಕ್ರೀಡಾ ಕೂಟವನ್ನು ಮಾ.16 ರಿಂದ 18ರವರೆಗೆ ಕೆ.ಆರ್ ಪೇಟೆಯ ತಾಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಡಿಸಿ ಡಾ.ಹೆಚ್ ಎನ್ ಗೋಪಾಲಕೃಷ್ಣ ತಿಳಿಸಿದರು.

ಅವರು ಇಂದು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಸುಮಾರು 14.50 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಒಳಾಂಗಣ ಕ್ರೀಡಾಂಗಣ, ಈಜುಕೊಳ ಹಾಗೂ ಖೋ–ಖೋ ಸ್ಪರ್ಧೆಯನ್ನು ಸಚಿವ ಡಾ.ಸಿ.ಎನ್ ಅಶ್ವಥ್ ನಾರಾಯಣ ಉದ್ಘಾಟಿಸಲಿದ್ದಾರೆ ಎಂದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಡಾ.ನಿರ್ಮಲಾನಂದನಾಥ ಸ್ವಾಮೀಜಿಯವರು ದಿವ್ಯಸಾನ್ನಿಧ್ಯ ವಹಿಸಲಿದ್ದು, ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ. ನಾರಾಯಣಗೌಡ ಅವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು. ಮೂರು ದಿನಗಳ ಕಾಲ ನಡೆಯುವ ರಾಜ್ಯ ಮಟ್ಟದ ಖೋ–ಖೋ ಸ್ಪರ್ಧೆಯ ಗ್ರಾಮೀಣ ಕ್ರೀಡಾಕೂಟಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಿಂದ 720 ಕ್ಕೂ ಹೆಚ್ಚು ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳು ಆಗಮಿಸುತ್ತಿದ್ದು, ತಂಡದ ಎಲ್ಲಾ ಕ್ರೀಡಾಪಟುಗಳಿಗೆ, ವ್ಯವಸ್ಥಾಪಕರಿಗೆ ವಸತಿ ಹಾಗೂ ಊಟೋಪಚಾರದ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ.

ಮಗನಿಗೆ ಅಸಮಾಧಾನ ಇದ್ದರೆ ಅವನನ್ನು ಕೇಳಿ, ನನಗೂ ವಿಜಯೇಂದ್ರಗೂ ಸಂಬಂಧ ಇಲ್ಲ

ಎಲ್ಲಾ ಸರಿಯಿದೆ ಎಂದ ಬಿ.ಎಸ್.ಯಡಿಯೂರಪ್ಪ



ಬೆಂಗಳೂರು/ದೆಹಲಿ: ಬೆಂಗಳೂರಿನಲ್ಲಿ ನಿನ್ನೆ ಸುದ್ದಿಗೋಷ್ಠಿಯಲ್ಲಿ ಭಾವುಕರಾಗಿ ಮಾತನಾಡುತ್ತಾ ಬೆಂಗಳೂರಿಗೆ ಬಂದ ಆರಂಭ ದಿನಗಳಲ್ಲಿ ತಾವು ಪಟ್ಟ ಕಷ್ಟ, ಜೀವನ, ರಾಜಕೀಯ ಜೀವನದ ಆರಂಭದ ಬಗ್ಗೆ ಮೆಲುಕು ಹಾಕುತ್ತಾ ಭಾವುಕರಾಗಿದ್ದ ಸಚಿವ ವಿ ಸೋಮಣ್ಣ ಇಂದು ದೆಹಲಿಗೆ ತೆರಳಿದ್ದಾರೆ. ಅಲ್ಲಿ ಅವರು ವರಿಷ್ಠರನ್ನು ಭೇಟಿ ಮಾಡಿದ್ದಾರೆ.

ಇಂದು ದೆಹಲಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಸೋಮಣ್ಣ, ಆಗಲೂ ಭಾವೋದ್ರೇಕರಾಗಿ ವಿಜಯೇಂದ್ರ ಬಗ್ಗೆ ನನ್ನ ಪುತ್ರನಿಗೆ ಅಸಮಾಧಾನವಿದ್ದರೆ ಅವನನ್ನೇ ಕೇಳಿ, ಅವನು ಚಿಕ್ಕ ಮಗುವಲ್ಲ, ಡಾಕ್ಟರಾಗಿದ್ದಾನೆ, ತಿಳುವಳಿಕೆ ಇದೆ, ಯೋಚನೆ ಮಾಡುವ ಶಕ್ತಿಯಿದೆ. ಅವನಿಗೀಗ 41, ನನಗೆ ಈಗ 72 ವರ್ಷ, ಅವನನ್ನೇ ಕೇಳಿ ಎಂದರು. ವಿಜಯೇಂದ್ರನಿಗೂ ನನ್ನ ಮಗನಿಗೂ ಅಸಮಾಧಾನವಿದ್ದರೆ ನನಗೇನು ಸಂಬಂಧ, ವಿಜಯೇಂದ್ರ ಯಡಿಯೂರಪ್ಪನವರ ಮಗ, ಅವನ ಬಗ್ಗೆ ನನಗೆ ಗೌರವ ಇದೆ, ನನಗೆ 72 ವರ್ಷ ಅವನಿಗೆ 40 ವರ್ಷ, ಎಲ್ಲ ದೇವರು ನೋಡಿಕೊಳ್ಳುತ್ತಾರೆ ಎಂದರು.

ಇದಕ್ಕೂ ಮುನ್ನ ಇಂದು ದೆಹಲಿಗೆ ಹೊರಡುವ ವೇಳೆ ಬೆಂಗಳೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಸೋಮಣ್ಣ, ನಾನು ಹಲವು ಸಿಎಂಗಳ ಅಡಿಯಲ್ಲಿ ಕೆಲಸ ಮಾಡಿದ್ದೇನೆ, ನನ್ನ ನೇರ ಮಾತುಗಳಿಂದ ಕೆಲವು ಬಾರಿ ಹಿನ್ನಡೆ ಆಗಿದೆ ಎಂದರು.

ಯಡಿಯೂರಪ್ಪ ನಮ್ಮ ದೊಡ್ಡ ನಾಯಕರು, ಅವರು ಪಕ್ಷಕ್ಕಾಗಿ ದುಡಿದಿದ್ದಾರೆ, ಅವರ ಬಗ್ಗೆ ಗೌರವವಿದೆ, 15 ವರ್ಷದ ಹಿಂದೆ ಏನಾಗಿತ್ತು ಅನ್ನೋದು ಅವರಿಗೆ ಗೊತ್ತು. ನಾನು ಯಾವತ್ತೂ ಇನ್ನೊಬ್ಬರ ಹಂಗಿನಲ್ಲಿ ಬದುಕಿಲ್ಲ, ಅಧಿಕಾರದ ವ್ಯಾಮೋಹವೂ ನನಗೆ ಇಲ್ಲ ಎಂದು ಹೇಳಿದ್ದಾರೆ.

ಕೆಲವು ವಿಚಾರಗಳ ಬಗ್ಗೆ ವರಿಷ್ಠರ ಜತೆ ಚರ್ಚೆ ಮಾಡುವೆ, ಪ್ರಹ್ಲಾದ್ ಜೋಶಿಯವರು ಮಾತನಾಡೋಣ ಬನ್ನಿ ಎಂದಿದ್ದಾರೆ. ದೆಹಲಿಗೆ ಹೋಗಿ ವರಿಷ್ಠರು ನೀಡುವ ಸಂದೇಶದಂತೆ ಕೆಲಸ ಮಾಡುವೆ, ಪಕ್ಷದ ಬೆಳವಣಿಗೆಗಾಗಿ ದುಡಿಯುತ್ತೇನೆ ಎಂದಿದ್ದಾರೆ.



ಬಿ.ಎಸ್.ಯಡಿಯೂರಪ್ಪ ಹೇಳಿಕೆ

ವಿ.ಸೋಮಣ್ಣ ದಿಢೀರ್ ದೇಹಲಿ ಭೇಟಿ ಬಗ್ಗೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಪ್ರತಿಕ್ರಿಯಿಸಿದ್ದಾರೆ. ಏನಿಲ್ಲ. ಎಲ್ಲಾ ಸರಿ ಇದೆ. ಸೋಮಣ್ಣನವರು ದೆಹಲಿಗೆ ಹೋಗಿರೋದು ಬೇರೆ ಕಾರಣಕ್ಕೆ. ಯಾವುದೇ ಕಾರಣಕ್ಕೂ ಸೋಮಣ್ಣ ಪಕ್ಷ ಬಿಡಲ್ಲ.

ನನಗೆ ಅವರ ಬಗ್ಗೆ ಗೌರವ ಇದೆ. ಸೋಮಣ್ಣ ನಮ್ಮ ಜೊತೆ ಇರ್ತಾರೆ, ಅವರ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡುತ್ತಿದ್ದಾರೆ, ಅವರ ಬೆಂಬಲ ಪಕ್ಷದ ಗೆಲುವಿಗೆ ಬೇಕಾಗಿದೆ ಎಂದಿದ್ದಾರೆ.

ಕೆ.ಆರ್.ಆಸ್ಪತ್ರೆಯಲ್ಲಿ ಕಾಂಕ್ಲಿಯರ್ ಇಂಪ್ಲಾಂಟ್ ಸರ್ಜರಿ

ಮೈಸೂರು, ಮಾ.15– ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಧೀನದಲ್ಲಿರುವ ಕೆ.ಆರ್.ಆಸ್ಪತ್ರೆಯಲ್ಲಿ ಮಾ.14 ರಂದು ಮೊದಲನೇ ಬಾರಿಗೆ 02 ಕಾಂಕ್ಲಿಯರ್ ಇಂಪ್ಲಾಂಟ್ ಸರ್ಜರಿಯನ್ನು ನಡೆಸಲಾಯಿತು.

ಚೀಫ್ ಕಾಂಕ್ಲಿಯರ್ ಇಂಪ್ಲಾಂಟ್ ಸರ್ಜನ್, ಆದ ಡಾ. ಸುನಿಲ್ ನಾರಾಯಣ್ ದತ್, ಅಸಿಸ್ಟೆಂಟ್ ಸರ್ಜನ್ ಡಾ.ಸುಮಿತ್ ಕುಮಾರ್ ಗೌರ್ ಮತ್ತು ಆಡಿಯಾಲಜಿಸ್ಟ್ ಆದ ಅಪೂರ್ವ್ ಕುಮಾರ್‌ರವರೊಂದಿಗೆ ಸಂಸ್ಥೆಯ ಇ.ಎನ್.ಟಿ ವಿಭಾಗದ ಮುಖ್ಯಸ್ಥ ಡಾ. ಸತೀಶ್ ಎಸ್.ರಾಜು, ಪ್ರಾಧ್ಯಾಪಕ ಡಾ. ಪ್ರವೀಣ್ ಕುಮಾರ್, ಸಹಾಯಕ ಪ್ರಾಧ್ಯಾಪಕರಾದ ಡಾ. ಸುಹಾಸ್, ಡಾ. ಸಮತಾ ಹಾಗೂ ಅರವಳಿಕೆ ವಿಭಾಗದ ಮುಖ್ಯಸ್ಥ ಡಾ. ಹೆಚ್.ಜಿ.ಮಂಜುನಾಥ್‌ರವರ ಸಹಯೋಗದೊಂದಿಗೆ ಶಸ್ತ್ರಚಿಕಿತ್ಸೆಯನ್ನು ನಿರ್ವಹಿಸಲಾಗಿದೆ. ಸದರಿ ಸರ್ಕಾರಿ ಆಸ್ಪತ್ರೆಯ ಸೌಲಭ್ಯಗಳನ್ನು ಸಾರ್ವಜನಿಕರು ಪಡೆಯುವಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರು ಮತ್ತು ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುನಾವಣಾ ನೀತಿ ಸಂಹಿತೆ ಜಾರಿಗೆ ಮುನ್ನ ಒಕ್ಕಲಿಗರಿಗೆ ಮೀಸಲಾತಿ ಹೆಚ್ಚಿಸಿ



ಬೆಂಗಳೂರು, ಮಾ.15(ಕೆಎಂಶಿ)– ರಾಜ್ಯ ವಿಧಾನಸಭೆ ಚುನಾವಣೆಯ ನೀತಿ ಸಂಹಿತೆ ಜಾರಿಯಾಗುವ ಮುನ್ನ ಒಕ್ಕಲಿಗರ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಿ ಸರ್ಕಾರ ಆದೇಶ ಹೊರಡಿಸಬೇಕು ಎಂದು ಪಟ್ಟನಾಯಕನಹಳ್ಳಿ ಗುರುಗುಂಡ ಬ್ರಹ್ಮೇಶ್ವರಸ್ವಾಮಿ ಪೀಠದ ಪೀಠಾಧಿ ಪತಿಗಳಾದ ಶ್ರೀ ನಂಜಾವಧೂತ ಸ್ವಾಮೀಜಿ ಅವರು ಒತ್ತಾಯಿಸಿದರು. ರಾಜ್ಯ ಒಕ್ಕಲಿಗರ ಸಂಘದ ವತಿಯಿಂದ ಕುವೆಂಪು ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.98 ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.95ರಷ್ಟು ಅಂಕಗಳಿಸಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಒಕ್ಕಲಿಗರ ಸಮುದಾಯಕ್ಕೆ 2ಸಿ ಮೀಸಲಾತಿಯಡಿ ಶೇ.7.5ರಷ್ಟು ಮೀಸಲಾತಿ ನೀಡುವುದಾಗಿ ಸರ್ಕಾರ ಹೇಳಿತ್ತು. ಈ ಸಂಬಂಧ ನ್ಯಾಯಾಲಯದಲ್ಲಿರುವ ತಡೆಯಾಜ್ಞೆ ತೆರವುಗೊಳಿಸಿ ಚುನಾವಣಾ ನೀತಿ ಸಂಹಿತೆ ಜಾರಿಗೂ ಮುನ್ನ ಮೀಸಲಾತಿ ಪ್ರಮಾಣ ಘೋಷಣೆ ಮಾಡಿರುವುದಕ್ಕಿಂತ ಇನ್ನಷ್ಟು ಹೆಚ್ಚಿಸಿ ಅಧಿಸೂಚನೆ ಹೊರಡಿಸಬೇಕು ಎಂದು ಸ್ವಾಮೀಜಿ ಅವರು ಆಗ್ರಹಿಸಿದರು. ಇಲ್ಲದಿದ್ದರೆ ನಮ್ಮ ಉಳಿವಿಗಾಗಿ ದೊಡ್ಡಮಟ್ಟದ ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ. ಕೇಳಿಯೂ ಗೊತ್ತು, ತೆಗೆದುಕೊಂಡು ಗೊತ್ತಿದೆ. ಈ ಹಿಂದೆ ಸಮುದಾಯ ಮಾಡಿರುವ ಹೋರಾಟ ಇನ್ನೂ ನೆನಪಿನಲ್ಲಿ ಉಳಿದಿದೆ. ಮತ್ತೆ ಆ ರೀತಿಯ ಹೋರಾಟಕ್ಕೆ ಅವಕಾಶ ಮಾಡಿಕೊಡಬಾರದು ಎಂದರು. ಮೀಸಲಾತಿ ಏರಿಳಿತದಿಂದ ಒಕ್ಕಲಿಗ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ಹೀಗಾಗಿ ಪ್ರಮುಖ ರಾಜಕೀಯ ಪಕ್ಷಗಳ ಅಧ್ಯಕ್ಷರು, ಪದಾಧಿಕಾರಿಗಳು ಒಕ್ಕಲಿಗ ಸಮುದಾಯಕ್ಕೆ ಶೇ.12–15ರಷ್ಟು ಮೀಸಲಾತಿ ಕೊಡುವ ಭರವಸೆಯನ್ನು ಬಹಿರಂಗವಾಗಿ ಘೋಷಿಸಬೇಕು. ಸಾಧ್ಯವಾದರೆ ಪಕ್ಷಗಳ ಪ್ರಣಾಳಿಕೆಯಲ್ಲೂ ಸೇರಿಸಬೇಕು ಎಂದು ಅವರು ಆಗ್ರಹಿಸಿದರು.

ಉಚಿತ ತಪಾಸಣೆ, ಚಿಕಿತ್ಸಾ ಶಿಬಿರ


ಮೈಸೂರು, ಮಾ.15– ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ ಹೊರರೋಗಿ ವಿಭಾಗದಲ್ಲಿ (ರೂಮ್ ನಂಬರ್–10) ಮಾ.24 ರಿಂದ "ಹುಳುಕಡ್ಡಿ ಅಥವಾ ಗಜಕರ್ಣಕ್ಕೆ (Fungal/Tinea Infection)" ಸಂಬಂಧಿಸಿದ ತೊಂದರೆ ಗಳಿಗೆ ತಪಾಸಣಾ ಮತ್ತು ಉಚಿತ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಮಾಹಿತಿಗಾಗಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಸ್ನಾತ ಕೋತ್ತರ ಪದವಿ ವಿದ್ಯಾರ್ಥಿನಿ ಯಾದ ಡಾ.ಡಯಾನ ಟಿ.ಎಲ್.(86181 67579) ಅವರನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಆಸ್ಪತ್ರೆಯ ಪ್ರಾಚಾ ರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ವಿಧಾನಸಭೆ ಚುನಾವಣೆಗೆ ಮುನ್ನ ಒಕ್ಕಲಿಗರಿಗೆ ಮೀಸಲಾತಿ ಹೆಚ್ಚಳ; ಪಂಚಮಸಾಲಿಗರ ಹಿಂದುಳಿದ ವರ್ಗಕ್ಕೆ ಸೇರಿಸುವುದು ಅಸಂಭವ

■ ಸ್ವತಃ ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಇಂಗಿತ ■ ತರಾತುರಿಯಲ್ಲಿ ಯಾವ ತೀರ್ಮಾನಕ್ಕೂ ಬರಲಾಗದು; ಕೂಲಂಕಷ ಪರಿಶೀಲನೆ ನಂತರವೇ ನಿರ್ಣಯ

ಬೆಂಗಳೂರು, ಮಾ.15(ಕೆಎಂಶಿ)– ಮುಂಬರುವ ವಿಧಾನ ಸಭಾ ಚುನಾವಣೆಗೆ ಮುನ್ನವೇ ಒಕ್ಕಲಿಗರ ಮೀಸಲಾತಿ ಹೆಚ್ಚಳ, ಪಂಚಮಸಾಲಿಗಳನ್ನು ಹಿಂದುಳಿದ ವರ್ಗಕ್ಕೆ ಸೇರಿಸುವುದು ಇಲ್ಲವೇ ಪರ್ಯಾಯವಾಗಿ ಮೀಸಲಾತಿ ಕಲ್ಪಿಸುವುದು ಕನಸಾಗಿಯೇ ಉಳಿಯಲಿದೆ.



ಜಯಪ್ರಕಾಶ್ ಹೆಗ್ಡೆ

ಈ ಎರಡು ಸಮುದಾಯಗಳು ಸೇರಿದಂತೆ ಕೆಲವು ವರ್ಗಗಳಿಗೆ ಮೀಸಲಾತಿ ಸೌಲಭ್ಯ ಕಲ್ಪಿಸುವ ಮತ್ತು ಹೆಚ್ಚಿಸುವ ಬಗ್ಗೆ ಸರ್ಕಾರ ನಿರಂತರವಾಗಿ ಭರವಸೆ ನೀಡುತ್ತಲೇ ಬಂದಿದೆ. ಆದರೆ ಇಂದು ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರು ಸುದ್ದಿಗೋಷ್ಠಿಯಲ್ಲಿ ನೀಡಿರುವ ಅಂಕಿ ಅಂಶಗಳನ್ನು ಗಮನಿಸಿದರೆ ಚುನಾವಣೆಗೂ ಮುನ್ನ ಯಾವುದೇ ಸಮುದಾಯಗಳಿಗೂ ಹೆಚ್ಚುವರಿ ಮೀಸಲಾತಿ ಸೌಲಭ್ಯ ದೊರೆಯುವ ಸಾಧ್ಯತೆ ಇಲ್ಲ.

ಆಯೋಗ ಕೆಲವು ನಿರ್ಧಾರಗಳನ್ನು ಕೈಗೊಂಡಿದ್ದು, ಇದರಿಂದ ಒಂದಷ್ಟು ವರ್ಗಗಳಿಗೆ ಅನುಕೂಲವಾಗಲಿದೆ.

ಸುದ್ದಿಗೋಷ್ಠಿಯಲ್ಲಿ ಪೂರ್ಣ ಮಾಹಿತಿ ನೀಡಿದ ಹೆಗ್ಡೆ ಅವರು, ಪಂಚಮಸಾಲಿ ಸಮುದಾಯ ಕುರಿತು ಈಗಾಗಲೇ ಮಧ್ಯಂತರ ವರದಿಯನ್ನು ಸಲ್ಲಿಸಲಾ ಗಿದ್ದು, ಪೂರ್ಣ ವರದಿ ಗಡಿಬಿಡಿಯಲ್ಲಿ ನೀಡಲು ಸಾಧ್ಯ ವಿಲ್ಲ ಎಂದು ಸ್ಪಷ್ಟಪಡಿಸಿದರು. ಆಯೋಗ ವಿವಿಧೆಡೆ ಭೇಟಿ, ಪ್ರವಾಸ ಕೈಗೊಂಡು ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳ ಅಧ್ಯಯನ ಮಾಡಿ ಮಾಹಿತಿ ಸಂಗ್ರಹಿಸಿ, ಪರಿಶೀಲನೆ ನಂತರ ನಿಯಮಾನುಸಾರ ವರದಿ ಸಲ್ಲಿಸಬೇಕು.

ವೀರಶೈವ ಪಂಚಮಸಾಲಿ ಸಮುದಾಯಗಳ ವಿವಿಧ ಸಂಘ–ಸಂಸ್ಥೆಗಳು ನೀಡಿರುವ ಮನವಿಗಳ ಜೊತೆಗೆ ಬೇರೆ ಬೇರೆ ಹಿಂದುಳಿದ ವರ್ಗಗಳ ಸ್ಥಿತಿಗತಿ ಕುರಿತು ರಾಜ್ಯದ ಹಲವು ಜಿಲ್ಲೆಗಳಿಗೆ ಭೇಟಿ ನೀಡಿ ಅವರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಅಧ್ಯಯನ ನಡೆಸಿ ಮಾಹಿತಿ ಸಂಗ್ರಹಿಸುವುದರ ಜೊತೆಗೆ ವಿವಿಧ ಸರ್ಕಾರಿ ಹಾಗೂ ವಿಶ್ವವಿದ್ಯಾಲಯಗಳಿಂದ ದ್ವಿತೀಯ ಮೂಲದ ಮಾಹಿತಿಯನ್ನು ಸಂಗ್ರಹಿಸಲಾ ಗಿದ್ದು ವರದಿ ತಯಾರಿಕೆಯ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು. ಅದೇ ರೀತಿ ರಾಜ್ಯ ಒಕ್ಕಲಿಗರ ಕೇಂದ್ರ ಸಂಘ ಈಗಿರುವ ಮೀಸಲಾತಿಯನ್ನು ಹೆಚ್ಚಿಸುವಂತೆ ಆಯೋಗಕ್ಕೆ ಮನವಿ ಸಲ್ಲಿಸಿದ್ದು, ಸದರಿ ಮನವಿಗೆ ಸಂಬಂಧಿಸಿದ ಪ್ರಕ್ರಿಯೆ ಪರಿಶೀಲನಾ ಹಂತದಲ್ಲಿದೆ ಎಂದರು. ಲಿಂಗಾಯತ ಕುಡು ಒಕ್ಕಲಿಗ, ಆದಿಬಣಜಿಗ, ನೊಳಂಬ, ಮಲ್ಲವ ಮಲೇಗೌಡ, ಲಿಂಗಾಯತ ರಡ್ಡಿ, ಗೌಡ ಲಿಂಗಾಯತ, ಶಿವಸಿಂಪಿ, ಬಣಗಾರ, ಶಿವಾ ಚಾರ ನಗರ್ತ, 24 ಮನೆ ತೆಲುಗು ಶೆಟ್ಟಿ ಆರೇರ, ಕನ್ನಡ ವೈಶ್ಯ ಗಾಣಿಗ ಸಮುದಾಯದ ಉಪಜಾತಿಗಳು ಹಾಗೂ ವಿವಿಧ ವೀರಶೈವ, ಲಿಂಗಾಯತ ಸಮು ದಾಯದ ಬಗ್ಗೆ ವರದಿ ತಯಾರಿಸಿ, ಸರ್ಕಾರಕ್ಕೆ ಸಲ್ಲಿಸಲು ದ್ವಿತೀಯ ವರದಿಯನ್ನು ಸಿದ್ಧಪಡಿಸಿದ್ದು, ಮುದ್ರಣದ ಹಂತದಲ್ಲಿರುತ್ತದೆ, ಅದನ್ನು ಸಹ ಸದ್ಯದಲ್ಲಿಯೇ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದರು.

ಉದ್ಯೋಗ ಮೀಸಲಾತಿಗಾಗಿ ಆದಾಯವನ್ನು ಪರಿಗಣಿಸುವಾಗ ಕೇವಲ ಪೋಷಕರ ಆದಾಯವನ್ನು ಮಾತ್ರ ಪರಿಗಣಿಸುವ ಮಾದರಿಯನ್ನು ಕರ್ನಾಟಕ ಸರ್ಕಾರವು ಅಳವಡಿಸಿಕೊಂಡು ಜಾರಿಗೆ ತರಲು ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ತೀರ್ಮಾನಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಹಿಂದುಳಿದ ವರ್ಗಗಳಿಗೆ ಜಾತಿ, ಆದಾಯ ಪ್ರಮಾಣ ಪತ್ರ ನೀಡುವಾಗ ಪ್ರಸ್ತುತ ಕರ್ನಾಟಕ ರಾಜ್ಯದ ಕೆನೆಪದರ ನೀತಿ ಅನ್ವಯ ಅಭ್ಯರ್ಥಿ ಮತ್ತು ತಂದೆ, ತಾಯಿ, ಗಂಡ, ಹೆಂಡತಿ ಇವರ ಒಟ್ಟು ಆದಾಯ ವನ್ನು ಪರಿಗಣಿಸಲಾಗುತ್ತಿದ್ದು, ಇದರಿಂದ ಔದ್ಯೋಗಿಕ ಮೀಸಲಾತಿಗಾಗಿ ಆದಾಯವನ್ನು ಪರಿಗಣಿಸುವಾಗ ಗೊಂದಲ ಉಂಟಾಗಿ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ಪಡೆಯಲು ತೊಂದರೆಯಾಗಿದೆ.

ಇಂತಹ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಮತ್ತು ನ್ಯಾಯಾಲಯದ ಆದೇಶದ ಅನುಸಾರ ಉದ್ಯೋಗ ಮೀಸಲಾತಿಗಾಗಿ ಆದಾಯ ವನ್ನು ಪರಿಗಣಿಸುವಾಗ ಕೇವಲ ಪೋಷಕರ ಆದಾಯವನ್ನು ಮಾತ್ರ ಪರಿಗಣಿಸುವ ಮಾದರಿ ಅಳವಡಿಸಿ ಕೊಂಡು ಜಾರಿಗೆ ತರಲು ಸೂಕ್ತ ಕ್ರಮಕೈಗೊಳ್ಳಲು ತೀರ್ಮಾನ ಕೈಗೊಳ್ಳಬೇಕು.

ಮಾ.18ರಂದು ಮಡಿಕೇರಿಗೆ ಸಿಎಂ ಬಸವರಾಜ ಬೊಮ್ಮಾಯಿ

ಫಲಾನುಭವಿಗಳ ಸಮ್ಮೇಳನ ಯಶಸ್ಸಿಗೆ ಶ್ರಮಿಸಿ: ಬಿ.ಸಿ.ನಾಗೇಶ್



ಮಡಿಕೇರಿ, ಮಾ.15– ಸರ್ಕಾರದ ವಿವಿಧ ಯೋಜನೆಯ ಫಲಾನುಭವಿಗಳ ಸಮ್ಮೇಳನವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಮಾ.18 ರಂದು ನಗರದ ಗಾಂಧಿ ಮೈದಾನದಲ್ಲಿ ನಡೆಯಲಿದ್ದು, ಸಮ್ಮೇಳನದ ಯಶಸ್ಸಿಗೆ ಶ್ರಮಿಸುವಂತೆ ಎಲ್ಲಾ ಹಂತದ ಅಧಿಕಾರಿಗಳಿಗೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಸಿ.ನಾಗೇಶ್ ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ಸಮ್ಮೇಳನ ಸಿದ್ಧತೆ ಸಂಬಂಧಿಸಿದಂತೆ ಬುಧವಾರ ಮಾಹಿತಿ ಪಡೆದು ಸಚಿವರು ಮಾತನಾಡಿದರು.

ಫಲಾನುಭವಿಗಳ ಸಮ್ಮೇಳನವು ಸರ್ಕಾರದ ಕಾರ್ಯಕ್ರಮವಾಗಿದ್ದು, ಮುಖ್ಯಮಂತ್ರಿ ಅವರು ಫಲಾನುಭವಿಗಳ ಜೊತೆ ಸಂವಾದ ನಡೆಸಲಿದ್ದಾರೆ ಎಂದು ಸಚಿವರು ತಿಳಿಸಿದರು.

ಫಲಾನುಭವಿಗಳ ಸಮ್ಮೇಳನ ಜೊತೆಗೆ ನಗರದಲ್ಲಿ ನಿರ್ಮಾಣವಾಗಿರುವ ಗಾಂಧಿ ಭವನ, ಗ್ರೇಟರ್ ರಾಜಸೀಟು ಉದ್ಯಾನವನ ಸೇರಿದಂತೆ ಹಲವು ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಅವರು ಹೇಳಿದರು.

ಕಾರ್ಯಕ್ರಮ ಸಂಬಂಧ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಜಿಲ್ಲಾಡಳಿತದ ಜೊತೆ ನಿರಂತರ ಸಂಪರ್ಕದಲ್ಲಿದ್ದು, ಕಾರ್ಯಕ್ರಮ ಯಶಸ್ಸಿಗೆ ಎಲ್ಲಾ ಹಂತದ ಅಧಿಕಾರಿಗಳು ತೊಡಗಿಸಿಕೊಳ್ಳುವಂತೆ ಸಚಿವರು ನಿರ್ದೇಶನ ನೀಡಿದರು.

ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಸಹಕಾರ, ಪರಿಶಿಷ್ಟ ವರ್ಗಗಳ ಕಲ್ಯಾಣ, ಸಮಾಜ ಕಲ್ಯಾಣ, ಕಾರ್ಮಿಕ, ಅಲ್ಪಸಂಖ್ಯಾತರ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಯುವ ಸಬಲೀಕರಣ ಮತ್ತು ಕ್ರೀಡೆ, ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮ, ಹಿಂದುಳಿದ ವರ್ಗಗಳ ಕಲ್ಯಾಣ, ಕಂದಾಯ, ಸಾರ್ವಜನಿಕ ಶಿಕ್ಷಣ, ಪೌರಾಡಳಿತ, ಸೆಸ್ಕ್, ನಗರ ಕುಡಿಯುವ ನೀರು ಪೂರೈಕೆ ಹೀಗೆ ವಿವಿಧ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಸೌಲಭ್ಯ ಪಡೆದಿರುವ ಹಾಗೂ ಪಡೆಯುವ ಫಲಾನುಭವಿಗಳನ್ನು ಆಹ್ವಾನಿಸುವಂತೆ ಸಚಿವರು ಹೇಳಿದರು.

ಶಾಸಕರಾದ ಕೆ.ಜಿ.ಬೋಪಯ್ಯ ಅವರು ಮಾತನಾಡಿ, ಇನ್ನೂ ಹಲವು ಕಾಮಗಾರಿಗಳು ಉದ್ಘಾಟನೆಗೆ ಸಿದ್ಧವಾಗಿದ್ದು, ಅವುಗಳನ್ನು ಸೇರಿಸುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಪ್ರತಿಯೊಬ್ಬರೂ ಸರ್ಕಾರದ ಸೌಲಭ್ಯಗಳ ಒಂದಲ್ಲ ಒಂದು ಫಲಾನುಭವಿಗಳಾಗಿದ್ದಾರೆ ಎಂದರು. ಶಾಸಕರಾದ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ಜಿಲ್ಲೆಯಲ್ಲಿ 50 ಸೆಂಟ್‌ಗಿಂತ ಕಡಿಮೆ ಭೂಮಿ ಹೊಂದಿ ಹಕ್ಕುಪತ್ರಕ್ಕಾಗಿ ಸಲ್ಲಿಸಿರುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡುವಂತೆ ತಾಕೀತು ಮಾಡಿದರು.

ಏ.5ರಂದು ಐಮುಡಿಯಂಡ ರಾಣಿ ಮಾಚಯ್ಯ ಅವರಿಗೆ ಪದ್ಮಶ್ರೀ ಪ್ರದಾನ

ಮಡಿಕೇರಿ, ಮಾ.15– ಐಮುಡಿಯಂಡ ರಾಣಿ ಮಾಚಯ್ಯ ಅವರಿಗೆ ಏಪ್ರಿಲ್



5ರಂದು ಬುಧವಾರ ದೆಹಲಿಯಲ್ಲಿ ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಗೃಹ ಸಚಿವಾಲಯದ ಕಾರ್ಯದರ್ಶಿ ಪಾಂಡೆ ಪ್ರದೀಪ್ ಕುಮಾರ್ ಅವರು ರಾಣಿ ಮಾಚಯ್ಯ ಅವರಿಗೆ ಅಧಿಕೃತ ಆಹ್ವಾನ ನೀಡಿದ್ದಾರೆ.

ಮಡಿಕೇರಿಯ ರಾಣಿ ಪೇಟೆಯ ನಿವಾಸಿ ಐಮುಡಿಯಂಡ ರಾಣಿ ಮಾಚಯ್ಯ ಅವರಿಗೆ ಏಪ್ರಿಲ್ 5 ರಂದು ರಾಷ್ಟ್ರಪತಿ ಭವನದ ದರ್ಬಾರ್ ಹಾಲ್‌ನಲ್ಲಿ ಪ್ರತಿಷ್ಠಿತ 'ಪದ್ಮಶ್ರೀ' ಪ್ರದಾನ ಮಾಡಲಾಗುತ್ತದೆ. ಕೊಡವ ಸಾಂಪ್ರದಾಯಿಕ ಉಮ್ಮತ್ತಾಟ್ ಜಾನಪದ ಕಲಾ ತರಬೇತಿಗಾಗಿ ರಾಣಿ ಮಾಚಯ್ಯ ಅವರು ಕೇಂದ್ರ ಸರ್ಕಾರದ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈವರೆಗೆ 10 ಸಾವಿರಕ್ಕೂ ಅಧಿಕ ವಿದ್ಯಾರ್ಥಿನಿಯರಿಗೆ ಉಮ್ಮತ್ತಾಟ್ ನೃತ್ಯ ತರಬೇತಿ ನೀಡಿರುವ ಕೀರ್ತಿ ರಾಣಿ ಮಾಚಯ್ಯ ಅವರಿಗೆ ಸಲ್ಲುತ್ತದೆ.

ಅಂತರ್ಜಾತಿ ವಿವಾಹವಾದ ಯುವತಿ ನಾಲ್ಕೇ ದಿನದಲ್ಲಿ ಪತಿ ಮನೆಯವರಿಂದ ಕೊಲೆ

ಪತ್ನಿ ಸಾವಿನ ಬಳಿಕ ಆತ್ಮಹತ್ಯೆಗೆ ಯತ್ನಿಸಿದ ಪತಿ

- ಮೂರು ವರ್ಷದಿಂದ ಪ್ರೀತಿಸಿ ಮದುವೆಯಾಗಿದ್ದರು
- ಹೆಬ್ಬಾಲೆಯಲ್ಲಿ ಘಟನೆ
- ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲು

ಮಡಿಕೇರಿ, ಮಾ.15– ಮೂರು ವರ್ಷ ಪ್ರೀತಿಸಿ ಅಂತರ್ಜಾತಿ ವಿವಾಹವಾಗಿದ್ದ ಯುವತಿ ಮದುವೆಯಾದ ನಾಲ್ಕನೇ ದಿನಕ್ಕೆ ಪತಿ ಮನೆಯವರಿಂದ ಹತ್ಯೆಗೀಡಾಗಿದ್ದಾಳೆ ಎಂದು ಪ್ರಕರಣ ದಾಖಲಾಗಿದೆ.

ಹೆಬ್ಬಾಲೆ 6ನೇ ಹೊಸಕೋಟೆ ಗ್ರಾಮ ನಿವಾಸಿ ರಾಜು, ವನಜಾಕ್ಷಿ ದಂಪತಿ ಪುತ್ರಿ ಅಕ್ಷಿತ(18) ಹತ್ಯೆಗೀಡಾದವಳಾಗಿದ್ದು, ಈಕೆಯನ್ನು ಪತಿ ಹೇಮಂತ್, ಆತನ ತಂದೆ ದಶರಥ ಹಾಗೂ ತಾಯಿ ಗಿರಿಜಾ ಕೊಲೆ ಮಾಡಿದ್ದಾರೆ ಎಂದು ಯುವತಿಯ ತಂದೆ ನೀಡಿದ ದೂರನ್ನು ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಪ್ರಕರಣ ಹಿನ್ನೆಲೆ: ಕುಶಾಲನಗರದ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದ ಅಕ್ಷಿತ ಮತ್ತು ಕೂಲಿ ಕೆಲಸ ಮಾಡುತ್ತಿದ್ದ ಹೇಮಂತ್ ಒಂದೇ ಗ್ರಾಮದವರಾಗಿದ್ದು, ಕಳೆದ 3 ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು ಎನ್ನಲಾಗಿದೆ. ಈ ವಿಚಾರ ಎರಡೂ ಕುಟುಂಬಗಳಿಗೆ ತಿಳಿದಿರಲಿಲ್ಲ ಎನ್ನಲಾಗಿದ್ದು, ಮಾ.10 ರಂದು ಅಕ್ಷಿತ ಬೈಲುಕೊಪ್ಪದ ಬ್ಯಾಂಕಿಗೆ ಹೋಗಿ ಬರುವುದಾಗಿ ತಿಳಿಸಿ ಮನೆಯಿಂದ ಹೊರಟವಳು, ಮಧ್ಯಾಹ್ನ 2 ಗಂಟೆ ವೇಳೆಗೆ ಹೇಮಂತ್ ಜೊತೆ ಅಂತರ್ಜಾತಿ ವಿವಾಹವಾಗಿ ಯುವಕನ ಮನೆ ಸೇರಿದ್ದಳು. ಈ ವಿಚಾರ ತಿಳಿದು ಯುವಕನ ತಾಯಿ ಗಿರಿಜಾ ಯುವತಿಯ ಮನೆಯವರೊಂದಿಗೆ



ಸಾವನ್ನಪ್ಪಿದ ಅಕ್ಷಿತ

ಜಗಳವಾಡಿದ್ದರು ಎನ್ನಲಾಗಿದೆ.

ಕೊಲೆ: ಮಂಗಳವಾರ (ಮಾ.14) ಮಧ್ಯಾಹ್ನ 2.30ರ ಸುಮಾರಿನಲ್ಲಿ ಹೇಮಂತ್ ಮನೆಯ ಪಕ್ಕದ ನಿವಾಸಿಗಳು ಅಕ್ಷಿತ ಕುಸಿದು ಬಿದ್ದಿದ್ದಾಳೆ ಎಂದು ಆಕೆಯ ಪೋಷಕರಿಗೆ ಮಾಹಿತಿ ನೀಡಿದ್ದಾರೆ. ಪೋಷಕರು ಹೇಮಂತ್ ಮನೆಗೆ ಆಗಮಿಸಿದಾಗ ಅಕ್ಷಿತ ಕುಸಿದು ಬಿದ್ದಿದ್ದು, ಆಕೆಗೆ ತೀವ್ರ ರಕ್ತಸ್ರಾವವಾಗಿತ್ತು.

ತಕ್ಷಣವೇ ಆಟೋ ರಿಕ್ಷಾ ಒಂದರಲ್ಲಿ ಆಕೆಯನ್ನು ಹೆಬ್ಬಾಲೆಯ ಆಸ್ಪತ್ರೆಗೆ ಆಕೆಯ ಪೋಷಕರೇ ಕೊಂಡೊಯ್ದಿದ್ದು, ಅಲ್ಲಿನ ವೈದ್ಯರ ಸಲಹೆ ಮೇರೆಗೆ ಕುಶಾಲನಗರ ಸರಕಾರಿ ಆಸ್ಪತ್ರೆಗೆ ಕರೆತಂದಾಗ ಅಕ್ಷಿತ ಸಾವನ್ನಪ್ಪಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ.

ಪತಿ ಆತ್ಮಹತ್ಯೆಗೆ ಯತ್ನ: ಈ ಎಲ್ಲಾ ಬೆಳವಣಿಗೆಗಳ ನಡುವೆ ಅಕ್ಷಿತ ಮೃತಪಟ್ಟಿರುವ ಸುದ್ದಿ ತಿಳಿದು ಆಕೆಯ ಪತಿ ಹೇಮಂತ್ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದಾನೆ. ತಕ್ಷಣವೇ ಆತನಿಗೆ ಕುಶಾಲನಗರ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.



ಹೇಮಂತ್

'ಕೊಲೆ' ಆರೋಪ': ಮದುವೆಯಾಗಿ 4ನೇ ದಿನದಲ್ಲೇ ಮಗಳು ಅಕ್ಷಿತ ಕೊಲೆಯಾಗಿರುವ ಹಿನ್ನೆಲೆಯಲ್ಲಿ ಆಕೆಯ ಪೋಷಕರು ಜಿಲ್ಲಾಸ್ಪತ್ರೆಯ ಮುಂದೆ ಗೋಳಾಡುತ್ತಿದ್ದ ದೃಶ್ಯ ಕಂಡುಬಂತು.

ನನ್ನ ಮಗಳನ್ನು ಆಕೆಯ ಪತಿ ಮತ್ತವನ ಪೋಷಕರು ಕೊಲೆ ಮಾಡಿದ್ದಾರೆ. ಆಕೆ ಆತ್ಮಹತ್ಯೆ ಮಾಡಿಕೊಳ್ಳುವ ಮನಃಸ್ಥಿತಿ ಹೊಂದಿಲ್ಲ. ಆಕೆಗೆ ಯಾವುದೇ ಅನಾರೋಗ್ಯವೂ ಇರಲಿಲ್ಲ. ಹೇಮಂತ್ ಮನೆಯವರು ನಮ್ಮ ಮಗಳನ್ನು ಕೊಲೆ ಮಾಡಿದ್ದಾರೆ. ಪೊಲೀಸರು ತನಿಖೆ ನಡೆಸಿ ನಮ್ಮ ಮಗಳ ಸಾವಿಗೆ ನ್ಯಾಯ ಒದಗಿಸಬೇಕು. ಅಪರಾಧಿಗಳಿಗೆ ಶಿಕ್ಷೆಯಾಗಬೇಕೆಂದು ಆಗ್ರಹಿಸಿದರು.

ಮರಣೋತ್ತರ ಪರೀಕ್ಷೆ: ಮದುವೆಯಾದ ಬೆರಳೆಣಿಕೆ ದಿನದಲ್ಲೇ ಯುವತಿ ಹತ್ಯೆಗೀಡಾದ ಹಿನ್ನೆಲೆಯಲ್ಲಿ ನಗರದ ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜು, ವಿಧಿ ವಿಜ್ಞಾನ ಪ್ರಯೋಗಾಲಯ ತಜ್ಞರು, ತಜ್ಞ ವೈದ್ಯರು, ಪೊಲೀಸ್ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲಿ ಅಕ್ಷಿತ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಬಳಿಕ ಮೃತದೇಹವನ್ನು ಪೋಷಕರಿಗೆ ಹಸ್ತಾಂತರಿಸಲಾಯಿತು.

ತನ್ನ ಮಗಳು ಹೇಮಂತ್‌ನನ್ನು ಅಂತರ್ಜಾತಿ ವಿವಾಹವಾದ ಹಿನ್ನೆಲೆಯಲ್ಲಿ ಆತನ ಮನೆಯವರು ಮಗಳಿಗೆ ಜಾತಿ ನಿಂದನೆ ಮಾಡಿದ್ದಲ್ಲದೆ, ಕೊಲೆ ಮಾಡಿದ್ದಾರೆ ಎಂದು ಅಕ್ಷಿತ ತಂದೆ ರಾಜು ಆರೋಪಿಸಿದ್ದಾರೆ. ಈ ಸಂಬಂಧ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಮಗಳು ಕುಸಿದು ಬೀಳುವ ಕೇವಲ 15 ನಿಮಿಷಗಳ ಮುನ್ನ ಆರೋಗ್ಯಕರವಾಗಿ ಓಡಾಡುತ್ತಿದ್ದುದ್ದನ್ನು ಅಕ್ಕಪಕ್ಕದ ಮನೆಯವರು ನೋಡಿದ್ದು, ನಂತರ ಮಗಳನ್ನು ಅಳಿಯನ ಮನೆಯವರು ಕೊಲೆ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಮೃತ ಯುವತಿಯ ತಂದೆ ರಾಜು ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 'ನನ್ನ ಮಗಳನ್ನು ಆಕೆಯ ಪತಿಯ ಕಡೆಯವರು ಹೊಡೆದು ಕೊಂದಿದ್ದಾರೆ' ಎಂದು ದೂರು ದಾಖಲಿಸಿದ್ದಾರೆ. ಆಕೆ ಅಸ್ವಸ್ಥರಾಗುವ 15 ನಿಮಿಷ ಮೊದಲು ಆಕೆಯನ್ನು ಅಕ್ಕಪಕ್ಕದ ಮನೆಯವರು ನೋಡಿದ್ದಾರೆ. ಐಪಿಸಿ ಸೆಕ್ಷನ್ 302 ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರಕರಣದ ವಿಚಾರಣೆ ನಡೆಸಲಾಗುತ್ತಿದ್ದು, ತನಿಖೆ ಪೂರ್ಣಗೊಂಡ ಬಳಿಕ ಸಾವಿನ ಹಿಂದಿನ ಸತ್ಯ ತಿಳಿಯಲಿದೆ.

-ಕೆ.ರಾಮರಾಜನ್
ಎಸ್.ಪಿ. ಕೊಡಗು.

ಗೋವಾ ಕಳ್ಳತನದಲ್ಲಿ ಭಾಗಿಯಾಗಿದ್ದ ಕೊಡಗಿನ ಓರ್ವ ಸೇರಿ ಮೂವರ ಬಂಧನ

ಮಡಿಕೇರಿ, ಮಾ.15– ಗೋವಾದಲ್ಲಿ ನಡೆದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಡಗು ಜಿಲ್ಲೆಯ ಆರೋಪಿ ಸೇರಿದಂತೆ ಮೂವರನ್ನು ಗೋವಾ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಿದ್ದಾಪುರ ಹೈಸ್ಕೂಲ್ ಪೈಸಾರಿ ನಿವಾಸಿ ಶಾಜಿ ಸೇರಿದಂತೆ ಕೇರಳ ರಾಜ್ಯದ ಶರೀಫ್ ಹಾಗೂ ಶ್ರೀತು ಬಂಧಿತ ಆರೋಪಿಗಳಾಗಿದ್ದಾರೆ.



ಗೋವಾ ರಾಜಧಾನಿ ಪಣಜಿಯ ಪೆರನಮ್ ಸೇರಿದಂತೆ ಸುತ್ತಲಿನ ಪ್ರವಾಸಿ ತಾಣಗಳಲ್ಲಿ, ಜನನಿಬಿಡ ಪ್ರದೇಶದಲ್ಲಿ ಭಾರತೀಯರು ಹಾಗೂ ವಿದೇಶಿಯರನ್ನು ಗುರಿಯಾಗಿಸಿ ಅವರು ತಂಗುತ್ತಿದ್ದ ಮನೆ, ರೆಸಾರ್ಟ್ ಮತ್ತಿತರೆಡೆ ಬೀಗ ಮುರಿದು ಮತ್ತು ಕಿಟಕಿ ಒಡೆದು ಬೆಲೆಬಾಳುವ ವಸ್ತುಗಳು, ಹಣವನ್ನು ಮೂವರು ದೋಚುತ್ತಿದ್ದರು ಎಂಬ ಆರೋಪದಡಿ ವಿವಿಧ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿತ್ತು.

ತನಿಖೆ ಕೈಗೊಂಡ ಪೊಲೀಸರು ಆರೋಪಿಗಳ ಪತ್ತೆಗೆ ತಂಡ ರಚಿಸಿದ್ದರು. ಇದೀಗ ಮೂವರನ್ನು ಗೋವಾ ಪೊಲೀಸರು ಬಂಧಿಸಿ ತನಿಖೆಗೆ ಒಳಪಡಿಸಿದ್ದಾರೆ. ಆರೋಪಿಗಳಿಂದ ಅಪಾರ ಪ್ರಮಾಣದ ನಗದು, ಬೆಲೆ ಬಾಳುವ ಕ್ಯಾಮರಾ, ಲೆನ್ಸ್, ಲಕ್ಷಾಂತರ ರೂಪಾಯಿ ಮೌಲ್ಯದ ಮೊಬೈಲ್, ಲ್ಯಾಪ್‌ಟಾಪ್, ಆಭರಣ ಮತ್ತಿತರ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಕಾಡಾನೆ ದಾಳಿಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ಅರಣ್ಯ ಸಿಬ್ಬಂದಿ ಬಿದ್ದು ಗಾಯ

ಮಡಿಕೇರಿ, ಮಾ.15– ಕಾಡಾನೆ ದಾಳಿ ಮಾಡಿದ ಸಂದರ್ಭ ತಪ್ಪಿಸಿಕೊಳ್ಳಲು ಓಡುತ್ತಿದ್ದಾಗ ನಿಯಂತ್ರಣ ತಪ್ಪಿ ಬಿದ್ದ ಅರಣ್ಯ ಸಿಬ್ಬಂದಿಯೊಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಬೇಗೂರು ಗ್ರಾಮದ ಚಿನಿವಾಡ ಎಂಬಲ್ಲಿ ನಡೆದಿದೆ. ತೇಜಸ್ ಎಂಬವರು ತೀವ್ರವಾಗಿ ಗಾಯಗೊಂಡಿದ್ದು, ಸುಳ್ಯ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಕೆಲವು ದಿನಗಳ ಹಿಂದೆ ಕಾಡಾನೆ ಮರಿಗೆ ಜನ್ಮ ನೀಡಿತ್ತು. ಆದರೆ ಮರಿ ಹುಟ್ಟಿದಾಕ್ಷಣ ಸಾವನ್ನಪ್ಪಿತ್ತು. ವಿಷಯ ತಿಳಿದು ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿದಾಗ ಕಾಡಾನೆ ದಾಳಿಗೆ ಮುಂದಾಗಿದೆ. ತಕ್ಷಣ ಎಚ್ಚೆತ್ತುಕೊಂಡ ತೇಜಸ್ ಓಡಿದಾಗ ಆಯತಪ್ಪಿ ಬಿದ್ದಿದ್ದಾರೆ ಎಂದು ಹೇಳಲಾಗಿದೆ.

ಮಾದಕ ವಸ್ತು ಮಾರುತ್ತಿದ್ದ ಯುವಕನ ಬಂಧನ: ಎಂಡಿಎಂಎ ವಶ

ಮಡಿಕೇರಿ, ಮಾ.15– ಮಾದಕ ವಸ್ತು ಮಾರಾಟದ ಮೇಲೆ ಹದ್ದಿನ ಕಣ್ಣಿಟ್ಟಿರುವ ಕೊಡಗು ಜಿಲ್ಲಾ ಪೊಲೀಸರು ಎಂ.ಡಿ.ಎಂ.ಎ ಎಂಬ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಓರ್ವ ಆರೋಪಿಯನ್ನು ಮಾಲು ಸಹಿತ ಬಂಧಿಸಿದ್ದಾರೆ.



ಮಡಿಕೇರಿ ನಿವಾಸಿ ಎಂ.ಹೆಚ್. ಸಯ್ಯದ್ ಹುಸೇನ್ (27) ಎಂಬಾತನೇ ಬಂಧಿತ ಆರೋಪಿ. ಆತನ ಬಳಿಯಿದ್ದ 3.06 ಗ್ರಾಂ ಮಾದಕ ವಸ್ತುವನ್ನು ವಶಕ್ಕೆ ಪಡೆಯಲಾಗಿದೆ.

ಜಿಲ್ಲೆಯಲ್ಲಿ ಮಾದಕ ವಸ್ತು ಮಾರಾಟ ಪ್ರಕರಣಗಳ ಕುರಿತು ಪೊಲೀಸ್ ಇಲಾಖೆಗೆ ಸಾರ್ವಜನಿಕರ ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ಕೊಡಗು ಸೆನ್ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಜೆ.ಕೆ. ರಾಘವೇಂದ್ರ ನೇತೃತ್ವದಲ್ಲಿ ತನಿಖಾ ತಂಡ ರಚಿಸಲಾಗಿತ್ತು. ಮಾಹಿತಿ ಕಲೆ ಹಾಕುತ್ತಿದ್ದ ಸಂದರ್ಭ ವ್ಯಕ್ತಿಯೋರ್ವ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಎಂ.ಡಿ.ಎಂ.ಎ ಎಂಬ ಮಾದಕ ವಸ್ತುವನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಖಚಿತ ಮಾಹಿತಿ ಈ ತಂಡಕ್ಕೆ ಲಭಿಸಿತ್ತು. ಅದರಂತೆ ದಾಳಿ ನಡೆಸಿ ಪರಿಶೀಲಿಸಿದಾಗ ಆರೋಪಿ ಬಳಿ ಮಾದಕ ವಸ್ತು ಪತ್ತೆಯಾಗಿದೆ. ಸ್ಥಳದಲ್ಲೇ ಆರೋಪಿಯನ್ನು ಬಂಧಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ಸರ್ವ ಸದಸ್ಯರ ಸಭೆ

ಕೊಳ್ಳೇಗಾಲ, ಮಾ.15– ಇಲ್ಲಿನ ದೇವಾಂಗ ಮಹಾಜನ ಸಂಘದ ಸರ್ವ ಸದಸ್ಯರ ಸಭೆ ಮಾ.26ರಂದು ಬೆಳಗ್ಗೆ 10.30ಕ್ಕೆ ಶ್ರೀ ಚೌಡೇಶ್ವರಿ ಶಾಲಾ ಆವರಣದಲ್ಲಿ ಸಂಘದ ಅಧ್ಯಕ್ಷ ಕೆ. ವೇಣುಗೋಪಾಲ್ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸಭೆಯಲ್ಲಿ ಭಾಗವಹಿಸುವ ಸದಸ್ಯರು ಕಡ್ಡಾಯವಾಗಿ ಗುರುತಿನ ಚೀಟಿ ತರಬೇಕೆಂದು ಪ್ರಕಟಣೆ ತಿಳಿಸಿದೆ.

ರಾಮಸಮುದ್ರ ನಾಗಮ್ಮ ನಿಧನ

ಚಾಮರಾಜನಗರ, ಮಾ.15– ನಗರದ ರಾಮಸಮುದ್ರ ಬಡಾವಣೆಯ ಹಳ್ಳದ ಬೀದಿ ನಿವಾಸಿ ದಿವಂಗತ ಡಿ. ವೀರತಪ್ಪ ಅವರ ಧರ್ಮಪತ್ನಿ ನಾಗಮ್ಮ (80) ಅವರು ಬುಧವಾರ ಸಂಜೆ ನಿಧನರಾದರು. ಮೃತರು ಪುತ್ರ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಆರ್.ವಿ. ಮಹದೇವಸ್ವಾಮಿ ಹಾಗೂ ಪುತ್ರಿ ಮೈಸೂರು ಚಾಮರಾಜನಗರ ಮಹಿಳಾ ಸಹಕಾರ ಬ್ಯಾಂಕಿನ ಮಾಜಿ ಅಧ್ಯಕ್ಷೆ ಶಿವಕುಮಾರಿ, ಮೊಮ್ಮಗ ವಿಜಯ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.



ಗುರುವಾರ ಮಧ್ಯಾಹ್ನ 2 ಗಂಟೆಗೆ ಕರಿನಂಜನಪುರ ಬಳಿಯಿರುವ ಅವರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೆಂಕಟರಂಗನಾಯಕ

ಚಾಮರಾಜನಗರ, ಮಾ.15– ತಾಲೂಕಿನ ಹರದನಹಳ್ಳಿ ನಿವಾಸಿ ವೆಂಕಟರಂಗನಾಯಕ (65) ಬುಧವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಮಗ ಪತ್ರಕರ್ತ ಕುಮಾರ್, ಮೂವರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಗುರುವಾರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.



ರಾಜಶೇಖರಮೂರ್ತಿ

ಚಾಮರಾಜನಗರ, ಮಾ.15– ತಾಲೂಕಿನ ಸಂತೇಮರಳ್ಳಿಯಲ್ಲಿ ಲೇ. ತ್ರಿಪುರಾಂತಪ್ಪನ ನಂಜಪ್ಪನವರ ಮಗ ಎನ್.ರಾಜಶೇಖರ ಮೂರ್ತಿ (60) ನಿಧನರಾದರು. ಮೃತರು ಪತ್ನಿ ಸುಜಾತಾ ಹಾಗೂ ಬಂಧುಗಳನ್ನು ಅಗಲಿದ್ದು ಬುಧವಾರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು.



ಮಾ.18, ಮಾದಪ್ಪನ ಪ್ರತಿಮೆ ಅನಾವರಣ

- ಸಿಎಂ ಬಸವರಾಜ ಬೊಮ್ಮಾಯಿ ಉದ್ಘಾಟನೆ
- 20 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಪ್ರತಿಮೆ



ಚಾಮರಾಜನಗರ, ಮಾ.15– ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಮಲೆ ಮಹದೇಶ್ವರಸ್ವಾಮಿ ಬೆಟ್ಟದ ದೀಪದಗಿರಿ ಒಡ್ಡುವಿನಲ್ಲಿ ನಿರ್ಮಾಣವಾಗುತ್ತಿರುವ 108 ಅಡಿ ಎತ್ತರದ ಮಹದೇಶ್ವರ ಸ್ವಾಮಿಯ ಪ್ರತಿಮೆಯನ್ನು ಮಾ. 18ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅನಾವರಣಗೊಳಿಸಲಿದ್ದಾರೆ.

ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವ ಸೋಮಣ್ಣ ಮಾ. 17ರಂದು ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಇದೇ ವೇಳೆ ಬೆಳ್ಳಿ ರಥದ ಅನಾವರಣವೂ ನಡೆಯಲಿದೆ.

20 ಕೋಟಿ ವೆಚ್ಚದ ಯೋಜನೆ ಇದಾಗಿದ್ದು, ಸದ್ಯ, ಪ್ರತಿಮೆ ನಿರ್ಮಾಣ ಮಾತ್ರ ಪೂರ್ಣಗೊಂಡಿದೆ. ಮಹದೇಶ್ವರಸ್ವಾಮಿ ಜೀವನ ಚರಿತ್ರೆ ಸಾರುವ ಮ್ಯೂಸಿಯಂ, ಪ್ರತಿಮೆಯ ಸ್ಥಳದಲ್ಲಿ ಬಯಲು ರಂಗ ಮಂದಿರ, ಗಿಡಮೂಲಿಕಾ ವನಗಳ ಅಭಿವೃದ್ಧಿ ಸೇರಿದಂತೆ ಇತರೆ ಕಾಮಗಾರಿಗಳು ಇನ್ನಷ್ಟೇ ನಡೆಯಬೇಕಿವೆ. ಮಾದಪ್ಪನ ದೇವಾಲಯದಿಂದ ಪ್ರತಿಮೆ ಇರುವ ಜಾಗಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಹಾಗೂ ಮೆಟ್ಟಿಲು ಅಳವಡಿಸುವ ಕಾರ್ಯ ಭರದಿಂದ ಸಾಗಿದೆ.

ಮಹದೇಶ್ವರ ಬೆಟ್ಟದಲ್ಲಿ ಮಾದಪ್ಪನ ಬೃಹತ್ ಪ್ರತಿಮೆ ನಿರ್ಮಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ದಿವಂಗತ ಎಚ್.ಎಸ್. ಮಹದೇವ ಪ್ರಸಾದ್ ಅವರ ಕನಸಾಗಿತ್ತು. ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2016ರ ಸೆಪ್ಟೆಂಬರ್‌ನಲ್ಲಿ ಯೋಜನೆ ಘೋಷಿಸಿದ್ದರು. 20 ಕೋಟಿ ವೆಚ್ಚದ ಈ ಯೋಜನೆ ಜಮೀನು ಸ್ವಾಧೀನ ವಿಳಂಬದಿಂದಾಗಿ ತಡವಾಗಿತ್ತು.

2019ರ ಫೆಬ್ರುವರಿಯಲ್ಲಿ ಕಾಮಗಾರಿಗೆ ಚಾಲನೆ ಸಿಕ್ಕಿತ್ತು. 2021ರ ಮಾರ್ಚ್‌ನ ಮೊದಲ ಹಂತದ ನೆಲಮಹಡಿಯ (ಕಲ್ಲು ಬಂಡೆಯ ರಚನೆ) ಕಾಮಗಾರಿ ಮುಕ್ತಾಯವಾಗಿತ್ತು. ಈಗ ಪ್ರತಿಮೆಯೂ ಸಿದ್ಧವಾಗಿದ್ದು, ಸ್ಥಳೀಯರು ಸೇರಿದಂತೆ ಪ್ರವಾಸಿಗರು ಹಾಗೂ ಭಕ್ತರು ಸ್ಥಳಕ್ಕೆ ಭೇಟಿ ನೀಡಿ ಪವಾಡ ಪುರುಷನ ಬೃಹತ್ ಪ್ರತಿಮೆ ಕಣ್ತುಂಬಿಕೊಳ್ಳುತ್ತಿದ್ದಾರೆ.

ಪ್ರತಿಮೆಯ ವಿಶೇಷತೆ: ಹನೂರು ಭಾಗದಿಂದ ಬೆಟ್ಟಕ್ಕೆ ಬರುವವರು ಆನೆದಿಂಬ ತಲುಪುತ್ತಿದ್ದಂತೆಯೇ ಹುಲಿಮೇಲೆ ಕುಳಿತ ಮಾದಪ್ಪನ ಪ್ರತಿಮೆಯ ಸೊಬಗು ಕಾಣಬಹುದು. ತಮಿಳುನಾಡಿನಿಂದ ಬಂದರೆ ಗರಿಕೆಕಂಡಿ ಸಿಗುತ್ತಿದ್ದಂತೆ ಮಾದಪ್ಪನನ್ನು ಕಣ್ತುಂಬಿಕೊಳ್ಳಬಹುದು. 108 ಅಡಿ ಎತ್ತರ ಪ್ರತಿಮೆಯು ಎರಡು ಸ್ತರದಲ್ಲಿ ನಿರ್ಮಾಣ ವಾಗಿದೆ. ಕಲ್ಲು ಬಂಡೆಯ ರಚನೆಯ ಮೇಲೆ ವ್ಯಾಘ್ರನ ಮೇಲೆ ಕುಳಿತ ತ್ರಿಶೂಲ ಹಿಡಿದ ಮಹದೇಶ್ವರ ಸ್ವಾಮಿಯ ಪ್ರತಿಮೆ ರೂಪಿಸಲಾಗಿದೆ.

ಕಲ್ಲು ಬಂಡೆಯಾಕೃತಿಯ ರಚನೆಯಲ್ಲಿ ಗುಹೆಯ ಮಾದರಿಯಲ್ಲಿ ಎರಡು ಮಹಡಿಗಳಿವೆ. ತಳಭಾಗದಲ್ಲಿ ಮಹದೇಶ್ವರ ಬೆಟ್ಟದ ಚಾರಿತ್ರಿಕ ಹಿನ್ನೆಲೆ ಸಾರುವ ಕಲಾಕೃತಿ ಚಿತ್ರಗಳ ರಚನೆ, ಭಕ್ತರ ವಿಶ್ರಾಂತಿ ಸ್ಥಳಾವಕಾಶ ಸೇರಿದಂತೆ ಭಕ್ತರು, ಪ್ರವಾಸಿಗರಿಗೆ ಮಹದೇಶ್ವರ ಚರಿತ್ರೆ, ಪರಂಪರೆ ಸಾರುವ ಮ್ಯೂಸಿಯಂ ನಿರ್ಮಾಣವಾಗಲಿದೆ.

ಗದಗದ ಶಿಲ್ಪಿಯಿಂದ ಅರಳಿದ ಮಾದಪ್ಪ

ಬೆಟ್ಟದ ದೀಪದಗಿರಿ ಒಡ್ಡುವಿನಲ್ಲಿ ನಿರ್ಮಾಣವಾಗಿರುವ 108 ಅಡಿ ಎತ್ತರದ ಮಹದೇಶ್ವರ ಸ್ವಾಮಿಯ ಪ್ರತಿಮೆಯನ್ನು ಗದಗದ ಸಿಎಸ್‌ಎಪಿ ಆರ್ಕಿಟೆಕ್ಟ್ ಸಂಸ್ಥೆಯಿಂದ ನಿರ್ಮಿಸಲಾಗಿದ್ದು, ಶಿಲ್ಪಿ ಶ್ರೀಧರ್ ಅವರಿಂದ ಹುಲಿಯ ಮೇಲೆ ಕುಳಿತಿರುವ ಮಾದಪ್ಪನ ಸುಂದರವಾದ ಪ್ರತಿಮೆ ಅರಳಿದೆ. ಮುರ್ಡೇಶ್ವರದ ಶಿವನ ಮೂರ್ತಿ, ಬಸವ ಕಲ್ಯಾಣದಲ್ಲಿ ಬೃಹತ್ ಬಸವಣ್ಣನ ಪ್ರತಿಮೆಗಳ ರೂವಾರಿ ಇವರು.

ಮಹದೇಶ್ವರ ದೇವಸ್ಥಾನಕ್ಕೆ ಕಂಚಿನ ಕೊಳಗ ಹಸ್ತಾಂತರ



ಗುಂಡ್ಲುಪೇಟೆ, ಮಾ.15– ಮೈಸೂರು ಜಿಲ್ಲೆಯ ಸರಗೂರು ತಾಲೂಕಿನ ಹೆತ್ತಿಗೆ ಗ್ರಾಮದ ಮಹದೇಶ್ವರ ದೇವಸ್ಥಾನಕ್ಕೆ ತಾಲೂಕಿನ ಅರೇಪುರ ಗ್ರಾಮದ ಮಹದೇಶ್ವರ ದೇವಸ್ಥಾನದ ದೇವರ ಗುಡ್ಡಪ್ಪ ಕಂಚಿನ ಕೊಳಗವನ್ನು ಹಸ್ತಾಂತರಿಸಿದರು.

ತಾಲೂಕಿನ ಅರೇಪುರ ಗ್ರಾಮದ ನೂತನ ಮಹದೇಶ್ವರ ದೇವಸ್ಥಾನದಲ್ಲಿ ನಡೆದ ಸರಳ ಸಭೆಯಲ್ಲಿ ದೇವರ ಗುಡ್ಡಪ್ಪ ಹೆತ್ತಿಗೆ ಗ್ರಾಮದ ಪ್ರಮುಖರಾದ ವಿ.ಸುರೇಶ್, ಎಂ.ಸುರೇಶ್, ಪ್ರಕಾಶ್‌ಗೆ ಕೊಳಗವನ್ನು ನೀಡಿದರು. ಈ ಸಮಯದಲ್ಲಿ ಚಿಕ್ಕಾಟಿ ಗ್ರಾಪಂ ಉಪಾಧ್ಯಕ್ಷ ಅರೇಪುರ ಮಹದೇವ ಕುಮಾರ್, ಗ್ರಾಮದ ಮುಖಂಡರಾದ ರಾಜಪ್ಪ, ಚಂದ್ರಶೇಖರ ಆರಾಧ್ಯ ಇದ್ದರು.

ಹಿಮವದ್ ಗೋಪಾಲಸ್ವಾಮಿ ರಥೋತ್ಸವ: ಚೆಕ್‌ಪೋಸ್ಟ್ ಬಳಿಯಿಂದ ಕೆಎಸ್‌ಆರ್‌ಟಿಸಿ ವಾಹನಗಳ ವ್ಯವಸ್ಥೆ

ಚಾಮರಾಜನಗರ, ಮಾ.15– ಗುಂಡ್ಲುಪೇಟೆ ತಾಲೂಕು ಶ್ರೀ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಮಾ.18ರಂದು ನಡೆಯಲಿರುವ ರಥೋತ್ಸವದಲ್ಲಿ ಪಾಲ್ಗೊಂಡು ದೇವರ ದರ್ಶನಕ್ಕೆ ಆಗಮಿಸುವ ಭಕ್ತಾದಿಗಳಿಗೆ ಅರಣ್ಯ ಇಲಾಖೆಯ ಚೆಕ್‌ಪೋಸ್ಟ್ ಮೈದಾನದಿಂದ ಕೆಎಸ್‌ಆರ್‌ಟಿಸಿ ವಾಹನಗಳ ವ್ಯವಸ್ಥೆ ಮಾಡಲಾಗಿದೆ.

ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಮಾ.18ರಂದು ನಡೆಯಲಿರುವ ರಥೋತ್ಸವಕ್ಕೆ ದ್ವಿಚಕ್ರ, ನಾಲ್ಕು ಚಕ್ರ, ಮಿನಿ ವಾಹನ ಮತ್ತು ಇತರೆ ವಾಹನಗಳಲ್ಲಿ ಬರುವ ಭಕ್ತಾದಿಗಳು ಅರಣ್ಯ ಇಲಾಖೆಯ ಚೆಕ್‌ಪೋಸ್ಟ್ ಮೈದಾನದಲ್ಲಿ ನಿಲುಗಡೆ ಮಾಡಬೇಕು. ನಂತರ ಅಲ್ಲಿಂದ ಕೆ.ಎಸ್.ಆರ್.ಟಿ.ಸಿ ವಾಹನಗಳಲ್ಲಿ ನಿಗದಿಪಡಿಸಿರುವ ದರ ಪಾವತಿಸಿ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ರಥೋತ್ಸವ ಹಾಗೂ ದರ್ಶನಕ್ಕೆ ಹೋಗಿ ಬರುವ ವ್ಯವಸ್ಥೆ ಮಾಡಲಾಗಿದೆ. ಭಕ್ತಾದಿಗಳು ಮತ್ತು ಸಾರ್ವಜನಿಕರು ಸಹಕರಿಸಬೇಕೆಂದು ಗುಂಡ್ಲುಪೇಟೆ ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರ

ಬಿಜೆಪಿ ಟಿಕೆಟ್ ಆಕಾಂಕ್ಷಿಗಳು ದಿನದಿಂದ ದಿನಕ್ಕೆ ಹೆಚ್ಚಳ

ನಾನೂ ಸಹ ಟಿಕೆಟ್ ಆಕಾಂಕ್ಷಿ: ರೂಪಾ ಶೇಖರ್

ಚಾಮರಾಜನಗರ, ಮಾ.15– ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಬೇಕು ಎಂಬುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಆರೇಳು ಆಕಾಂಕ್ಷಿಗಳಿದ್ದ ಪಟ್ಟಿ ಈಗ ಹತ್ತಕ್ಕೆ, 11ಕ್ಕೆ ಏರಿಕೆ ಆಗಿದೆ. ಸುದ್ದಿಗೋಷ್ಠಿ ನಡೆಸಿದ ರೂಪಾ ಶೇಖರ್ ನಾನು ಸಹ ಆಕಾಂಕ್ಷಿ ಎಂದರು.



ಇದುವರೆಗೂ ಟಿಕೆಟ್ ಆಕಾಂಕ್ಷಿಗಳಾಗಿದ್ದ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಜಿ. ನಾಗಶ್ರೀ ಪ್ರತಾಪ್, ಎಂ. ರಾಮಚಂದ್ರ, ಅಮ್ಮನಪುರ ಮಲ್ಲೇಶ್, ಜಿ. ನಿಜಗುಣರಾಜು, ಡಾ.ಎ.ಆರ್. ಬಾಬು, ಪಿ. ವೃಷಬೇಂದ್ರಪ್ಪ ಎಂ. ರುದ್ರೇಶ್, ಜ್ಯೋತಿ ರೇಚಣ್ಣ, ನಾಗು ರಮೇಶ್ ಅವರ ಸಾಲಿಗೆ ಇಂದು ರೂಪಾ ಶೇಖರ್ ಸೇರ್ಪಡೆಗೊಂಡರು. ಹೀಗಾಗಿ ನಾಲ್ವರು ಮಹಿಳಾ ಟಿಕೆಟ್ ಆಕಾಂಕ್ಷಿಗಳು, ಸೇರಿದಂತೆ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆ 11ಕ್ಕೆ ಏರಿಕೆ ಆಗಿದ್ದು, ಪಕ್ಷದ ನಾಯಕರಿಗೆ ಟಿಕೆಟ್ ಹಂಚಿಕೆಯ ತಲೆಬಿಸಿ ತಂದಿದೆ.

ಚಾಮರಾಜನಗರ ಕ್ಷೇತ್ರದಿಂದ ಬಿಜೆಪಿ ಮಹಿಳಾ ಅಭ್ಯರ್ಥಿಯನ್ನು ಇದುವರೆವಿಗೆ ಕಣಕ್ಕೆ ಇಳಿಸಿಲ್ಲ. ಹೀಗಾಗಿ, ಈ ಬಾರಿ ನನಗೆ ಅವಕಾಶ ಕಲ್ಪಿಸಬೇಕು. ನಮ್ಮ ಕುಟುಂಬ ಕಳೆದ 30 ವರ್ಷಗಳಿಂದ ಪಕ್ಷದ ಸಂಘಟನೆಯಲ್ಲಿ ತೊಡಗಿದೆ. ಹೀಗಾಗಿ, ನನಗೊಂದು ಅವಕಾಶ ಕಲ್ಪಿಸಬೇಕು ಎಂದರು.

ಬಿಜೆಪಿ ಟಿಕೆಟ್ ಆಕಾಂಕ್ಷಿಗಳಲ್ಲಿ ಹೊಂದಾಣಿಕೆ ಇಲ್ಲದ ಕಾರಣ ಈ ಕ್ಷೇತ್ರದಿಂದ ಕಾಂಗ್ರೆಸ್ ಗೆಲ್ಲುತ್ತಿದೆ. ಇದಕ್ಕೆ ಈ ಬಾರಿ ಅವಕಾಶ ನೀಡಬಾರದು. ನನಗೆ ಟಿಕೆಟ್ ನೀಡದಿದ್ದರೂ ಪಕ್ಷದ ಅಭ್ಯರ್ಥಿ ಪರ ದುಡಿಯುವುದಾಗಿ ರೂಪ ಶೇಖರ್ ಹೇಳಿದರು. ರೂಪಾ ಶೇಖರ್ ಅವರ ತಾಯಿ ಬಿಜೆಪಿ ರಾಜ್ಯಕಾರಿಣಿ ಸದಸ್ಯೆ ಜಯಶೀಲ ರಾಜಶೇಖರ್, ಬಿಜೆಪಿ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಚಂದ್ರಶೇಖರ್ ಇದ್ದರು.

ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ಚಾಮರಾಜನಗರ, ಮಾ.15– ನಾನಾ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಷ್ಟ್ರೀಯ ಸಂಘರ್ಷ ಸಮಿತಿ ಇಪಿಎಸ್ –95 ನಿವೃತ್ತ ನೌಕರರ ಸಂಘ ಜಿಲ್ಲಾ ಘಟಕ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ. ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಿ ನರೇಂದ್ರಮೋದಿ ಅವರಿಗೆ ಮನವಿ ಸಲ್ಲಿಸಿದರು.

ದೇಶದಲ್ಲಿ 70 ಲಕ್ಷ ಪಿಂಚಣಿದಾರರಿದ್ದು, ಕಾರ್ಖಾನೆಗಳಲ್ಲಿ ಸಣ್ಣ ಸಣ್ಣ ಉದ್ದಿಮೆಗಳಲ್ಲಿ, ಖಾಸಗಿ ಶಾಲಾ ಕಾಲೇಜುಗಳಲ್ಲಿ, ಸಹಕಾರಿ ಸಂಘಗಳಲ್ಲಿ, ಸಹಕಾರಿ ಬ್ಯಾಂಕ್‌ಗಳಲ್ಲಿ ಅನೇಕ ವರ್ಷ ಸೇವೆ ಸಲ್ಲಿಸಿರುತ್ತೇವೆ. ಸೇವೆಯಲ್ಲಿದ್ದಾಗ 1971 ರಲ್ಲಿ ಫ್ಯಾಮಿಲಿ ಪಿಂಚಣಿ ಫಂಡ್‌ಗೆ ಮಾಸಿಕ 50 ರೂ. ಹೆಚ್ಚು ವಂತಿಗೆಯನ್ನು ಕಟ್ಟಿದ್ದೇವೆ. 1995ರ ನಂತರ ಪಿಂಚಣಿ ಜಾರಿಗೆ ಬಂದಾಗ 350 ರೂ.ನಿಂದ ಇಲ್ಲಿಯವರೆಗೆ 1250 ರೂ.ಗಳನ್ನು ವಂತಿಗೆಯನ್ನು ಪಿಎಫ್ ನಿಧಿಗೆ ಕಟ್ಟುತ್ತಾ ಬಂದಿದ್ದೇವೆ ಎಂದರು.

1995ರ ನಂತರ ನಿವೃತ್ತರಾದವರಿಗೆ 50 ರೂ.ನಿಂದ 200 ರೂ.ಪಿಂಚಣಿ ನೀಡುತ್ತಿದ್ದರು. 2014ರ ನಂತರ ಕೇಂದ್ರ ಸರ್ಕಾರ ಇಪಿಎಫ್‌ಓ ರವರು 1 ಸಾವಿರ ರೂ.ಪಿಂಚಣಿಯನ್ನು ಜಾರಿಗೆ ತಂದಿರುತ್ತಾರೆ. ಆದರೆ ಲಕ್ಷಾಂತರ ನಿವೃತ್ತರಿಗೆ ಈಗಲೂ 500 ರೂ.ನಿಂದ 600 ರೂ. ಪಿಂಚಣಿ ಬರುತ್ತಿದೆ. ಈಗಿನ ಆಹಾರ ಪದಾರ್ಥಗಳ ಮೇಲೆ ಬೆಲೆ ಏರಿಕೆಯಲ್ಲಿ ಹಲವಾರು ನಿವೃತ್ತರಿಗೆ ಬರುವ ಪಿಂಚಣಿ ಹಣ ಸಾಲದೆ ಜೀವನ ಮಾಡುವುದು ಕಷ್ಟವಾಗಿದೆ. ಔಷಧಿ, ಮಾತ್ರೆಗೂ ಹಣವಿಲ್ಲದೆ ಪರದಾಡುವಂತಾಗಿದೆ. ಆದ್ದರಿಂದ ಡಿಎ ಸೇರಿಸಿ ಕನಿಷ್ಠ 7500 ರೂ. ಪಿಂಚಣಿ ನೀಡಬೇಕು. ನಿವೃತ್ತ ಮೃತ ಪತಿ–ಪತ್ನಿಯರಿಗೆ 100 ರಷ್ಟು ಪಿಂಚಣಿ ನೀಡಬೇಕು ಎಂದು ಪ್ರತಿಭಟನಾನಿರತರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಷ್ಟ್ರೀಯ ಸಂಘರ್ಷ ಸಮಿತಿ ಗೌರವಾಧ್ಯಕ್ಷ ಸುರೇಶ್, ಕಾರ್ಯಾಧ್ಯಕ್ಷ ಮಹದೇವು, ಕಾರ್ಯದರ್ಶಿ ಸೋಮಣ್ಣ, ನಿವೃತ್ತ ಕಾರ್ಮಿಕರಾದ ಆರ್.ಮಹದೇವಯ್ಯ, ನಾಗಯ್ಯ, ಬಂಗಾರಸ್ವಾಮಿ, ಕುಬೇಟ್ ಮೂರ್ತಿ, ಸುಬ್ಬನಾಯಕ. ನಂಜುಂಡಪ್ಪ, ರತ್ನಮ್ಮ, ರಾಜಮ್ಮ, ಚಾಮಮ್ಮ, ಮಂಜುಳ, ಜಯಮ್ಮ ಜಯಲಕ್ಷ್ಮೀ ಇತರರು ಭಾಗವಹಿಸಿದ್ದರು.

ಲಾರಿ ಪಲ್ಟಿ: ಮುಸ್ಲಿಂ ಈದ್ಗಾ ಜಖಂ

ಕೊಳ್ಳೇಗಾಲ, ಮಾ.15– ಚಲಿಸುತ್ತಿದ್ದ ಕಬ್ಬಿಣ ಇನ್ನಿತರೆ ಸಾಮಗ್ರಿ ತುಂಬಿದ್ದ ಲಾರಿಯೊಂದು ಚಾಲಕನ ನಿಯಂತ್ರಣ ತಪ್ಪಿದ ಪರಿಣಾಮ ಮುಡಿಗುಂಡ ಸೇತುವೆ ಪಕ್ಕದ ಹಳ್ಳಕ್ಕೆ ಬಿದ್ದು ಸ್ಥಳದಲ್ಲಿದ್ದ ಮುಸ್ಲಿಂ ಈದ್ಗಾ ಜಖಂಗೊಂಡಿರುವ ಘಟನೆ ನಡೆದಿದೆ.

ಹನೂರು ತಾಲೂಕಿನ ದಿನ್ನಳ್ಳಿ ಗ್ರಾಮದ ಮಹಮ್ಮದ್ ಹತೀಖ್ ಎಂಬುವರಿಗೆ ಸೇರಿದ ಲಾರಿ ಇದಾಗಿದ್ದು ಎನ್ನಲಾಗಿದ್ದು ಲಾರಿ ಚಾಲಕ ಕೌದಳ್ಳಿ ಗ್ರಾಮದ ಶಿವು ಎಂಬಾತ ಲಾರಿ ಪಲ್ಟಿಯಾದ ಹಿನ್ನೆಲೆ ತೀವ್ರವಾಗಿ ಗಾಯಗೊಂಡಿದ್ದಾನೆ. ತಮಿಳುನಾಡಿನಿಂದ ಹುಣಸೂರು ಕಡೆಗೆ ತೆರಳಲು ಕಬ್ಬಿಣದ ಸಲಾಕೆಗಳನ್ನು ತುಂಬಿಕೊಂಡು ನಿನ್ನೆ ತಡರಾತ್ರಿ 11 ಗಂಟೆ ಸಮಯದಲ್ಲಿ ಪಟ್ಟಣದ ಮುಡಿಗುಂಡ ಸೇತುವೆ ಬಳಿ ಸಂಚರಿಸುತ್ತಿದ್ದ ವೇಳೆ ಚಾಲಕನ ನಿಯಂತ್ರಣ ತಪ್ಪಿ ಲಾರಿ ಹಳ್ಳಕ್ಕೆ ನುಗ್ಗಿದೆ. ಅವಘಡದಿಂದ ಸೇತುವೆ ಕೆಳಗಿರುವ ಈದ್ಗಾ ಜಖಂಗೊಂಡಿದೆ. ವಿಚಾರ ತಿಳಿದ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಇನ್ನು ಗಾಯಗೊಂಡ ಚಾಲಕನಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಇಂದು ವಿಶ್ವ ಗ್ರಾಹಕರ ದಿನಾಚರಣೆ

ಮೈಸೂರು, ಮಾ.15– ಜಿಲ್ಲಾಡಳಿತ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕುವೆಂಪುನಗರದ ಜೆ.ಎಸ್.ಎಸ್ ಕಾನೂನು ಕಾಲೇಜು ಸಹಯೋಗದೊಂದಿಗೆ ಮಾ.16 ರ ಬೆಳಗ್ಗೆ 11 ಗಂಟೆಗೆ ಕುವೆಂಪುನಗರದಲ್ಲಿನ ಜೆ.ಎಸ್.ಎಸ್ ಕಾನೂನು ಕಾಲೇಜಿನಲ್ಲಿ ವಿಶ್ವ ಗ್ರಾಹಕರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಾನ್ಯ ಅಧ್ಯಕ್ಷ ಎ.ಕೆ. ನವೀನ್ ಕುಮಾರ್ ವಹಿಸುವರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ದೇವರಾಜ ಭೂತೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಎಂ.ಕೆ.ಲಲಿತ ಹಾಗೂ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯ ಮಾರುತಿ ಹೆಚ್.ವಡ್ಡರ್ ಅವರು ಭಾಗವಹಿಸಲಿದ್ದು ವಿಶೇಷ ಆಹ್ವಾನಿತರಾಗಿ ಜೆ.ಎಸ್.ಎಸ್ ಕಾನೂನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಸುರೇಶ್ ಕೆ.ಎಸ್. ಭಾಗವಹಿಸುವರು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಕಣ್ಗಾವಲು ತಂಡ ತೀವ್ರ ನಿಗಾ

ಗುರ್ತಿಸಿರುವ 826 ಕ್ರಿಟಿಕಲ್ ಪೋಲಿಂಗ್ ಸ್ಟೇಷನ್‌ಗಳ ಮಾನದಂಡಗಳನ್ನು ಅರಿತು ಕೆಲಸ ಮಾಡಿ ಎಂದು ಡಾ. ಕೆ.ವಿ.ರಾಜೇಂದ್ರ ಸೂಚನೆ ನೀಡಿದರು.

ಸರಿಯಾಗಿ ಪೂರ್ವಸಿದ್ಧತೆ ಮಾಡದಿದ್ದಲ್ಲಿ ಗೊಂದಲಗಳಾಗುತ್ತವೆ. ಒತ್ತಡ ಹೆಚ್ಚಾದಾಗ ಕಡೇ ಗಳಿಗೆಯಲ್ಲಿ ತಪ್ಪುಗಳಾಗುವ ಸಾಧ್ಯತೆ ಇದೆ. ಸೂಕ್ತ ರೀತಿಯಲ್ಲಿ ಪೂರ್ವ ಸಿದ್ಧತೆ ಮಾಡಿಕೊಂಡು ಮಾಸ್ಟರ್ ಟ್ರೈನರ್, ಡೆಸಿಗ್ನೇಟೆಡ್ ರಿಟರ್ನಿಂಗ್ ಆಫೀಸರ್‌ಗಳಿಂದ ತರಬೇತಿ ಪಡೆದು ವ್ಯವಸ್ಥಿತವಾಗಿ ಕರ್ತವ್ಯ ನಿರ್ವಹಿಸಿ ಬೂತ್ ಲೆವೆಲ್ ಜಾಗೃತಿ ಸಂಗ್ರಹಿಸಿ ಪಾರದರ್ಶಕವಾಗಿ ಶಾಂತಿಯುತ ಮತದಾನ ನಡೆಯಲು ಎಲ್ಲರೂ ಸಮಂಜಸವಾಗಿ ಕಾರ್ಯನಿರ್ವಹಿಸಿ ಎಂದು ಅವರು ತಿಳಿಸಿದರು. ರಾಜಕೀಯ ಪಕ್ಷಗಳು ನಿಯಮಾನುಸಾರ ಚುನಾವಣಾ ಪ್ರಚಾರ ಕೈಗೊಳ್ಳಲು ಅವಕಾಶವಿದೆ. ಅನಧಿಕೃತವಾಗಿ ಸಭೆ, ಸಮಾರಂಭ, ಪೋಸ್ಟರ್, ಗೋಡೆ ಬರಹಗಳಂತಹ ಪ್ರಚಾರ ಮಾಡಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಬೇಕು, ಒಬ್ಬ ವ್ಯಕ್ತಿ ಒಂದು ಬಾರಿಗೆ 50,000 ರೂ.ಗಳಿಗೆ ಮೀರಿ ನಗದನ್ನು ಕೊಂಡೊಯ್ಯಬಾರದು, ಆನ್‌ಲೈನ್ ಮನಿ ಟ್ರಾನ್ಸಾಕ್ಷನ್ ಬಗ್ಗೆಯೂ ಎಚ್ಚರ ವಹಿಸಬೇಕು ಎಂದು ಡಾ.ರಾಜೇಂದ್ರ ತಿಳಿಸಿದರು. ಮಾದರಿ ನೀತಿ ಸಂಹಿತೆಯನ್ನು ಅನುಷ್ಠಾನಗೊಳಿಸಲು ಪ್ರತಿ ಪೊಲೀಸ್ ಠಾಣೆಗೊಂದರಂತೆ ಫ್ಲೈಯಿಂಗ್ ಸ್ಕ್ವಾಡ್ ರಚಿಸಲಾಗುವುದು. ವಿಡಿಯೋಗ್ರಾಫರ್, ಪೊಲೀಸ್ ಅಧಿಕಾರಿಗಳೊಂದಿಗೆ ಕೆಲಸ ಮಾಡುವ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರಿಯಲ್ ಅಧಿಕಾರ ಹೊಂದಿದ ಅಧಿಕಾರಿ ನೇತೃತ್ವದ ಈ ಸ್ಕ್ವಾಡ್ ತಮ್ಮ ವ್ಯಾಪ್ತಿಯಲ್ಲಿ ಗಸ್ತು ಮಾಡಿ ಚುನಾವಣಾ ಅಕ್ರಮಗಳ ಬಗ್ಗೆ ನಿಗಾ ವಹಿಸಬೇಕಿದೆ ಎಂದು ಜಿಲ್ಲಾಧಿಕಾರಿಗಳು ಇದೇ ವೇಳೆ ಸೂಚನೆ ನೀಡಿದರು.

ಬೆದರಿಕೆ, ಸಮಾಜಘಾತುಕ ವ್ಯಕ್ತಿಗಳ ಆರ್ಭಟ, ಮದ್ಯ ಸಾಗಣೆ, ಶಸ್ತ್ರಾಸ್ತ್ರ ಸಾಗಣೆ, ಮತದಾರರಿಗೆ ಹಣದ ಅಮಿಷ, ಉಡುಗೊರೆ ನೀಡುವಂತಹ ದೂರುಗಳು ಬಂದಲ್ಲಿ ತಕ್ಷಣ ಫ್ಲೈಯಿಂಗ್ ಸ್ಕ್ವಾಡ್ ಸ್ಥಳಕ್ಕೆ ತೆರಳಿ ಕಾನೂನು ರೀತಿಯ ಕ್ರಮ ಜರುಗಿಸಬೇಕು. ಪ್ರಚಾರ ಸಭೆ, ಸಮಾರಂಭ, ಬೃಹತ್ ರ್‍ಯಾಲಿಯಂತಹ ಕಾರ್ಯಕ್ರಮಗಳನ್ನು ಸಂಪೂರ್ಣ ವಿಡಿಯೋ ರೆಕಾರ್ಡ್ ಮಾಡಿ ತಕ್ಷಣವೇ ಚುನಾವಣಾ ಆಯೋಗದ ಪೋರ್ಟಲ್ ಡಿಸೈನ್ ಮೂಲಕ ರವಾನಿಸಬೇಕು ಎಂದು ಅವರು ತಿಳಿಸಿದರು.

ಟೆಕ್ನಾಲಜಿ ಬಳಸಿ: ಯಾವುದೇ ಸ್ಥಳದಲ್ಲಿ ಹಣ, ಮದ್ಯ ಹಂಚಲಾಗುತ್ತಿದೆ ಎಂದು ಮಾಹಿತಿ ಬಂದ ತಕ್ಷಣ ಸಮೀಪದಲ್ಲಿರುವ ವಿಡಿಯೋಗ್ರಾಫರ್‌ಗಳನ್ನು ಕಳುಹಿಸಿ ರೆಕಾರ್ಡಿಂಗ್ ಮಾಡಿಸಿ, ಪ್ರಕರಣ ದಾಖಲಿಸಿ ವಶಪಡಿಸಿಕೊಂಡ ಮಾಲುಗಳ ಬಗ್ಗೆ ವ್ಯಾಪ್ತಿಯ ರಿಟರ್ನಿಂಗ್ ಆಫೀಸರ್‌ಗೆ ವರದಿ ಮಾಡಬೇಕು. ಈ ಪ್ರಕ್ರಿಯೆಯಲ್ಲಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಕಾರ್ಯನಿರ್ವಹಿಸಿ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಮೈಸೂರು ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ಅಡಿಷನಲ್ ರೂಪಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ, ಹೆಚ್ಚುವರಿ ಜಿಲ್ಲಾಧಿಕಾರಿ ಕವಿತಾ ರಾಜಾರಾಮ್, ಆದಾಯ ತೆರಿಗೆ ಹೆಚ್ಚುವರಿ ಆಯುಕ್ತ ಶ್ರೀಧರ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಸರ್ವೀಸ್ ರಸ್ತೆಗಿಳಿಯುತ್ತಿರುವ ವಾಹನಗಳು!

ಪೂರ್ಣಗೊಂಡಿಲ್ಲ. ಅದಕ್ಕಾಗಿಯೇ ಖಾಯಂ ಬ್ಯಾರಿಕೇಡ್ ಹಾಕಿ ಸರ್ವೀಸ್ ರಸ್ತೆಗೆ ಪ್ರವೇಶವಿಲ್ಲದಂತೆ ತಡೆ ಮಾಡದೇ ತಾತ್ಕಾಲಿಕ ಬ್ಯಾರಿಕೇಡ್ ಅಳವಡಿಸಲಾಗಿದೆ.

ಅದನ್ನು ದುರುಪಯೋಗಪಡಿಸಿಕೊಂಡಿರುವ ಕೆಲವು ವಾಹನ ಚಾಲಕರು ಬ್ಯಾರಿಕೇಡ್ ತೆರವುಗೊಳಿಸಿ ದಾರಿ ಮಾಡಿಕೊಂಡು ಸರ್ವೀಸ್ ರಸ್ತೆಗಿಳಿದು ಸಂಚರಿಸುತ್ತಿದ್ದಾರೆ. ಅದರಿಂದ ಟೋಲ್ ಪ್ಲಾಜಾದಲ್ಲಿ ನಿರೀಕ್ಷಿತ ಶುಲ್ಕ ವಸೂಲಾಗದೆ ನಷ್ಟವಾಗುತ್ತಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ. ಮಾರ್ಗ ಬದಲಿಸಿ ವಾಹನಗಳು ಸಂಚರಿಸುತ್ತಿರುವುದರಿಂದ ಟೋಲ್ ಪ್ಲಾಜಾದಲ್ಲಿ ಒಂದು ದಿನಕ್ಕೆ ಲಕ್ಷಾಂತರ ರೂ. ನಷ್ಟ ಉಂಟಾಗುತ್ತಿದೆ. ಒಳ್ಳೆಯ ರಸ್ತೆ ಮಾಡಿಕೊಟ್ಟರೆ ಜನರು ಟೋಲ್ ಶುಲ್ಕ ಪಾವತಿಸದೇ ಇದ್ದರೆ ರಸ್ತೆ ನಿರ್ವಹಣೆ ಮಾಡುವುದಾದರೂ ಹೇಗೆ ಎಂದು ಅವರು ಪ್ರಶ್ನಿಸಿದ್ದಾರೆ. ನ್ಯಾಯಾಲಯದಲ್ಲಿ ಒಂದೆರಡು ದಿನದೊಳಗೆ ಭೂ ವಿವಾದ ಪ್ರಕರಣ ಇತ್ಯರ್ಥವಾಗುವ ನಿರೀಕ್ಷೆ ಇದೆ. ತೀರ್ಪು ಬರುತ್ತಿದ್ದಂತೆಯೇ ತಡ ಮಾಡದೆ ಬಾಕಿ ಉಳಿದಿರುವ ಆ ಭಾಗದ ಸರ್ವೀಸ್ ರಸ್ತೆ ಕಾಮಗಾರಿ ಪೂರ್ಣಗೊಳಿಸುತ್ತೇವೆ. ತದನಂತರ ವಾಹನಗಳು ಮೇನ್ ಕಾರಿಡಾರ್‌ನಲ್ಲೇ ಚಲಿಸಬೇಕಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೈಕೋರ್ಟ್ ಅನುಮತಿ

ತಲುಪಿಸಬೇಕು ಎಂದೂ ಸೂಚಿಸಿದೆ. 5 ಮತ್ತು 8ನೇ ತರಗತಿಗೆ ಬೋರ್ಡ್ ಪರೀಕ್ಷೆ ನಡೆಸುವ ಬಗ್ಗೆ ಸರ್ಕಾರ ಹೊರ ಡಿಸಿದ್ದ ಸುತ್ತೋಲೆಯನ್ನು ಹೈಕೋರ್ಟ್‌ನ ಏಕಸದಸ್ಯ ಪೀಠ ರದ್ದುಪಡಿಸಿತ್ತು. ಇದರ ವಿರುದ್ಧ ಶಿಕ್ಷಣ ಇಲಾಖೆ ಮೇಲ್ಮನವಿ ಸಲ್ಲಿಸಿತ್ತು. ಸುತ್ತೋಲೆ ರದ್ದುಪಡಿಸಿದ ಆದೇಶಕ್ಕೆ ತಡೆ ನೀಡುವಂತೆ ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಸರ್ಕಾರದ ಪರ ವಕೀಲರು ಮನವಿ ಮಾಡಿದ್ದರು. ಇದರ ವಿಚಾರಣೆ ನಡೆಸಿದ ಕೋರ್ಟ್, ಅಭಿಪ್ರಾಯ ಸಲ್ಲಿಸುವಂತೆ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಮಂಗಳವಾರ ಸೂಚಿಸಿತ್ತು.

ಏನಿದು ಪ್ರಕರಣ: ಪ್ರಸಕ್ತ ಶೈಕ್ಷಣಿಕ ವರ್ಷದಿಂದ 5 ಮತ್ತು 8ನೇ ತರಗತಿಗಳಿಗೆ ಪಬ್ಲಿಕ್ ಪರೀಕ್ಷೆ ನಡೆಸಲು ಶಿಕ್ಷಣ ಇಲಾಖೆ ನಿರ್ಧರಿಸಿತ್ತು. ಇದನ್ನು ವಿರೋಧಿಸಿ ಪೋಷಕರ ಸಂಘಟನೆ ಕೋರ್ಟ್ ಮೊರೆ ಹೋಗಿತ್ತು. ಪೋಷಕರ ಮನವಿಗೆ ಸಮ್ಮತಿಸಿದ್ದ ನ್ಯಾಯಾಲಯ ಸರ್ಕಾರದ ಆದೇಶಕ್ಕೆ ತಡೆ ನೀಡಿತ್ತು. ಇದನ್ನು ಪ್ರಶ್ನಿಸಿ ಸರ್ಕಾರ ಮೇಲ್ಮನವಿ ಸಲ್ಲಿಸಿದ್ದು, ಏಕ ಸದಸ್ಯ ಪೀಠದ ಆದೇಶಕ್ಕೆ ತಡೆ ನೀಡು ವಂತೆ ಕೋರಿತ್ತು. ವಿಚಾರಣೆಯನ್ನು ಪೀಠವು ಮಾರ್ಚ್ 14ಕ್ಕೆ ಮುಂದೂಡಿತ್ತು.

ತಕರಾರು ಅರ್ಜಿ ಸಲ್ಲಿಸಿದ್ದ ರುಪ್ಸಾ: 5 ಮತ್ತು 8ನೇ ತರಗತಿ ವಿದ್ಯಾರ್ಥಿಗಳಿಗೆ ಪಬ್ಲಿಕ್ ಪರೀಕ್ಷೆ ನಡೆಸುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಕರ್ನಾಟಕ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಸಂಘ (ರುಪ್ಸಾ) ಹೈಕೋರ್ಟ್ ಮೊರೆ ಹೋಗಿತ್ತು. ರುಪ್ಸಾ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಹೈಕೋರ್ಟ್ ಮೊರೆ ಹೋಗಿ ದ್ದರು. 2022–23ನೇ ಸಾಲಿನ 5 ಮತ್ತು 8ನೇ ತರಗತಿ ವಿದ್ಯಾರ್ಥಿಗಳ ಶೈಕ್ಷಣಿಕ ಮೌಲ್ಯಮಾಪನ ವಿಧಾನವನ್ನು ಬದಲಿ ಸುವ ಕುರಿತಂತೆ 2022ರ ಡಿಸೆಂಬರ್ 12 ರಂದು ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶದ ಕ್ರಮ ಪ್ರಶ್ನಿಸಿ ರುಪ್ಸಾ ತಕರಾರು ಅರ್ಜಿ ಸಲ್ಲಿಸಿತ್ತು. ವಿಚಾರಣೆ ನಡೆಸಿದ್ದ ಏಕ ಸದಸ್ಯ ಪೀಠವು ಮಧ್ಯಂತ ತಡೆ ನೀಡಲು ನಿರಾಕರಿಸಿತ್ತು. ಬಳಿಕ ರುಪ್ಸಾ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿತ್ತು.

ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಲ್ಲ

ಹಾಗೂ ಧೈರ್ಯ ಹೇಳಿದ್ದೇನೆ ಎಂದರು. ನಾನು ದರ್ಶನ್ ಅವರನ್ನು ನೋಡಿಯೇ ಇರಲಿಲ್ಲ. ಅವರ ಮನೆಯೂ ನನಗೆ ಗೊತ್ತಿರಲಿಲ್ಲ. ಧ್ರುವನಾರಾಯಣ್ ತೀರಿಹೋದ ದಿನವೇ ನಾನು ದರ್ಶನ್‌ನನ್ನು ನೋಡಿದ್ದು. ಧೃವ ಅವರನ್ನು ಕಳೆದುಕೊಂಡದ್ದು ಮನಸ್ಸಿಗೆ ಬಹಳಷ್ಟು ನೋವಾಗಿದೆ. ಜೀವಕ್ಕಿಂತ ಅಧಿಕಾರ ಮುಖ್ಯವಲ್ಲ. ದರ್ಶನ್ ನಂಜನಗೂಡು ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯಶೀಲರಾಗಿ ಅವರ ತಂದೆಯ ಆಸೆಗಳನ್ನು ಈಡೇರಿಸಲಿ, ಕುಟುಂಬವನ್ನು ನಿರ್ವಹಿಸಲಿ ಎಂದು ಆಶಿಸುತ್ತಿದ್ದೇನೆ ಎಂದು ಮಹದೇವಪ್ಪ ಹೇಳಿದರು. ನಾನು ಯಾವಾಗಲೂ ಅಧಿಕಾರದ ಹಿಂದೆ ಹೋದವನಲ್ಲ. ಯಾರ ಹಂಗಿನಲ್ಲೂ ಇರುವವನಲ್ಲ. ನಾನು ಅನುಭವಿಸಿದ ನೋವು, ಹಿಂಸೆ ಹೇಳಲಾಗುವುದಿಲ್ಲ. ಸಮಯ ಬಂದಾಗ ಅದನ್ನು ತಿಳಿಸುತ್ತೇನೆ ಎಂದ ಅವರು, ನಂಜನಗೂಡು ಕಾಂಗ್ರೆಸ್ ಟಿಕೆಟ್ ಆಕಾಂಕ್ಷೆಯಿಂದ ಹಿಂದೆ ಸರಿದು ದರ್ಶನ್‌ಗೆ ಬೆಂಬಲ ಸೂಚಿಸುವ ಬಗ್ಗೆ ಯಾರೊಂದಿಗೂ ಚರ್ಚಿಸಿಲ್ಲ. ಈ ಕುರಿತು ನನ್ನ ಮಗನಿಗೂ ಗೊತ್ತಿಲ್ಲ. ಈಗ ತಾನೇ ನಿಮ್ಮನ್ನು (ಮಾಧ್ಯಮದವರು) ಕರೆದು ಹೇಳುತ್ತಿದ್ದೇನೆ ಎಂದರು.

ದರ್ಶನ್ ಅವರಿಗೆ ರಾಜಕಾರಣಕ್ಕೆ ಬರಲು ಇಷ್ಟವಿದೆಯೇ ಎಂದು ಮಾಧ್ಯಮದವರು ಪ್ರಶ್ನಿಸಿದಾಗ ಮಧ್ಯ ಪ್ರವೇಶಿಸಿದ ಮಹದೇವಪ್ಪ, ಅದನ್ನೆಲ್ಲಾ ಈಗ ಕೇಳುವುದು ಬೇಡ. ಜನರು ಮತ್ತು ಅಭಿಮಾನಿಗಳು ಸ್ಪರ್ಧಿಸುವಂತೆ ಕೇಳುತ್ತಿದ್ದಾರೆ. ನನ್ನ ಮನಸ್ಸಿಗೂ ಕೂಡ ನಂಜನಗೂಡಿನಲ್ಲಿ ದರ್ಶನ್ ಸ್ಪರ್ಧಿಸುವುದು ಸೂಕ್ತ ಅನ್ನಿಸಿತು. ಧ್ರುವ ನಿಧನರಾದ ದಿನವೇ ಮಾನಸಿಕವಾಗಿ ನಾನು ದರ್ಶನ್ ಸ್ಪರ್ಧೆ ಮಾಡಬೇಕು ಎಂಬ ನಿರ್ಧಾರಕ್ಕೆ ಬಂದಿದ್ದೆ. ಆದರೆ ಅದನ್ನು ಹೇಳಲು ಅದು ಸಮಯವಲ್ಲ. ಹೀಗಾಗಿ ಈಗ ಹೇಳುತ್ತಿದ್ದೇನೆ ಎಂದು ಮಹದೇವಪ್ಪ ಉತ್ತರಿಸಿದರು.

ಮೈಸೂರು ಪಾಲಿಕೆಯ ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರ ಆಯ್ಕೆ ನನೆಗುದಿಗೆ

● ಮೇಯರ್ ಶಿವಕುಮಾರ್ ವಿರುದ್ಧ ಕಾಂಗ್ರೆಸ್ ಸದಸ್ಯರ ಪ್ರತಿಭಟನೆ ● ಪ್ರಜಾಸತ್ತಾತ್ಮಕ ತತ್ವಗಳ ಗಾಳಿಗೆ ತೂರಿ ಸರ್ವಾಧಿಕಾರಿ ಧೋರಣೆ ಆರೋಪ ● ಅಭಿವೃದ್ಧಿ ಕಾರ್ಯಗಳಿಗೆ ಕಂಟಕವಾಗಿರುವ ಮೇಯರ್ ವರ್ತನೆ; ಆಕ್ರೋಶ



ಮೈಸೂರು,ಮಾ.15(ಎಂಟಿವೈ)– ಮೈಸೂರು ನಗರ ಪಾಲಿಕೆ ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರ ಆಯ್ಕೆ ಮಾಡದೆ ಇರುವುದರಿಂದ ಅಭಿವೃದ್ಧಿ ಕಾರ್ಯ ಸ್ಥಗಿತಗೊಂಡಿದೆ ಎಂದು ಆರೋಪಿಸಿ ಮೇಯರ್ ಕೊಠಡಿ ಮುಂದೆ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸಿ, ಮೇಯರ್ ಶಿವಕುಮಾರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಾಲ್ಕು ಸ್ಥಾಯಿ ಸಮಿತಿಯಿದ್ದು, ಕಳೆದ 7 ತಿಂಗಳಿಂದ ಇವುಗಳಿಗೆ ಅಧ್ಯಕ್ಷರನ್ನು ಆಯ್ಕೆ ಮಾಡದೇ ಸರ್ವಾಧಿಕಾರಿ ಧೋರಣೆ ಅನುಸರಿಸಲಾಗುತ್ತಿದೆ. ಎಲ್ಲಾ ಅಧಿಕಾರ ತನ್ನ ಬಳಿಯೇ ಇರಬೇಕೆಂಬ ಧೋರಣೆಯಿಂದ ಮೇಯರ್ ಶಿವಕುಮಾರ್ ವರ್ತಿಸುತ್ತಿದ್ದಾರೆ. ಸ್ಥಾಯಿ ಸಮಿತಿಯಿಲ್ಲದೇ ಮೈಸೂರು ನಗರದಲ್ಲಿ ಹಲವು ಅಭಿವೃದ್ಧಿ ಕಾರ್ಯ ಸ್ಥಗಿತಗೊಂಡಿವೆ. ಪಾಲಿಕೆ ಇತಿಹಾಸದಲ್ಲಿ ಮೊದಲ ಬಾರಿಗೆ ಸುದೀರ್ಘ ಅವಧಿಯಲ್ಲಿ ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರ ಆಯ್ಕೆ ಮಾಡದಿರುವ ಅಪಕೀರ್ತಿಗೆ ಬಿಜೆಪಿ ಆಡಳಿತ ಒಳಗಾಗಿದೆ ಎಂದು ಕಿಡಿಕಾರಿದರು.

ಈ ವೇಳೆ ಮಾಜಿ ಮೇಯರ್ ಅಯೂಬ್ ಖಾನ್ ಮಾತನಾಡಿ, ಈ ಸಾಲಿನ ಮೇಯರ್ ಆಯ್ಕೆ ಆಗಿ 7 ತಿಂಗಳು ಕಳೆದಿದೆ. ನಿಯಮಾನುಸಾರ ಮೇಯರ್ ಅಧಿಕಾರ ವಹಿಸಿಕೊಂಡ 7 ದಿನದಲ್ಲಿ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಚುನಾವಣೆ ನಡೆಸಬೇಕಾಗಿತ್ತು. ಆದರೆ ಕಾರಣವಿಲ್ಲದೆ ಚುನಾವಣಾ ಸಭೆಯನ್ನು ಮುಂದೂಡುತ್ತಾ ಬಂದಿದ್ದಾರೆ. ವಿಳಂಬದಿಂದಾಗಿ ಪಾಲಿಕೆಯಲ್ಲಿ ಯಾವುದೇ ಕೆಲಸ–ಕಾರ್ಯ ನಡೆಯುತ್ತಿಲ್ಲ. ಮೇಯರ್ ಶಿವಕುಮಾರ್ ಅವರ ಈ ಧೋರಣೆ ಪ್ರಜಾಪ್ರಭುತ್ವಕ್ಕೆ ಅನ್ಯಾಯ ಮಾಡುವಂತೆ ಇದೆ. ನಿಯಮಾನುಸಾರ ಕಡ್ಡಾಯವಾಗಿ ತಿಂಗಳಿಗೊಂದು ಕೌನ್ಸಿಲ್ ಸಭೆ ನಡೆಸಬೇಕು. ಇದುವರೆಗೆ 14 ಸಭೆ ನಡೆಸಬೇಕಾಗಿತ್ತು ಆದರೆ ಕೇವಲ 2 ಸಭೆ ಮಾತ್ರ ನಡೆಸಿದ್ದಾರೆ. ಇವರಿಗೆ ಸಭೆ ನಡೆಸಲೂ ಇಷ್ಟವಿಲ್ಲ ಅಭಿವೃದ್ಧಿ ಕಾರ್ಯವನ್ನು ಗಾಳಿಗೆ ತೂರಿದ್ದಾರೆ ಎಂದು ಕಿಡಿಕಾರಿದರು.

ಸ್ಥಾಯಿ ಸಮಿತಿಗೆ ಅಧ್ಯಕ್ಷರನ್ನು ಆಯ್ಕೆ ಮಾಡಿದರೆ ಅಧಿಕಾರ ಹಂಚಿಕೆಯಾಗುತ್ತದೆ. ಹಾಗಾಗಿ ತಾವೊಬ್ಬರೇ ಆಡಳಿತ ನಡೆಸಬೇಕೆಂಬ ದುರುದ್ದೇಶ ಹೊಂದಿದ್ದಾರೆ. ಪಾಲಿಕೆಯ 24.7 ಯೋಜನೆಯಲ್ಲಿ ವಾರ್ಷಿಕ 5ರಿಂದ 10 ಕೋಟಿ ರೂ. ಮೌಲ್ಯದ ವೈಯಕ್ತಿಕ ಸೌಲಭ್ಯ ನೀಡುತ್ತೇವೆ ಹೊಲಿಗೆ ಯಂತ್ರ ಲ್ಯಾಪ್‌ಟಾಪ್, ಸ್ವಯಂ ಉದ್ಯೋಗದ ನೆರವು, ವಿಕಲಚೇತನರಿಗೆ ಟ್ರೈಸಿಕಲ್ ವಿತರಣೆ ಸೇರಿದಂತೆ ವಿವಿಧ ಸೌಲಭ್ಯ ನೀಡಬೇಕು. ಇದಕ್ಕೆ ಸ್ಥಾಯಿ ಸಮಿತಿಯಲ್ಲಿ ಬಿಲ್ ಪಾಸಾಗಬೇಕು. ಸ್ಥಾಯಿ ಸಮಿತಿ ಇಲ್ಲದೇ ಇರುವುದರಿಂದ ಯಾವುದೇ ಸೌಲಭ್ಯ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೌನ್ಸಿಲ್ ಸಭೆಯ ಅಜೆಂಡಾ ಒಂದು ವರ್ಷದಿಂದ ಹಾಗೆ ಇದೆ ಸಭೆನಡೆಸದೆ ಹಾಗೆ ಉಳಿಸಿಕೊಂಡು ಬರಲಾಗಿದೆ. ಅಜೆಂಡಾದಲ್ಲಿರುವ ವಿಷಯಗಳಲ್ಲಿ ಶೇ.95ರಷ್ಟು ದಲಿತರಿಗೆ ಸೇರಿದ ವಿಷಯವೇ ಆಗಿದೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಅಶೋಕಪುರಂನಲ್ಲಿ ವಾಸವಿರುವ 135 ಕುಟುಂಬಕ್ಕೆ ಎಲೆ ತೋಟದ ಜಾಗದಲ್ಲಿ ತಲಾ 5 ಗುಂಟೆ ಜಾಗ ಕೊಡಬೇಕು ಎಂದು ನಿರ್ಣಯವಾಗಿದೆ. ಅದನ್ನು ಕೌನ್ಸಿಲ್ ಸಭೆಯಲ್ಲಿ ಪಾಸ್ ಮಾಡಬೇಕಾದ ಅಗತ್ಯವಿದೆ. ಆದರೆ, ಕೌನ್ಸಿಲ್ ಸಭೆ ನಡೆಯದೇ ದಲಿತರಿಗೆ ಅನ್ಯಾಯ ಮಾಡಲಾಗುತ್ತಿದೆ ಎಂದು ದೂರಿದರು.

ಮೈಸೂರು ಮಹಾನಗರ ಪಾಲಿಕೆಯಲ್ಲಿ ಈಗ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಆಡಳಿತವಿದೆ. ಕೆಲವು ವಿಚಾರದಲ್ಲಿ ಸಂಸದ ಪ್ರತಾಪ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಎಸ್.ಎ.ರಾಮದಾಸ್ ಆಗಾಗ ಮಾಧ್ಯಮಗಳ ಮೂಲಕ ಹಿತವಚನ ನೀಡುತ್ತಿರುತ್ತಾರೆ. ಆದರೆ, ಪಾಲಿಕೆಯಲ್ಲಿನ ದುರಾಡಳಿತ ನಿಮ್ಮ ಗಮನಕ್ಕೆ ಬರುತ್ತಿಲ್ಲವೇ. ಮೇಯರ್‌ಗೆ ತಿಳಿಹೇಳಬೇಕು. ಶಾಸಕ ಎಸ್.ಎ.ರಾಮದಾಸ್ ಅವರ ಕ್ಷೇತ್ರದಲ್ಲಿ 135 ಮಂದಿ ಫಲಾನುಭವಿಗಳಿಗೆ ಆಗುತ್ತಿರುವ ಅನ್ಯಾಯ ಅವರಿಗೆ ಅರಿವಿಲ್ಲವೇ ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಉಪಮೇಯರ್‌ಗಳಾದ ಶ್ರೀಧರ್, ಶಾಂತಕುಮಾರಿ, ಸದಸ್ಯರಾದ ಶೋಭ ಸುನೀಲ್, ಪಲ್ಲವಿ ಬೇಗಂ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಕೌನ್ಸಿಲ್ ಸಭೆ ದಿಢೀರ್ ರದ್ದು: ಜೆಡಿಎಸ್ ಸದಸ್ಯರಿಂದ ಪ್ರತಿಭಟನೆ



ಮೈಸೂರು,ಮಾ.15(ಎಂಟಿವೈ)– ನಾಳೆ (ಮಾ.16) ನಡೆಯಬೇಕಾಗಿದ್ದ ಕೌನ್ಸಿಲ್ ಸಭೆಯನ್ನು ದಿಢೀರ್ ರದ್ದು ಮಾಡಿರುವುದನ್ನು ಖಂಡಿಸಿ ಪಾಲಿಕೆಯ ಜೆಡಿಎಸ್ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರು ಮಹಾನಗರ ಪಾಲಿಕೆ ಕಚೇರಿ ಮುಂದೆ ಬುಧವಾರ ಮಧ್ಯಾಹ್ನ ಪ್ರತಿಭಟನೆ ನಡೆಸಿದ ಜೆಡಿಎಸ್ ಸದಸ್ಯರು ಮೇಯರ್ ಶಿವಕುಮಾರ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ನೀತಿ ಸಂಹಿತೆ ಜಾರಿಗೊಳ್ಳಲಿದೆ. ಈ ವೇಳೆ ಯಾವುದೇ ನಿರ್ಣಯ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಈ ವಿಷಯ ತಿಳಿದಿದ್ದರೂ ಕೌನ್ಸಿಲ್ ಸಭೆ ರದ್ದು ಮಾಡುವ ಮೂಲಕ ಮೇಯರ್ ಮೈಸೂರಿನ ಜನರ ಹಿತವನ್ನೇ ಕಡೆಗಣಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಸದಸ್ಯ ಎಸ್‌ಬಿಎಂ ಮಂಜು ಮಾತನಾಡಿ, ಅನಾರೋಗ್ಯದ ನೆಪವೊಡ್ಡಿ ಮೇಯರ್ ಶಿವಕುಮಾರ್ ಗುರುವಾರ ನಿಗದಿಯಾಗಿದ್ದ ಕೌನ್ಸಿಲ್ ಸಭೆಯನ್ನು ದಿಢೀರ್ ರದ್ದು ಮಾಡಿದ್ದಾರೆ. ಹಲವು ತಿಂಗಳಿಂದ ಕೌನ್ಸಿಲ್ ಸಭೆ ನಡೆಸದ ಕಾರಣ ಮೈಸೂರಿನ ಅಭಿವೃದ್ಧಿ ಕ್ಷೀಣಿಸಿದೆ. ವಿಧಾನಸಭಾ ಚುನಾವಣೆ ದಿನಾಂಕ ಘೋಷಣೆಯಾದರೆ, ನೀತಿ ಸಂಹಿತೆ ಜಾರಿಗೊಳ್ಳಲಿದೆ. ಆ ಬಳಿಕ ಯಾವುದೇ ಕಾರ್ಯಕ್ರಮ, ಕಾಮಗಾರಿ ನಡೆಸಲು ಸಾಧ್ಯವಾಗುವುದಿಲ್ಲ. ಜನರ ಕಷ್ಟದ ಬಗ್ಗೆ ಗಮನಹರಿಸದೆ ಏಕಾಏಕಿ ಸಭೆ ರದ್ದು ಮಾಡಲಾಗಿದೆ. ಅನಾರೋಗ್ಯದ ನೆಪವೊಡ್ಡಿ ಮೂರನೇ ಬಾರಿ ಕೌನ್ಸಿಲ್ ಸಭೆ ರದ್ದು ಮಾಡಲಾಗಿದೆ. ಬಿಜೆಪಿ ವಿಜಯ ಸಂಕಲ್ಪಯಾತ್ರೆ ಕೆಲಸ ಮಾಡುವ ಉತ್ಸಾಹ ಪ್ರದರ್ಶಿಸುವ ಮೇಯರ್ ಶಿವಕುಮಾರ್ ಕೌನ್ಸಿಲ್ ಸಭೆ ನಡೆಸುವುದಕ್ಕೆ ಹಾಗೂ ಸ್ಥಾಯಿ ಸಮಿತಿಗೆ ಅಧ್ಯಕ್ಷರ ಆಯ್ಕೆ ಮಾಡುವುದಕ್ಕೆ ನಿರಾಸಕ್ತಿ ಪ್ರದರ್ಶಿಸುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಮೇಯರ್ ತಸ್ನೀಮ್, ಪಾಲಿಕೆ ಸದಸ್ಯರಾದ ಎಂ.ಡಿ.ನಾಗರಾಜು, ಶೋಭ ಮೋಹನ್, ಅಶ್ವಿನಿ ಅನಂತು, ಭಾಗ್ಯ ಮಾದೇಶ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಧಾರ್ಮಿಕ ಸ್ಥಳಗಳಲ್ಲಿ ಪ್ರಾಣಿ ಬಲಿ ತಡೆಗೆ ದಯಾನಂದ ಸ್ವಾಮೀಜಿ ಆಗ್ರಹ



ಮೈಸೂರು,ಮಾ.15(ಪಿಎಂ)– ಜಿಲ್ಲೆಯ ಕೆ.ಆರ್.ನಗರ ತಾಲೂಕು ಕಪ್ಪಡಿ ಕ್ಷೇತ್ರದ ಶ್ರೀ ರಾಚಪ್ಪಾಜಿ ಜಾತ್ರಾ ಮಹೋತ್ಸವದಲ್ಲಿ ಕಾನೂನು ಉಲ್ಲಂಘಿಸಿ ನಿರಾತಂಕವಾಗಿ ಪ್ರಾಣಿ ಬಲಿ ನಡೆದಿದೆ ಎಂದು ಆರೋಪಿಸಿದ ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ ಮತ್ತು ಬಸವಧರ್ಮ ಜ್ಞಾನಪೀಠದ ಅಧ್ಯಕ್ಷ ದಯಾನಂದ ಸ್ವಾಮೀಜಿ, ಈ ಸಂಬಂಧ ಜಿಲ್ಲಾಧಿಕಾರಿಗಳು, ತಹಸೀಲ್ದಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದ್ದು, ಇನ್ನಾದರೂ ಪ್ರಾಣಿ ಬಲಿಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಹೋರಾಟ ಮಾಂಸಾಹಾರದ ವಿರುದ್ಧವಲ್ಲ. ಆದರೆ ಧಾರ್ಮಿಕ ಸ್ಥಳಗಳಲ್ಲಿ ಪ್ರಾಣಿ ಬಲಿಗೆ ಕಾನೂನಿನಲ್ಲಿ ಅವಕಾಶವಿಲ್ಲ. ಕರ್ನಾಟಕ ಪ್ರಾಣಿಬಲಿ ನಿಷೇಧ ಕಾಯ್ದೆ 1959 ಮತ್ತು ನಿಯಮ 1963ರ ಅನ್ವಯ ದೇವಸ್ಥಾನಗಳಲ್ಲಿ ದೇವರ ಹೆಸರಿನಲ್ಲಿ ಪ್ರಾಣಿ ಬಲಿ ನೀಡುವುದಕ್ಕೆ ಅವಕಾಶವಿಲ್ಲ. ರಾಜ್ಯ ಹೈಕೋರ್ಟ್ ಸಹ ಸದರಿ ಕಾನೂನಿನ ಕಟ್ಟುನಿಟ್ಟಿನ ಅನುಷ್ಠಾನಕ್ಕೆ ಆದೇಶಿಸಿದೆ ಎಂದರು.

ಶಿವರಾತ್ರಿ ಹಬ್ಬದ ದಿನದಿಂದ ಕಪ್ಪಡಿ ಜಾತ್ರೆ ಆರಂಭವಾಗಿದ್ದು, ಯುಗಾದಿ ಹಬ್ಬದ ದಿನದವರೆಗೆ ನಡೆಯಲಿದೆ. ಇಲ್ಲಿ ಶಿವರಾತ್ರಿ ಹಬ್ಬದ ದಿನದಿಂದ ಭಾನುವಾರದವರೆಗೆ ಪ್ರತಿನಿತ್ಯ ಪ್ರಾಣಿಬಲಿ ನಡೆದಿದೆ. ಇಲ್ಲಿ ಉಳಿದ ದಿನಗಳಲ್ಲಾದರೂ ಪ್ರಾಣಿ ಬಲಿ ನಡೆಯದಂತೆ ಜಿಲ್ಲಾಡಳಿತ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಮಂಡಳಿ ಸಂಚಾಲಕಿ ಸುನಂದಾದೇವಿ ಗೋಷ್ಠಿಯಲ್ಲಿದ್ದರು.

ರಾಜ್ಯದ ಎಲ್ಲಾ 224 ಕ್ಷೇತ್ರಗಳಲ್ಲಿ ಕೆಆರ್‌ಎಸ್ ಸ್ಪರ್ಧೆ



ಮೈಸೂರು,ಮಾ.15(ಪಿಎಂ)– ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು (ಕೆಆರ್‌ಎಸ್) ಎಲ್ಲಾ 224 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದು, ಮೈಸೂರು ಭಾಗದ ವಿವಿಧ ಕ್ಷೇತ್ರಗಳಿಗೆ ಅಭ್ಯರ್ಥಿ ಹಾಗೂ ಸಂಭಾವ್ಯ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಆದರ್ಶ ಅರಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿರಿಯಾಪಟ್ಟಣ ಕ್ಷೇತ್ರಕ್ಕೆ ಜೋಗನಹಳ್ಳಿ ಗುರುಮೂರ್ತಿ, ವರುಣಾ ಕ್ಷೇತ್ರಕ್ಕೆ ರವಿಕುಮಾರ್, ಹುಣಸೂರು ಕ್ಷೇತ್ರಕ್ಕೆ ತಿಮ್ಮ ಭೋವಿ, ಕೆ.ಆರ್.ಕ್ಷೇತ್ರಕ್ಕೆ ಸೋಮಸುಂದರ್ ಹಾಗೂ ನಂಜನಗೂಡು ಕ್ಷೇತ್ರಕ್ಕೆ ವಿಜಯಕುಮಾರ್ ಅವರನ್ನು ಸಂಭಾವ್ಯ ಅಭ್ಯರ್ಥಿಗಳಾಗಿ ಪಕ್ಷ ಘೋಷಣೆ ಮಾಡಿದೆ. ಚಾಮುಂಡೇಶ್ವರಿ ಕ್ಷೇತ್ರಕ್ಕೆ ಮಾಸ ಪ್ರವೀಣ್, ಎನ್‌ಆರ್ ಕ್ಷೇತ್ರಕ್ಕೆ ಎಸ್.ಪ್ರೇಮ್ ಕುಮಾರ್ ಅವರನ್ನು ಅಭ್ಯರ್ಥಿಗಳೆಂದು ಘೋಷಣೆ ಮಾಡಲಾಗಿದೆ ಎಂದರು.

ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯ ಯೋಜನೆಗಳನ್ನು ರೂಪಿಸಲು ಜನಸಾಮಾನ್ಯರು, ಚಿಂತಕರೊಂದಿಗೆ ಹಲವು ಸಭೆ ನಡೆಸಿ ಪಕ್ಷದ ಪ್ರಣಾಳಿಕೆ ಸಿದ್ಧಪಡಿಸಲಾಗಿದೆ. ರಾಜ್ಯ ಸರ್ಕಾರದಲ್ಲಿ ಖಾಲಿಯಿರುವ 3 ಲಕ್ಷಕ್ಕಿಂತಲೂ ಹೆಚ್ಚಿನ ಹುದ್ದೆಗಳನ್ನು ವರ್ಷದಲ್ಲಿ ಭರ್ತಿ ಮಾಡುವುದು, ಭ್ರಷ್ಟಾಚಾರ ನಿಗ್ರಹಕ್ಕಾಗಿ ಲೋಕಾಯುಕ್ತ ಬಲಪಡಿಸುವುದು, ರಾಜ್ಯದಲ್ಲಿ ಸಂಪೂರ್ಣ ಮದ್ಯ ನಿಷೇಧ, ಉಚಿತ ಗುಣಮಟ್ಟದ ಶಿಕ್ಷಣಕ್ಕೆ ಕ್ರಮ, ವೈಜ್ಞಾನಿಕ ಬೆಳೆ–ಬೆಲೆ ಪದ್ಧತಿ ಜಾರಿ, ಸಾಲಮುಕ್ತ ರೈತ ಸಮುದಾಯ ಮತ್ತು ಬಡತನ ಮುಕ್ತ ಹಳ್ಳಿಗಳ ನಿರ್ಮಾಣ ಸೇರಿದಂತೆ ಅನೇಕ ಮಹತ್ವದ ಅಂಶಗಳನ್ನು ಪಕ್ಷದ ಪ್ರಣಾಳಿಕೆ ಒಳಗೊಂಡಿದೆ ಎಂದು ವಿವರಿಸಿದರು. ಪಕ್ಷದ ಪದಾಧಿಕಾರಿಗಳಾದ ವಿಜಯಕುಮಾರ್, ಸುಂದರ್ ಪ್ರೇಮಕುಮಾರ್, ನಾಗರಾಜು, ರವಿಕುಮಾರ್, ಭಾನುಮೋಹನ್ ಗೋಷ್ಠಿಯಲ್ಲಿದ್ದರು.

ಹೆಚ್‌ಡಿ ಕೋಟೆ ಪರಿಶಿಷ್ಟ ಮೀಸಲು ಕ್ಷೇತ್ರದಲ್ಲಿ

ಸ್ಥಳೀಯರಿಗೆ ಟಿಕೆಟ್ ನೀಡಲು ನಾಯಕರ ಹಿತರಕ್ಷಣಾ ವೇದಿಕೆ ಒತ್ತಾಯ



ಮೈಸೂರು,ಮಾ.15(ಪಿಎಂ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಹೆಚ್‌ಡಿ ಕೋಟೆ ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಲ್ಲಿ ಸ್ಪರ್ಧಿಸಲು ಎಲ್ಲಾ ಪಕ್ಷಗಳು ಸ್ಥಳೀಯ ಅಭ್ಯರ್ಥಿಗಳಿಗೆ ಮಾತ್ರವೇ ಟಿಕೆಟ್ ನೀಡಬೇಕೆಂದು ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಅಧ್ಯಕ್ಷ ದ್ಯಾವಪ್ಪ ನಾಯಕ, ಮೈಸೂರು ಭಾಗದಲ್ಲಿ ಕೇವಲ ಹೆಚ್‌ಡಿ ಕೋಟೆ ವಿಧಾನಸಭಾ ಕ್ಷೇತ್ರ ಮಾತ್ರವೇ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದ್ದು, ಸದರಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಹೊರ ಜಿಲ್ಲೆಯವರಿಗೆ ಅವಕಾಶ ನೀಡದೇ ಸ್ಥಳೀಯರಿಗೆ ಮಾತ್ರವೇ ಎಲ್ಲಾ ಪಕ್ಷಗಳು ಟಿಕೆಟ್ ನೀಡಬೇಕು ಎಂದು ಆಗ್ರಹಿಸಿದರು.

ಸದರಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಹೊರ ಜಿಲ್ಲೆಯ ಕೆಲವರು ಪ್ರಯತ್ನಿಸುತ್ತಿದ್ದು, ಕ್ಷೇತ್ರದಲ್ಲಿ ಯುವ ಜನರು ಹಾಗೂ ಮುಗ್ಧ ಮತದಾರರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಇವರು ಪರಿಶಿಷ್ಟ ಪಂಗಡಕ್ಕೆ ಸೇರಿದವರೇ ಆದರೂ ಸ್ಥಳೀಯರಿಗೆ ಮಾತ್ರವೇ ಟಿಕೆಟ್ ನೀಡಬೇಕು. ಮೈಸೂರು ಭಾಗದ ಪರಿಶಿಷ್ಟ ಪಂಗಡದ ಸಮುದಾಯಕ್ಕೆ ಯಾವುದೇ ಕೊಡುಗೆ ನೀಡದೇ ಕೇವಲ ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಹೊರ ಜಿಲ್ಲೆಯಿಂದ ಬರುವವರಿಗೆ ಅವಕಾಶ ನೀಡಬಾರದು ಎಂದರು.

ಪರಿವಾರ ಮತ್ತು ತಳವಾರ ಪಂಗಡಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಹೋರಾಟ ಮಾಡಿದ ಮೈಸೂರು ಭಾಗದವರಿಗೆ ಟಿಕೆಟ್ ನೀಡಬೇಕು. ಇಂಥವರಿಗೇ ಟಿಕೆಟ್ ನೀಡಬೇಕೆಂದು ನಾವು ಹೆಸರು ಉಲ್ಲೇಖಿಸುವುದಿಲ್ಲ. ಒಟ್ಟಾರೆ ಎಲ್ಲಾ ರಾಜಕೀಯ ಪಕ್ಷಗಳು ಸ್ಥಳೀಯರಿಗೆ ಟಿಕೆಟ್ ನೀಡಬೇಕು. ಇಲ್ಲವಾದರೆ ಅಂತಹ ಪಕ್ಷಗಳ ವಿರುದ್ಧ ಮತ ಚಲಾಯಿಸುವಂತೆ ಸಮುದಾಯದಲ್ಲಿ ಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು. ವೇದಿಕೆ ರಾಜ್ಯ ಉಪಾಧ್ಯಕ್ಷರಾದ ಎಸ್.ಸಿದ್ದಯ್ಯ, ವೆಂಕಟೇಶ್ ನಾಯಕ, ಪದಾಧಿಕಾರಿ ಮಹೇಶ್ ಗೋಷ್ಠಿಯಲ್ಲಿದ್ದರು.

ಈ ಬಾರಿ ಮೂರು ಪಾಳಿಯಲ್ಲಿ ಸಿಯುಇಟಿ: ಯುಜಿಸಿ ಮುಖ್ಯಸ್ಥ ಜಗದೇಶ್ ಕುಮಾರ್



ನವದೆಹಲಿ: ವಿಶ್ವವಿದ್ಯಾಲಯಗಳ ಸಾಮಾನ್ಯ ಪ್ರವೇಶ ಪರೀಕ್ಷೆ(ಸಿಯುಇಟಿ–ಯುಜಿ)ಯನ್ನು ಈ ವರ್ಷ ಎರಡರ ಬದಲಾಗಿ ಮೂರು ಪಾಳಿಗಳಲ್ಲಿ ನಡೆಸಲಾಗುವುದು ಮತ್ತು ಜೆಇಇ ಹಾಗೂ ನೀಟ್‌ನಂತಹ ನಿರ್ಣಾಯಕ ಪ್ರವೇಶ ಪರೀಕ್ಷೆಗಳೊಂದಿಗೆ ಅದನ್ನು ವಿಲೀನ ಮಾಡುವ ಬಗ್ಗೆ ಕನಿಷ್ಠ ಎರಡು ವರ್ಷಗಳ ಮುಂಚಿತ ವಾಗಿಯೇ ಪ್ರಕಟಿಸಲಾಗುವುದು ಎಂದು ಯುಜಿಸಿ ಅಧ್ಯಕ್ಷ ಎಂ ಜಗದೇಶ್ ಕುಮಾರ್ ಅವರು ಬುಧವಾರ ತಿಳಿಸಿದ್ದಾರೆ.

ಯುನಿವರ್ಸಿಟಿ ಗ್ರಾಂಟ್ಸ್ ಕಮಿಷನ್(ಯುಜಿಸಿ) ಮತ್ತು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ) ಸಿಯುಇಟಿ–ಯುಜಿಯ ಎರಡನೇ ಆವೃತ್ತಿಯನ್ನು ದೋಷ ಮುಕ್ತವಾಗಿ ನಡೆಸಲು ಸಿದ್ಧವಾಗಿದೆ ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಜಗದೀಶ್ ಕುಮಾರ್ ಅವರು ಹೇಳಿದ್ದಾರೆ.

"ಕಳೆದ ವರ್ಷ ವಿದ್ಯಾರ್ಥಿಗಳ ಅನುಭವಕ್ಕೆ ಬಂದಿರುವಂತೆ ಸಿಯುಇಟಿ ಪರೀಕ್ಷೆಯಲ್ಲಿ ಹಲವು ದೋಷಗಳು ಇದ್ದವು ಎಂದು ನಾನು ಒಪ್ಪುತ್ತೇನೆ. ಆದರೆ ಈ ವರ್ಷ ಯಾವುದೇ ರೀತಿಯ ಸಮಸ್ಯೆಗಳು ಎದುರಾಗದಂತೆ ಎಚ್ಚರ ವಹಿಸಲಾಗುವುದು ಎಂದು ಯುಜಿಸಿ ಮುಖ್ಯಸ್ಥರು ತಿಳಿಸಿದ್ದಾರೆ.

ಈ ಬಾರಿ ಹೆಚ್ಚುವರಿ ಕಂಪ್ಯೂಟರ್‌ಗಳು ಮತ್ತು ಹೆಚ್ಚುವರಿ ಪರೀಕ್ಷಾ ಕೇಂದ್ರಗಳನ್ನು ಒಳಗೊಂಡ 'ಪ್ಲಾನ್ ಬಿ' ಅನ್ನು ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಒಂದು ವೇಳೆ ಲೋಪ–ದೋಷಗಳು ಎದುರಾದಲ್ಲಿ ಅಭ್ಯರ್ಥಿಗಳನ್ನು ಅಲ್ಲಿಗೆ ಸ್ಥಳಾಂತರಿಸಲಾಗುವುದು. ಈ ಮೂಲಕ ನಿರ್ದಿಷ್ಟ ಪರೀಕ್ಷೆ ರದ್ದಾಗದಂತೆ ನೋಡಿಕೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

ನಾಳೆಯಿಂದ ಕ್ರಿಕೆಟ್ ಪಂದ್ಯಾವಳಿ

ಮೈಸೂರು, ಮಾ.15(ಪಿಎಂ)– ಶ್ರೀ ಆತಿಥ್ಯ ಅಸೋಸಿಯೇಟ್ಸ್ ವತಿಯಿಂದ ಮಾ.17ರಿಂದ 19ರವರೆಗೆ 'ಭಾರತ ಟ್ರೋಫಿ' ಶೀರ್ಷಿಕೆಯಡಿ ರಾಷ್ಟ್ರ ಮಟ್ಟದ ಟೆನ್ನಿಸ್‌ಬಾಲ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಅಸೋಸಿಯೇಟ್ಸ್ ಮಾಲೀಕ ಎಸ್.ಗುಣಶೇಖರ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿವಿಯ ಪೆವಿಲಿಯನ್ ಮೈದಾನದಲ್ಲಿ ಪಂದ್ಯಾವಳಿ ನಡೆಯಲಿದೆ. ನೋಂದಣಿ ಶುಲ್ಕ ತಲಾ 20 ಸಾವಿರ ರೂ. ಪಾವತಿಸಿ ಈಗಾಗಲೇ 16 ತಂಡಗಳು ನೋಂದಣಿ ಮಾಡಿಕೊಂಡಿವೆ. ಸೆಮಿಫೈನಲ್‌ನಲ್ಲಿ ಸೋತ ತಂಡಗಳಿಗೆ ಪ್ರವೇಶ ಶುಲ್ಕ ಹಿಂತಿರುಗಿಸಲಾಗುವುದು. ವಿಜೇತ ತಂಡಕ್ಕೆ 2 ಲಕ್ಷ ರೂ. ಹಾಗೂ ರನ್ನರ್ ಅಪ್ ತಂಡಕ್ಕೆ 1 ಲಕ್ಷ ರೂ. ನಗದು ಬಹುಮಾನ ನೀಡಲಾಗುವುದು ಎಂದರು. ಕ್ರೀಡಾಪಟುಗಳಾದ ಅನಂತಕುಮಾರ್, ತೇಜರಾಜ್, ರಾಜೇಶ್, ಪ್ರದೀಪ್ ಗೋಷ್ಠಿಯಲ್ಲಿದ್ದರು.

ವಿಶ್ವ ಗ್ರಾಹಕರ ದಿನಾಚರಣೆ

ನಷ್ಟ ಪರಿಹಾರ ಪಡೆಯಲು ಎರಡು ವರ್ಷದೊಳಗೆ ದೂರು ಸಲ್ಲಿಸಿ



ಮೈಸೂರು, ಮಾ. 15(ಆರ್‌ಕೆ)– ನಷ್ಟ ಉಂಟಾದ ಅಥವಾ ವಂಚನೆಯಾಗಿರುವುದು ಗಮನಕ್ಕೆ ಬಂದ ದಿನದಿಂದ 2 ವರ್ಷದೊಳಗಾಗಿ ಗ್ರಾಹಕರ ಪರಿಹಾರ ವೇದಿಕೆ ಅಥವಾ ಆಯೋಗಕ್ಕೆ ದೂರು ಸಲ್ಲಿಸಬಹುದಾಗಿದೆ ಎಂದು ಆಯೋಗದ ಅಧ್ಯಕ್ಷೆ ನವೀನ ಕುಮಾರಿ ತಿಳಿಸಿದ್ದಾರೆ.

ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ) ಹಾಗೂ ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ ವತಿಯಿಂದ ಸಂಸ್ಥೆಯ ಸೆಮಿನಾರ್ ಹಾಲ್‌ನಲ್ಲಿ ಇಂದು ಆಯೋಜಿಸಿದ್ದ ವಿಶ್ವ ಗ್ರಾಹಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ತಾವು ಖರೀದಿಸಿದ ವಸ್ತು ಅಥವಾ ಪಡೆದ ಸೇವೆ ದೋಷಪೂರಿತ ಎಂದು ನಿಮ್ಮ ಗಮನಕ್ಕೆ ಬಂದ ದಿನದಿಂದ 2 ವರ್ಷದೊಳಗೆ ಪರಿಹಾರ ಪಡೆಯಲು ಲಿಖಿತ ರೂಪದಲ್ಲಿ ದೂರು ಸಲ್ಲಿಸಲು ಅವಕಾಶವಿದೆ ಎಂದರು.

ಒಂದು ಬಿಳಿ ಹಾಳೆಯಲ್ಲಿ ನಿಮಗೆ ಬರುವ ಭಾಷೆಯಲ್ಲಿ ಮಾಹಿತಿ ಬರೆದು ಪೂರಕ ದಾಖಲೆ ಪ್ರತಿಯೊಂದಿಗೆ ಗ್ರಾಹಕರ ನ್ಯಾಯಾಲಯಕ್ಕಾಗಲೀ ಅಥವಾ ಆಯೋಗಕ್ಕೆ ದೂರು ಸಲ್ಲಿಸಿದರೆ ಸಾಕು, ನೀವು ವಕೀಲರನ್ನು ನೇಮಿಸಬೇಕಿಲ್ಲ. ದುಬಾರಿ ಶುಲ್ಕ ಪಾವತಿಸುವ ಅಗತ್ಯವೂ ಇರುವುದಿಲ್ಲ . ಆದರೆ ನೀವು ನೀಡಿದ ದೂರು ನೈಜವಾಗಿರಬೇಕು ಹಾಗೂ ದಾಖಲಾತಿಗಳು ಸಮಂಜಸವಾಗಿದ್ದಲ್ಲಿ ಖಂಡಿತವಾಗಿಯೂ ನಷ್ಟ ಪರಿಹಾರ ಪಡೆಯಬಹುದಾಗಿದೆ ಎಂದ ಅವರು, ಗ್ರಾಹಕರ ಹಕ್ಕು ಮತ್ತು ರಕ್ಷಣಾ ಕಾಯ್ದೆಗಳ ಬಗ್ಗೆ ಜ್ಞಾನ ಹೊಂದುವ ಜೊತೆಗೆ ಜನರಲ್ಲಿ ಜಾಗೃತಿ ಮೂಡಿಸಬೇಕೆಂದು ಸಲಹೆ ನೀಡಿದರು.

ನಂತರ ಮಾತನಾಡಿದ ಬಿ.ಎನ್. ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ ಮುಖ್ಯಸ್ಥ ಡಾ. ಡಿ. ಆನಂದ, ಗ್ರಾಹಕರಿದ್ದರೆ ಮಾತ್ರ ವ್ಯಾಪಾರಸ್ಥರು, ಅವರನ್ನು ಪ್ರೀತಿಯಿಂದ ನೋಡಿದರೆ ಮಾತ್ರ ವಿಶ್ವಾಸಾರ್ಹತೆ ಹೊಂದಿ ಉದ್ದಿಮೆಯನ್ನು ಅಭಿವೃದ್ಧಿಪಡಿಸಬಹುದು. ವಂಚನೆ ಮಾಡಿದರೆ ಗ್ರಾಹಕ ಅದರ ನಷ್ಟ ಪರಿಹಾರವನ್ನು ಕ್ಲೇಮ್ ಮಾಡಿ ಪಡೆಯಬಹುದಾಗಿದೆ ಎಂದು ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗೆ ತಿಳಿಸಿದರು.

ಎಂಜಿಪಿ ಕಾರ್ಯಾಧ್ಯಕ್ಷೆ ಶೋಭನಾ, ಕಾರ್ಯಕಾರಿ ಸಮಿತಿ ಸದಸ್ಯ ಡಾ. ಶೇಖರ್ ಎಸ್. ಐಯ್ಯರ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಇದೇ ವೇಳೆ ಎಂಜಿಪಿ ಸದಸ್ಯರು ಹಾಗೂ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳು ನವೀನಕುಮಾರಿಯವರೊಂದಿಗೆ ಸಂವಾದದಲ್ಲಿ ಪಾಲ್ಗೊಂಡಿದ್ದರು.

ಗುದ್ದಲಿ ಪೂಜೆ ವೇಳೆ ಕಾಂಗ್ರೆಸ್–ಬಿಜೆಪಿ ಕಾರ್ಯಕರ್ತರ ನಡುವೆ ಗಲಾಟೆ

● ಮಾತಿನ ಚಕಮಕಿ, ನೂಕಾಟ–ತಳ್ಳಾಟ, ಗದ್ದಲ, ಸಂಚಾರ ಅಸ್ತವ್ಯಸ್ತ ● ಹುಣಸೂರು ಪಟ್ಟಣದಲ್ಲಿ ಕೆಲಕಾಲ ಉದ್ವಿಗ್ನ





ಹುಣಸೂರು, ಮಾ.15– ರಸ್ತೆ ಮತ್ತು ಒಳಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸುವ ವೇಳೆ ಶಾಸಕ ಹೆಚ್.ಪಿ.ಮಂಜುನಾಥ್ ಅವರ ಮುಂದೆಯೇ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ, ನೂಕಾಟ–ತಳ್ಳಾಟ ನಡೆದು ಪರಿಸ್ಥಿತಿ ಉದ್ವಿಗ್ನಗೊಂಡಿದ್ದ ಘಟನೆ ಪಟ್ಟಣದ ಕಲ್ಕುಣಿಕೆ ಸರ್ಕಲ್‌ನಲ್ಲಿ ಇಂದು ಸಂಭವಿಸಿದೆ.

ನಗರಸಭೆ ವತಿಯಿಂದ ನಗರೋತ್ಥಾನ 4ನೇ ಹಂತ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಶಾಸಕ ಮಂಜುನಾಥ್ ಅವರು ಗುದ್ದಲಿ ಪೂಜೆ ನೆರವೇರಿಸುವ ವೇಳೆ ಈ ಗಲಾಟೆ ನಡೆದಿದೆ.

ಶಾಸಕ ಮಂಜುನಾಥ್ ಗುದ್ದಲಿ ಪೂಜೆ ನೆರವೇರಿಸುವ ವೇಳೆ ಏಕಾ–ಏಕಿ ದಾಳಿ ನಡೆಸಿದ ಬಿಜೆಪಿ ಕಾರ್ಯಕರ್ತರು ಗುದ್ದಲಿ ಪೂಜೆಗೆ ಅಡ್ಡಿಪಡಿಸಿ, ಯಾರಿಗೂ ತಿಳಿಸದೆ ತಾವು ಸರ್ವಾಧಿಕಾರಿಯಂತೆ ಶಿಷ್ಟಾಚಾರ ಮರೆತು ಕಾಮಗಾರಿಗಳಿಗೆ ಚಾಲನೆ ನೀಡುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರೊಬ್ಬರು ನೀವ್ಯಾರು ಕೇಳೋಕ್ಕೆ ಎಂದು ಗುದ್ದಲಿ ಪೂಜೆಗೆ ಬಳಸುತ್ತಿದ್ದ ಹಾರೆಯಿಂದ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯೋಗಾನಂದಕುಮಾರ್ ಅವರನ್ನು ತಳ್ಳಿದರು. ಇದರಿಂದ ಎರಡು ಗುಂಪಿನ ನಡುವೆ ಮಾತಿಗೆ ಮಾತು ಬೆಳೆದು ಗಲಾಟೆ ಪ್ರಾರಂಭವಾಯಿತು. ನೂಕಾಟ– ತಳ್ಳಾಟ ಹೆಚ್ಚಾಯಿತು. ಕೂಗಾಟ ಇನ್ನು ಜೋರಾಯಿತು. ಸಕಾಲದಲ್ಲಿ ಪೊಲೀಸರು ಮಧ್ಯೆ ಪ್ರವೇಶಿಸಿ ಎರಡು ಗುಂಪುಗಳ ನಡುವೆ ಒಡೆದಾಟ ಅಗುವುದನ್ನು ತಪ್ಪಿಸಿದರು.

ವಿಷಯ ತಿಳಿಯುತ್ತಿದ್ದಂತೆ ಕಾಂಗ್ರೆಸ್‌ನ ಮತ್ತಷ್ಟು ಕಾರ್ಯಕರ್ತರು ಮತ್ತು ಬಿಜೆಪಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ ರಸ್ತೆ ಸಂಚಾರಕ್ಕೆ ಅಡ್ಡಿ ಉಂಟಾಗಿ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಕೆಲಕಾಲ ವಾಹನಗಳು ಸಾಲುಗಟ್ಟಿ ನಿಂತು ಪ್ರಯಾಣಿಕರು ಪರದಾಡಬೇಕಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯೋಗಾನಂದ ಕುಮಾರ್ ಮಾತನಾಡಿ, ಕಾರ್ಯಕರ್ತರು ಹೇಳುವ ವಿಷಯವನ್ನು ಸೌಜನ್ಯದಿಂದ ಕೇಳುವ ವ್ಯವದಾನ ಸಹ ಇಲ್ಲದೆ ಗೂಂಡಾ ರೀತಿಯಲ್ಲಿ ವರ್ತಿಸುವ ಶಾಸಕರು ಸರ್ವಾಧಿಕಾರಿಯಂತೆ ನಡೆದುಕೊಂಡಿದ್ದಾರೆ. ಇದು ತಾಲೂಕಿನ ಜನತೆ ತಲೆ ತಗ್ಗಿಸುವ ವಿಚಾರವಾಗಿದೆ ಎಂದರು.

ನಗರೋತ್ಥಾನ 4ನೇ ಹಂತದ ಕಾಮಗಾರಿ ಹಣ ಸರ್ಕಾರ ನೀಡಿರುವ ಹಣ. ಈ ಕಾಮಗಾರಿಯ ಬಗ್ಗೆ ನಗರಸಭೆ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ತಿಳಿಸದೆ ಅಧಿಕಾರಿಗಳಿಗೆ ಹೆದರಿಸಿ ಏಕಾಏಕಿ ಕಾರ್ಯಕ್ರಮ ರೂಪಿಸುವುದು ಸರಿಯಲ್ಲ. ಶಿಷ್ಟಾಚಾರದಂತೆ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ಕರೆದು ಸದಸ್ಯರೊಂದಿಗೆ ಚರ್ಚಿಸಿ ಕಾರ್ಯಕ್ರಮ ರೂಪಿಸಬೇಕು ಹಾಗೂ ಈ ಕಾರ್ಯಕ್ರಮಕ್ಕೆ ವಿಧಾನಪರಿಷತ್ ಸದಸ್ಯರು, ಸಂಸದರು ಹಾಗೂ ಎಲ್ಲರನ್ನು ಕರೆಯಬೇಕು. ಯಾರಿಗೂ ವಿಷಯ ತಿಳಿಸದೆ ಸರ್ವಾಧಿಕಾರಿಯಂತೆ ನಡೆದುಕೊಂಡಿದ್ದಾರೆ. ಈ ಬಗ್ಗೆ ನಾವು ಜಿಲ್ಲಾಧಿಕಾರಿಗಳ ಗಮನಕ್ಕೆ ತರುತ್ತೇವೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ನಾಗಣ್ಣಗೌಡ, ನಗರಾಧ್ಯಕ್ಷ ಹಾಗೂ ಹುಡಾ ಅಧ್ಯಕ್ಷ ಮತ್ತು ನಗರಸಭೆ ಸದಸ್ಯರಾದ ಗಣೇಶ್ ಕುಮಾರ್‌ಸ್ವಾಮಿ, ನಗರಸಭಾ ಸದಸ್ಯ ಹರೀಶ್, ನಾಮನಿರ್ದೇಶನ ಸದಸ್ಯರುಗಳಾದ ಅರುಣ್‌ಚವ್ಹಾಣ್, ಶ್ರೀನಿವಾಸ್ ಕೆ.ವಿ., ರಮೇಶ್, ಉಮೇಶ್, ವಿ.ಪಿ.ಸಾಯಿನಾಥ್ ಮುಖಂಡರುಗಳಾದ ರವಿಕುಮಾರ್, ಮುದ್ದುರಾಮ್ ಹಾಗೂ ಅಶೋಕ್ ಮತ್ತಿತರರು ಇದ್ದರು.

ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿದ ನಗರ ಕಾಂಗ್ರೆಸ್ ಅಧ್ಯಕ್ಷ ರಮೇಶ್ ನಗರೋತ್ಥಾನ 4ನೇ ಹಂತದ ಯೋಜನೆಯಲ್ಲಿ 25.5 ಕೋಟಿ ರೂಪಾಯಿಗಳ ಪೈಕಿ 10.5 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ನಗರದ 31 ವಾರ್ಡ್‌ಗಳಲ್ಲಿ ಚರಂಡಿ ಮತ್ತು ಸಿಸಿ ರಸ್ತೆಗಳ ಕಾಮಗಾರಿಗೆ ಚಾಲನೆ ನೀಡಲು ಇಂದು ಕಾರ್ಯಕ್ರಮ ಆಯೋಜಿಸಲಾಗಿತ್ತು. ನಾವು ಎಲ್ಲಾ ಸದಸ್ಯರಿಗೂ ತಿಳಿಸಿ ಕಾರ್ಯಕ್ರಮ ರೂಪಿಸಿದ್ದು, ಸರ್ಕಾರದ ಹಣ ಸಾರ್ವಜನಿಕರ ಬಳಕೆಗೆ ನಿಯೋಗಿಸಲು ಮುಂದಾದಾಗ ಇದನ್ನು ಸಹಿಸದ ಬಿಜೆಪಿ ಕಾರ್ಯಕರ್ತರು ಬಂದು ತಡೆಯೊಡ್ಡಿದ್ದಾರೆ ಎಂದರು.

ಎಷ್ಟೇ ವಿರೋಧವಿದ್ದರೂ ಇಂದು ನಗರದ ಕಲ್ಕುಣಿಕೆ ಸರ್ಕಲ್, ಶಬ್ಬೀರ್‌ನಗರ ಮತ್ತು ನಿಮಿಷಾಂಬ ಕಲ್ಯಾಣಮಂಟಪದ ಹತ್ತಿರ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ್ದೇವೆ. ತಡ ಮಾಡಿದರೇ ಚುನಾವಣೆ ನೀತಿ ಸಂಹಿತೆ ಬಂದರೆ ಎಲ್ಲಾ ಕೆಲಸಗಳು ಸ್ಥಗಿತಗೊಳ್ಳುತ್ತದೆ ಎಂದರು. ಅಲ್ಲದೆ ಸಾರ್ವಜನಿಕ ಕೆಲಸಗಳಿಗೆ ಈ ರೀತಿ ಅಡ್ಡಿಪಡಿಸುವುದು ಒಳ್ಳೆಯದಲ್ಲ. ಬಿಜೆಪಿಯವರು ವಿನಾಕಾರಣ ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ ಎಂದರು.

ಈ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷೆ ಶ್ವೇತಾ ಮಂಜುನಾಥ್, ಸದಸ್ಯರಾದ ಸ್ವಾಮಿಗೌಡ, ದೇವನಾಯ್ಕ, ಜಾಕಿರ್ ಹುಸ್ಸೇನ್, ಕಾವ್ಯ, ಅಧ್ಯಕ್ಷೆ ಸೌರಭ ಸಿದ್ಧರಾಜು, ಪಕ್ಷದ ಕಾರ್ಯಾಧ್ಯಕ್ಷ ಪುಟ್ಟರಾಜು, ಸೇರಿದಂತೆ ನೂರಾರು ಕಾರ್ಯಕರ್ತರು ಈ ಸಂದರ್ಭದಲ್ಲಿ ಇದ್ದರು.

ನಗರಸಭಾ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶರ್ಮಿಳ ಅವರು ಮಾತನಾಡಿ, ಇಂದು ಕಾಮಗಾರಿಗೆ ಚಾಲನೆ ನೀಡುವ ಸಂದರ್ಭದಲ್ಲಿ ಎರಡೂ ಗುಂಪುಗಳ ನಡುವೆ ಗಲಾಟೆ ಆದ ಕಾರಣ, ಮೈಸೂರು ಜಿಲ್ಲಾಧಿಕಾರಿಗಳಿಂದ ಕಾರ್ಯಕ್ರಮ ರದ್ದು ಮಾಡಿ ಎಂಬ ಆದೇಶಕ್ಕೆ ಬಂದಿದ್ದರಿಂದ ತಿಳಿಸಿದ್ದರಿಂದ ನಾವು ಕಾರ್ಯಕ್ರಮವನ್ನು ಕಛೇರಿಗೆ ಹಿಂತಿರುಗಿದೆವು ಎಂದರು.

ಈ ಸಂದರ್ಭದಲ್ಲಿ ಸೆಕ್ಷನ್ ಇಂಜಿನಿಯರ್ ಲೋಕೇಶ್, ಕಂದಾಯ ಅಧಿಕಾರಿ ಸಿದ್ದರಾಜು, ನೀರು ಸರಬರಾಜು ಜೆ.ಇ. ಶಿವಕುಮಾರ್ ಸೇರಿದಂತೆ ನಗರಸಭಾ ಅಧಿಕಾರಿಗಳು ಉಪಸ್ಥಿತರಿದ್ದರು.

ಎರಡೂ ಗುಂಪುಗಳ ನಡುವೆ ನಡೆದ ಗಲಾಟೆಯಿಂದಾಗಿ ಜಿಲ್ಲಾಧಿಕಾರಿಗಳು ತಾತ್ಕಾಲಿಕವಾಗಿ ಕಾರ್ಯಕ್ರಮ ರದ್ದು ಮಾಡಿ ಎಂದು ಆದೇಶ ಮಾಡಿದರೂ ಶಾಸಕರೂ ತಮ್ಮ ಬೆಂಬಲಿಗರನ್ನು ಕರೆದುಕೊಂಡು ಅಧಿಕಾರಿಗಳನ್ನು ಕರೆಯದೆ ನಗರದ ಶಬ್ಬೀರ್‌ನಗರ ಮತ್ತು ನಿಮಿಷಾಂಬ ಕಲ್ಯಾಣ ಮಂಟಪದ ಹತ್ತಿರ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು, ಮತ್ತಷ್ಟು ವಿರೋಧಕ್ಕೆ ಕಾರಣವಾಗಿದೆ.

ಶ್ರೀ ಮರುಡೇಶ್ವರ ಕ್ಷೇತ್ರದಲ್ಲಿ ವಿಜೃಂಭಣೆಯ ರಥೋತ್ಸವ



ಟಿ.ನರಸೀಪುರ, ಮಾ.15– ತಾಲೂಕಿನ ಮಾದಾಪುರದ ಶ್ರೀ ಮರುಡೇಶ್ವರ ಕ್ಷೇತ್ರದಲ್ಲಿ ಇಂದು ವಿಜೃಂಭಣೆಯಿಂದ ರಥೋತ್ಸವವು ಜರುಗಿತು. ದೇವಸ್ಥಾನದಲ್ಲಿ ವಿಶೇಷ ಹೂವಿನ ಅಲಂಕಾರವನ್ನು ಮಾಡಲಾಗಿತ್ತು.

ಇಂದು ಬೆಳಗ್ಗೆ ಶ್ರೀ ಮರುಡೇಶ್ವರ ಸ್ವಾಮಿಗೆ ಅಭಿಷೇಕ ಸಮೇತ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿತ್ತು. ಶ್ರೀ ಗಣಪತಿ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಹಾಗೂ ಶ್ರೀ ಮರುಡೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ದೇವಸ್ಥಾನದ ಆವರಣದಲ್ಲಿ ಮೆರವಣಿಗೆಯ ಮುಖಾಂತರ ರಥಕ್ಕೆ ಇಡಲಾಯಿತು. ಸುಮಾರು 50 ಅಡಿಗೂ ಎತ್ತರವಿರುವ ಅಲಂಕೃತ ಬ್ರಹ್ಮ ರಥವು ಎಲ್ಲರ ಗಮನವನ್ನು ಸೆಳೆಯಿತು.

ಸಾವಿರಾರು ಭಕ್ತರ ಹರ್ಷೋದ್ಗಾರದ ನಡುವೆ ಮೂರು ರಥಗಳ ಉತ್ಸವವು ಸಾಂಗವಾಗಿ ಜರುಗಿತು. ದೇವಸ್ಥಾನದ ಮುಂಭಾಗದಲ್ಲಿರುವ ರಥದ ಬೀದಿಯಲ್ಲಿ ರಥೋತ್ಸವವು ಸಾಗಿ ಸ್ವಸ್ಥಾನಕ್ಕೆ ಬಂದು ನಿಂತವು. ಭಕ್ತಿಭಾವದಿಂದ ಭಕ್ತರು ಹಣ್ಣು ದವನಗಳನ್ನು ರಥಕ್ಕೆ ಎಸೆದು ಭಕ್ತಿ ಸಮರ್ಪಿಸಿದರು. ಮಂಗಳವಾದ್ಯದೊಂದಿಗೆ ವೀರಭದ್ರ ಕುಣಿತ ಸಮೇತ ಅನೇಕ ಕಲಾತಂಡಗಳು ರಥದ ಮುಂದೆ ಸಾಗಿದವು. ಟಿ.ನರಸೀಪುರ ಕ್ಷೇತ್ರದ ಶಾಸಕ ಅಶ್ವಿನ್‌ಕುಮಾರ್ ಹಾಗೂ ಜನಪ್ರತಿನಿಧಿಗಳು ಭಾಗವಹಿಸಿದ್ದರು. ರಥೋತ್ಸವಕ್ಕೆ ಆಗಮಿಸಿದ್ದ ಭಕ್ತಾದಿಗಳಿಗೆ ಪಾನಕ, ಮಜ್ಜಿಗೆ ಹಾಗೂ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿತ್ತು. ಗುರುವಾರ ರಾತ್ರಿ ಕಾವೇರಿ ನದಿಯಲ್ಲಿ ತೆಪ್ಪೋತ್ಸವವು ನಡೆಯಲಿದೆ.

ಮಾ.18ರಂದು ಹೆಚ್.ಡಿ.ಕೋಟೆಯಲ್ಲಿ ಮೈಸೂರು ಜಿಲ್ಲಾ ಬಿಜೆಪಿ ಎಸ್‌ಸಿ ಮೋರ್ಚಾ ಸಮಾವೇಶ



ಹೆಚ್.ಡಿ.ಕೋಟೆ, ಮಾ.15– ಬಿಜೆಪಿ ಮೈಸೂರು ಜಿಲ್ಲಾ ಮಟ್ಟದ ಎಸ್‌ಸಿ ಮೋರ್ಚಾ ಸಮಾವೇಶವನ್ನು ಮಾ.18ರಂದು ಕೋಟೆ ಪಟ್ಟಣದಲ್ಲಿ ಏರ್ಪಡಿಸಲಾಗಿದೆ ಎಂದು ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷೆ ಮಂಗಳ ಸೋಮಶೇಖರ್ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನಡೆದ ಎಸ್‌ಸಿ ಮೋರ್ಚಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಬಿಜೆಪಿ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆ ಇದೆ. ಇದಕ್ಕಾಗಿ ಕಾರ್ಯಕರ್ತರು, ಮುಖಂಡರು ಪಕ್ಷವನ್ನು ಸಂಘಟಿಸುವ ನಿಟ್ಟಿನಲ್ಲಿ ಶಕ್ತಿ ಮೀರಿ ಕೆಲಸ ಮಾಡಬೇಕು ಎಂದು ಮನವಿ ಮಾಡಿದರಲ್ಲದೆ, ಕೋಟೆ ಕ್ಷೇತ್ರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬಿಜೆಪಿ ಪಕ್ಷವನ್ನು ಗೆಲ್ಲಿಸುವ ಉದ್ದೇಶದಿಂದ, ಈ ಸಮಾವೇಶವನ್ನು ನಡೆಸಲಾಗುತ್ತಿದೆ ಎಂದರು.

ಸಮಾವೇಶದಲ್ಲಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಜ್ಯ ಎಸ್‌ಸಿ ಮೋರ್ಚಾ ಅಧ್ಯಕ್ಷ ಚಲವಾದಿ ನಾರಾಯಣಸ್ವಾಮಿ, ಸಂಸದ ವಿ.ಶ್ರೀನಿವಾಸಪ್ರಸಾದ್, ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಕೊಳ್ಳೇಗಾಲ ಶಾಸಕ ಎನ್. ಮಹೇಶ್, ರಾಜ್ಯ ಹಾಗೂ ಜಿಲ್ಲಾ ಮುಖಂಡರು ಭಾಗವಹಿಸಲಿದ್ದಾರೆ. ಈ ಸಮಾವೇಶಕ್ಕೆ ಜಿಲ್ಲೆಯ ಎಲ್ಲಾ ತಾಲೂಕುಗಳಿಂದಲೂ, ಪ.ಜಾತಿ, ಸಮುದಾಯದ ಪಕ್ಷದ ಕಾರ್ಯಕರ್ತರು, ಮುಖಂಡರು ಸೇರಿದಂತೆ ಸುಮಾರು 5 ಸಾವಿರಕ್ಕೂ ಹೆಚ್ಚು ಮಂದಿ ಆಗಮಿಸುವ ನಿರೀಕ್ಷೆ ಇದೆ ಎಂದರು.

ಇದೆ ವೇಳೆ ಮಾಜಿ ಸಂಸದರು, ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಆರ್.ಧೃವನಾರಾಯಣ್ ಅವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು. ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ಉಸ್ತುವಾರಿ ಅಶ್ವತ್ ನಾರಾಯಣ್, ಸಮಾವೇಶದ ಸಂಚಾಲಕ ಬಾಲಕೃಷ್ಣ, ಸಹ ಸಂಚಾಲಕ ಹಾಗೂ ಮಾಧ್ಯಮ ಸಹ ವಕ್ತಾರರಾದ ಸಿ.ಕೆ. ಗಿರೀಶ್, ಬಿಜೆಪಿ ಮುಖಂಡ ಡಾ.ಹೆಚ್.ವಿ. ಕೃಷ್ಣಸ್ವಾಮಿ, ಶಿವರಾಜ್, ಜಿಪಂ ಮಾಜಿ ಸದಸ್ಯರುಗಳಾದ ವೆಂಕಟಸ್ವಾಮಿ, ಹೆಚ್.ಸಿ. ಲಕ್ಷ್ಮಣ್, ಎಸ್‌ಸಿ ಮೋರ್ಚಾ ಅಧ್ಯಕ್ಷ ರಾಜು, ಪ್ರಧಾನ ಕಾರ್ಯದರ್ಶಿ ವಿವೇಕಾನಂದ, ನಂದೀಶ್ ಸ್ವಾಮಿ, ಬಿ.ಟಿ. ನರಸಿಂಹಮೂರ್ತಿ, ಮಧು ಗೌಡ, ಮಾದೇವ, ಸಿದ್ದರಾಜು, ಗೋವಿಂದ್, ರಾಜು, ಜವರಯ್ಯ , ಚೆಲುವಯ್ಯ, ರವಿ, ರಾಜೇಂದ್ರ, ಸಿಂಗಯ್ಯ, ಮಹೇಶ, ಭಾನುಪ್ರಸಾದ್, ಶಿವಣ್ಣ, ಬೀರಯ್ಯ, ನಾಗೇಂದ್ರ, ಉಡಾ ನಾಗರಾಜ್, ಚಾಮರಾಜ, ಶಿವು, ಕೃಷ್ಣಯ್ಯ, ಬೆಟ್ಟಯ್ಯ, ಮಲ್ಲೇಗೌಡ, ಇನ್ನಿತರರು ಭಾಗವಹಿಸಿದ್ದರು.

ಅಭಿವೃದ್ಧಿ ಬಗ್ಗೆ ಶ್ವೇತಪತ್ರ ಹೊರಡಿಸಿ ಚುನಾವಣೆಗೆ

ನಂಜನಗೂಡು ಬಿಜೆಪಿಯ ಭದ್ರಕೋಟೆ: ಶ್ರೀನಿವಾಸ ಪ್ರಸಾದ್



ನಂಜನಗೂಡು, ಮಾ.15– ನಂಜನಗೂಡು ಬಿಜೆಪಿ ಪಕ್ಷದ ಭದ್ರಕೋಟೆಯಾಗಿದ್ದು, ಕ್ಷೇತ್ರದಲ್ಲಿ ಶಾಸಕರು ಮಾಡಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಶ್ವೇತಪತ್ರ ಹೊರಡಿಸಿ ಚುನಾವಣೆಗೆ ಹೋಗುತ್ತೇವೆ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ತಿಳಿಸಿದ್ದಾರೆ.

ನಗರದ ಹುಲ್ಲಹಳ್ಳಿ ರಸ್ತೆಯ ಎಪಿಎಂಸಿ ಬಳಿ ನಗರೋತ್ಥಾನ ಅನುದಾನದಡಿಯಲ್ಲಿ 45 ಲಕ್ಷ ರೂ. ವೆಚ್ಚದ ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಾವು ಅಭಿವೃದ್ಧಿ ದೃಷ್ಟಿಯಿಂದ ಚುನಾವಣೆಗೆ ಹೋಗುತ್ತೇವೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿರವರು ಶಾಸಕರು 500 ಕೋಟಿ ಅನುದಾನ ಬಿಡುಗಡೆ ಮಾಡಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಬಿ.ಎಸ್.ಯಡಿಯೂರಪ್ಪರವರೂ ಸಹ 200 ಕೋಟಿ ಅನುದಾನ ನೀಡಿದ್ದಾರೆ. ಕ್ಷೇತ್ರದಲ್ಲಿ 700 ಕೋಟಿಗೂ ಹೆಚ್ಚಿನ ಅಭಿವೃದ್ಧಿ ಕೆಲಸವಾಗಿದೆ ಎಂದರು. ಕಾಂಗ್ರೆಸ್ ಪಕ್ಷದಲ್ಲಿ ಗೊಂದಲವಿರುವುದು ಆ ಪಕ್ಷದ ಆಂತರಿಕ ವಿಚಾರ. ಅದಕ್ಕೂ ನಮಗೂ ಸಂಬಂಧವಿಲ್ಲ, ಧ್ರುವನಾರಾಯಣ ಬಗ್ಗೆ ಎಲ್ಲರಿಗೂ ಅನುಕಂಪವಿದೆ, ನಮಗೂ ಅವರ ಸಾವಿನ ಬಗ್ಗೆ ಅನುಕಂಪವಿದೆ. ಆದರೆ ಚುನಾವಣೆಗೂ ಇದಕ್ಕೂ ಸಂಬಂಧವಿಲ್ಲ, ಕಳೆದ 5 ವರ್ಷದಲ್ಲಿ ಕ್ಷೇತ್ರದಲ್ಲಿ ಏನೇನು ಅಭಿವೃದ್ಧಿಯಾಗಿದೆ ಎಂಬುದನ್ನು ತಿಳಿಸಿ ಜನಾಶೀರ್ವಾದಕ್ಕೆ ಹೋಗುತ್ತೇವೆ. ಕ್ಷೇತ್ರದಲ್ಲಿ ಈಗಾಗಲೇ ಬಿಜೆಪಿ ಪಕ್ಷ ಗ್ರಾಮ ಪಂಚಾಯ್ತಿ, ನಗರಸಭೆಯಲ್ಲಿ ಹೆಚ್ಚಿನ ಬಹುಮತ ಪಡೆದಿದೆ. ವಿಧಾನಸಭೆ ಲೋಕಸಭೆ ಚುನಾವಣೆಯಲ್ಲೂ ಕೂಡ 10 ಸಾವಿರ ಮತಗಳಿಂದ ಬಿಜೆಪಿ ಗೆಲುವು ಸಾಧಿಸಿದೆ. ಹೆಚ್ಚಿನ ಸಂಘಟನೆ ಬಿಜೆಪಿ ಪಕ್ಷದಲ್ಲಾಗಿದ್ದು ಕ್ಷೇತ್ರದಲ್ಲಿ ಯಾರೇ ಅಭ್ಯರ್ಥಿಯಾದರೂ ನಾವು ತಲೆಕೆಡಿಸಿಕೊಳ್ಳುವುದಿಲ್ಲ ನಾವು ಚುನಾವಣೆಗೆ ಸಜ್ಜಾಗಿದ್ದೇವೆ ಎಂದರು.

ನಗರದ ಹುಲ್ಲಹಳ್ಳಿ ರಸ್ತೆಯ ಎಸ್ಸಿ, ಎಸ್ಟಿ ಹಾಸ್ಟೆಲ್ ಮುಂಭಾಗದಲ್ಲಿ ಮಳೆ ಹೆಚ್ಚಾದಾಗ ಚರಂಡಿ ನೀರು ಹರಿದು ಬಂದು ರಸ್ತೆಯಲ್ಲಿ ನಿಲ್ಲುತ್ತಿತ್ತು. ಈ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ನಗರಸಭೆಯ ನಗರೋತ್ಥಾನ ಅನುದಾನದಲ್ಲಿ 45 ಲಕ್ಷ ವೆಚ್ಚದಲ್ಲಿ ಚರಂಡಿ ಕಾಮಗಾರಿಗೆ ಚಾಲನೆ ನೀಡಲಾಗಿದ್ದು ಎಪಿಎಂಸಿ ಮೂಲಕ ಹಾದು ಹೋಗಿ ರಾಜಕಾಲುವೆಗೆ ನೀರನ್ನು ಬಿಡಲಾಗುವುದು ಅಲ್ಲದೆ 8 ಕೋಟಿ ವೆಚ್ಚದಲ್ಲಿ ಹುಲ್ಲಹಳ್ಳಿ ವೃತ್ತದಿಂದ ಬಸವೇಶ್ವರ ದೇವಾಲಯದವರೆಗೆ ಡಬಲ್ ರಸ್ತೆಯನ್ನು ನಿರ್ಮಿಸಲಾಗುವುದು ಎಂದರು.

ನಗರಸಭಾಧ್ಯಕ್ಷ ಎಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ ಶಂಕರಪ್ಪ, ಸದಸ್ಯರಾದ ಮೀನಾಕ್ಷಿ, ವಿಜಯಲಕ್ಷ್ಮಿ, ಮಹದೇವ ಪ್ರಸಾದ್, ತಾಪಂ ಮಾಜಿ ಸದಸ್ಯ ಬಿ.ಎಸ್.ರಾಮು, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಕಳ್ಳತನ

ಹುಂಡಿ ಒಡೆದು ನಗ-ನಾಣ್ಯ ದೋಚಿ ಪರಾರಿ



ನಂಜನಗೂಡು, ಮಾ.15– ವರುಣಾ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ತಾಲೂಕಿನ ಚುಂಚನಹಳ್ಳಿ ಗ್ರಾಮದ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಬಾಗಿಲು ಮುರಿದು ಹುಂಡಿ ಹಣ ಕಳವು ಮಾಡಿರುವ ಘಟನೆ ನಡೆದಿದೆ.

ಚುಂಚನಹಳ್ಳಿ ಗ್ರಾಮದ ಹೊರ ವಲಯದಲ್ಲಿರುವ ಮಾದಯ್ಯನಗುಡಿಯ ಶ್ರೀ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ರಾತ್ರಿಯ ಸಮಯದಲ್ಲಿ ಕಳ್ಳರು ಒಳ ನುಗ್ಗಿ ಬಾಗಿಲು ಮುರಿದು, ಹುಂಡಿಯ ಬೀಗವನ್ನು ಒಡೆದು ಹುಂಡಿಯಲ್ಲಿದ್ದ ನಗದು ಹಣ ಹಾಗೂ ಚಿನ್ನಾಭರಣವನ್ನು ದೋಚಿ ಪರಾರಿಯಾಗಿದ್ದಾರೆ.

ಕಳೆದ ಎರಡು ದಿನಗಳಿಂದ ಶ್ರೀ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನಡೆದಿತ್ತು. ಹುಂಡಿಯಲ್ಲಿ ಸಾಕಷ್ಟು ನಗದು ಮತ್ತು ಚಿನ್ನಾಭರಣ ಸಂಗ್ರಹವಾಗಿತ್ತು. ಬುಧವಾರ ಗ್ರಾಮಸ್ಥರು ಹುಂಡಿ ಎಣಿಕೆ ಕಾರ್ಯ ನಡೆಸಬೇಕಾಗಿತ್ತು ಆದರೆ, ಖದೀಮರು ಹುಂಡಿಯಲ್ಲಿದ್ದ ಹಣವನ್ನು ಕದ್ದುಕೊಂಡು ಹೋಗಿರುವುದು ಆಶ್ಚರ್ಯ ಸಂಗತಿ. ಈ ಸಂಬಂಧ ಕವಲಂದೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದಾರೆ.

ಸೋಸಲೆಯ ಬಳಿ ಚಿಕ್ಕಮಾದನಾಯಕರ ಬಡಾವಣೆ ನಾಮಫಲಕ ಅನಾವರಣ

ಶಾಸಕರಾಗಿದ್ದ ವೇಳೆ ಬಡವರಿಗೆ ಸೂರು ನಿರ್ಮಿಸಿಕೊಳ್ಳಲು ನಿವೇಶನ ಕೊಡಿಸಿದ್ದ ಮಾಜಿ ಶಾಸಕರು



ತಿ.ನರಸೀಪುರ, ಮಾ.15– ಬಡವರು, ನಿವೇಶನ ರಹಿತರಿಗೆ ಮನೆ ನಿರ್ಮಿಸಿಕೊಳ್ಳಲು ತಮ್ಮ ಅವಧಿಯಲ್ಲಿ ನಿವೇಶನ ಮಂಜೂರು ಮಾಡಿಸಿ ಗ್ರಾಮಸ್ಥರಿಗೆ ಸೂರು ಕಲ್ಪಿಸಿಕೊಟ್ಟಿದ್ದ ಮಾಜಿ ಶಾಸಕ ಕೆ.ಎಂ.ಚಿಕ್ಕಮಾದನಾಯಕರ ಹೆಸರಿನ ಬಡಾವಣೆಯೊಂದು ಸೋಸಲೆ ಗ್ರಾಮದ ಎಸ್‌ಕೆಪಿ ಅಗ್ರಹಾರ (ಕಟ್ಟೇಮನೆ)ದಲ್ಲಿ ನಿರ್ಮಾಣ ಗೊಂಡಿದ್ದು ಗ್ರಾಮಸ್ಥರ ಅಭಿಲಾಷೆಯ ಮೇರೆಗೆ ಸ್ವತಃ ಚಿಕ್ಕಮಾದನಾಯಕರೇ ಬುಧವಾರ ಬಡಾವಣೆಯ ನಾಮಫಲಕ ಉದ್ಘಾಟನೆ ಮಾಡಿದರು.

ಬನ್ನೂರು ವಿಧಾನಸಭಾ ಕ್ಷೇತ್ರದಲ್ಲಿ ಶಾಸಕರಾಗಿದ್ದ ಚಿಕ್ಕಮಾದನಾಯಕರು ಮೊದಲ ಶಾಸಕರಾದ ಅವಧಿಯಲ್ಲೇ ಗ್ರಾಮದ ಬಡ ಮತ್ತು ಸೂರು ರಹಿತ ಜನರ ಕಷ್ಟವನ್ನು ಕಂಡು ಸರ್ಕಾರದಿಂದ 68 ನಿವೇಶನಗಳನ್ನು ಮಂಜೂರು ಮಾಡಿಸಿ ಹಂಚಿಕೆ ಮಾಡಿದ್ದರು. ಆದರೆ ನಿವೇಶನದಾರರು ಸಂಪೂರ್ಣವಾಗಿ ಮನೆ ನಿರ್ಮಾಣ ಮಾಡಿಕೊಳ್ಳದ ಹಿನ್ನೆಲೆಯಲ್ಲಿ ಬಡಾವಣೆಯ ಉದ್ಘಾಟನೆ ನನೆಗುದಿಗೆ ಬಿದ್ದಿತ್ತು. ಕ್ರಮೇಣ ಈಗ ಎಲ್ಲ ನಿವೇಶನದಾರರು ಮನೆ ನಿರ್ಮಿಸಿಕೊಂಡ ಹಿನ್ನೆಲೆಯಲ್ಲಿ ಮಾಜಿ ಶಾಸಕರು ಬಡಾವಣೆಯ ನಿವಾಸಿಗಳ ಅಭಿಲಾಷೆಯಂತೆ ಸ್ವತಃ ತಮ್ಮ ಇಳಿ ವಯಸ್ಸಿನಲ್ಲೂ ಬಂದು ಬಡಾವಣೆಯ ನಾಮಫಲಕ ಉದ್ಘಾಟನೆ ಮಾಡುವ ಮೂಲಕ ನಿವಾಸಿಗಳ ಆಶಯಕ್ಕೆ ಸ್ಪಂದಿಸಿದರು.

ಈ ವೇಳೆ ಮಾತನಾಡಿದ ಚಿಕ್ಕ ಮಾದನಾಯಕ ಅವರು ಬನ್ನೂರು ವಿಧಾನ ಸಭಾ ಕ್ಷೇತ್ರ(ಈಗ ತಿ.ನರಸೀಪುರ ಕ್ಷೇತ್ರ) ವ್ಯಾಪ್ತಿಗೊಳಪಡುವ 160 ಗ್ರಾಮಗಳಲ್ಲೂ ಸೂರಿಲ್ಲದ ಬಡವರು, ಮಧ್ಯಮ ವರ್ಗದವರು ಹಾಗೂ ಪ.ಜಾತಿ, ಪಂಗಡದವರಿಗೆ ನಿವೇಶನ ಮಂಜೂರು ಮಾಡಿಸಿಕೊಡುವ ಮೂಲಕ ಗ್ರಾಮಸ್ಥರ ಕಷ್ಟ ಸುಖಗಳಿಗೆ ಸ್ಪಂದಿಸಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೆ. ಬನ್ನೂರು ಪಟ್ಟಣದಲ್ಲಿ ಮುಸ್ಲಿಂ, ಪ.ಜಾತಿ ಮತ್ತು ಹಿಂದುಳಿದ ವರ್ಗದವರಿಗೆ 8 ಎಕರೆ ಪ್ರದೇಶದಲ್ಲಿ ನಿವೇಶನ ಮಂಜೂರು ಮಾಡಿಸಿಕೊಟ್ಟಿದ್ದೆ. ಆದರೆ ನಿವೇಶನ ಮಂಜೂರು ಮಾಡಿಸಿದ ಕ್ರೆಡಿಟ್ ನನಗೆ ಸೇರುತ್ತದೆಂಬ ಉದ್ದೇಶದಿಂದ ಬಡಾವಣೆಗೆ ಹೆಸರಿಡಲು ವಿರೋಧ ಪಕ್ಷದವರು ಅವಕಾಶ ನೀಡಲಿಲ್ಲ ಎಂದು ಬೇಸರ ವ್ಯಕ್ತ ಪಡಿಸಿದರು.

ಕ್ಷೇತ್ರ ಬಿಜೆಪಿ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್ ಮಾತನಾಡಿ, ತಂದೆ ಚಿಕ್ಕ ಮಾದನಾಯಕರು ಪ್ರಥಮ ಬಾರಿಗೆ ಶಾಸಕರಾದ ಸಂದರ್ಭದಲ್ಲಿ ಎಸ್‌ಕೆಪಿ ಅಗ್ರಹಾರಕ್ಕೆ ಸರ್ಕಾರದಿಂದ 68 ನಿವೇಶನಗಳನ್ನು ಹಂಚಿಕೆ ಮಾಡಿಸಿದ್ದರು. ಬಡಾವಣೆ ಉದ್ಘಾಟನೆ ಹೆಚ್ಚಿನವರು ಮನೆ ಕಟ್ಟಿಕೊಳ್ಳದ್ದರಿಂದ ಸಾಧ್ಯವಾಗಿರಲಿಲ್ಲ ಈಗ 68 ಮಂದಿಯ ಪೈಕಿ ನಾಲ್ಕಾರು ಮಂದಿ ಹೊರತು ಪಡಿಸಿ ಎಲ್ಲರೂ ಮನೆ ನಿರ್ಮಿಸಿಕೊಂಡು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ. ನಿವೇಶನ ನೀಡುವ ಮೊದಲು ಹಳೇ ಸೈಟಿನಲ್ಲಿ ಜಾಗ ಇಲ್ಲದೇ ಗ್ರಾಮಸ್ಥರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಣ್ಣ ತಮ್ಮಂದಿರು ಒಂದು ಮನೆಯನ್ನು ನಾಲ್ಕು ಭಾಗ ಮಾಡಿ ವಾಸ ಮಾಡುತ್ತಿದ್ದರು. 25 ವರ್ಷದ ಹಿಂದೆ ನಮ್ಮ ತಂದೆ ಶಾಸಕರಾಗಿ ಆಯ್ಕೆಯಾದ ನಂತರ ನಿವೇಶನ ಮಂಜೂರು ಮಾಡಿಸಿದ್ದರಿಂದ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಿ ಬಡ ಜನತೆಯ ಕಷ್ಟ ಸುಖಗಳಿಗೆ ಸ್ಪಂದಿಸುವ ಕೆಲಸ ಮಾಡಿದರು ಎಂದರು.

ಇಂದ್ರೇಶ್, ವೆಂಕಟೇಶ್, ಶಿವಮೂರ್ತಿ, ಯಜಮಾನರಾದ ಮರಿಸ್ವಾಮಿ, ಮಹದೇವ ಸ್ವಾಮಿ(ಪಟೇಲ), ಎಸ್.ಆರ್. ಮಂಜು, ಎಂ. ಮರಿಸ್ವಾಮಿ ಹಾಗೂ ಗ್ರಾಮಸ್ಥರು ಹಾಜರಿದ್ದರು.

> ಚಿಕ್ಕ ಮಾದನಾಯಕರು ಹಿಂದುಳಿದ ವರ್ಗದವರ ನೇತಾರರಂತೆ ಕ್ಷೇತ್ರದಲ್ಲಿ ಕೆಲಸ ಮಾಡಿದ್ದರು. ಅವರು ಕ್ಷೇತ್ರದಲ್ಲಿ ಮಾಡಿದ ಅಭಿವೃದ್ಧಿ ಕೆಲಸಗಳು ಇಂದಿಗೂ ಜೀವಂತವಾಗಿವೆ.ಕ್ಷೇತ್ರದಲ್ಲಿ ಹಲವಾರು ಮುಖಂಡರನ್ನು ಹುಟ್ಟಿಹಾಕಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇಂದು ಬೇರೆ ಬೇರೆ ಪಕ್ಷದಲ್ಲಿ ಮೆರೆಯುತ್ತಿರುವ ನಾಯಕರು ಚಿಕ್ಕ ಮಾದನಾಯಕರ ಗರಡಿಯಲ್ಲಿ ಪಳಗಿದವರು.ಶಾಸಕರಾಗಿದ್ದಾಗ ಅವರ ಹಿಂದೆ ಅನುಯಾಯಿಗಳು ಎಷ್ಟೇ ಪಕ್ಷ ಬದಲಿಸಿದರೂ ಇಂದಿಗೂ ಅವರ ಹೆಸರನ್ನೇ ಹೇಳಿ ರಾಜಕಾರಣ ಮಾಡುತ್ತಿದ್ದಾರೆ.ಚಿಕ್ಕ ಮಾದನಾಯಕರ ಬೆನ್ನಿಗೆ ಚೂರಿ ಹಾಕಿದವರು ಯಾವುದೇ ಪಕ್ಷದಲ್ಲೂ ಮುಂದುವರೆಯಲು ಸಾಧ್ಯವಿಲ್ಲ ಎಂದು ಆಕ್ರೋಶ ಹೊರ ಹಾಕಿದರು
> –ಕೆಬ್ಬೇ ನಾಗಣ್ಣ, ಗ್ರಾ.ಪಂ ಮಾಜಿ ಅಧ್ಯಕ್ಷ

ಹುಣಸೂರು ಡಿವಿಷನ್ ಕ್ರಿಕೆಟ್ ಕಪ್

ಹುಣಸೂರು ಹಂಟರ್ಸ್ ತಂಡಕ್ಕೆ ಪ್ರಥಮ ಬಹುಮಾನ



ಹುಣಸೂರು, ಮಾ.15– ಹುಣಸೂರಿನ ನಗರಸಭೆ ಮೈದಾನದಲ್ಲಿ ಸೆಸ್ಕಾಂ ಹಾಗೂ ಕೆಪಿಟಿಸಿಎಲ್ ಸಿಬ್ಬಂದಿಗಳಿಗೆ, ಹುಣಸೂರು ಡಿವಿಷನ್ ಕ್ರಿಕೆಟ್ ಕಪ್– 2023 ಮೂರನೇ ಆವೃತ್ತಿ, ಕ್ರಿಕೆಟ್ ಟೂರ್ನಮೆಂಟ್ ಆಯೋಜಿಸಲಾಗಿತ್ತು.

ಕ್ರಿಕೆಟ್ ಪಂದ್ಯಾವಳಿಯ ಉದ್ಘಾಟನೆಯನ್ನು ಸೆಸ್ಕ್ ಮೈಸೂರು ವೃತ್ತದ ಅಧೀಕ್ಷಕ ಇಂಜಿನಿಯರ್ ನಾಗೇಶ್ ಉದ್ಘಾಟಿಸಿದರು. ಹುಣಸೂರಿನ ಕಾರ್ಯನಿರ್ವಾಹಕ ಇಂಜಿನಿಯರ್ ಮಹೇಶ್ ಹಾಗೂ ಹುಣಸೂರು ಉಪ ವಿಭಾಗದ ಎಇಇ ಸಿದ್ದಪ್ಪ ಉಪಸ್ಥಿತರಿದ್ದರು.

ಟೂರ್ನಿಯಲ್ಲಿ ಎಚ್.ಡಿ.ಕೋಟೆ, ಸರಗೂರು, ಬಿಳಿಕೆರೆ ಹಾಗೂ ಹುಣಸೂರು ಭಾಗಗಳಿಂದ ಸುಮಾರು 14 ತಂಡಗಳು ಭಾಗವಹಿಸಿದ್ದವು. ಫೈನಲ್ ಮ್ಯಾಚ್‌ನಲ್ಲಿ ಹುಣಸೂರು ಹಂಟರ್ಸ್ ತಂಡವು, ಹೆಚ್‌ಡಿ ಕೋಟೆ ವನಸಿರಿ ತಂಡವನ್ನು ಸೋಲಿಸಿ ವಿನ್ನರ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ಎಚ್.ಡಿ. ಕೋಟೆ ವನಸಿರಿ ತಂಡವು ರನ್ನರ್ ಅಪ್ ಟ್ರೋಫಿಯನ್ನು ದಕ್ಕಿಸಿಕೊಂಡಿತು. ಸರಣಿಯ ಅತ್ಯುತ್ತಮ ಬ್ಯಾಟ್ಸ್ ಮೇನ್ ಆಗಿ ಹುಣಸೂರು ಹಂಟರ್ಸ್ ತಂಡದ ಬ್ಯಾಟ್ಸ್‌ಮೆನ್ ಪ್ರಸನ್ನ, ಬೆಸ್ಟ್ ಬೌಲರ್ ಆಗಿ ಎಚ್.ಡಿ.ಕೋಟೆ ವನಸಿರಿ ತಂಡದ ಬೌಚರ್ಸ್ ತಂಡದ ರಾಜು ಭಾಜನರಾದರು. ಟೂರ್ನಿಯಲ್ಲಿ ವಿಶೇಷವಾಗಿ ಆಸ್ಟ್ರೇಲಿಯಾದ ಕ್ರಿಕೆಟ್ ಬೋರ್ಡ್‌ನ ಕಾಮೆಂಟೇಟರ್ ಮಿಸ್ಟರ್ ಡೈಮನ್ ಭಾಗವಹಿಸಿ, ಸ್ವಲ್ಪ ಹೊತ್ತು ಕಾಮೆಂಟರಿ ಮಾಡಿ ಕ್ರೀಡಾ ಪ್ರೇಮಿಗಳನ್ನು ರಂಜಿಸಿದರು. ಚನ್ನಕೇಶವ, ಸೋಮಶೇಖರ್, ಕೃಷ್ಣಕುಮಾರ್ ಶಿವಕುಮಾರ್, ಸಿದ್ದೇಶ್, ಶೇಖರ್, ರಾಹುಲ್ ಚೌಗಲಾ, ಶಾಂತರಾಜು, ದೇವೇಂದ್ರ, ಜಗದೀಶ್, ಕೆ.ಎಸ್.ಮಂಜುನಾಥ್ ಮತ್ತು ನಿರಂಜನ್ ಇದ್ದರು.



ಮೈಸೂರು ತಾಲೂಕು ರಮ್ಮನಹಳ್ಳಿ ಗ್ರಾಮದೇವತೆ ಹಬ್ಬದ ಪ್ರಯುಕ್ತ ಆಯೋಜಿಸಲಾಗಿದ್ದ ಕುಸ್ತಿ ಪಂದ್ಯಾವಳಿಗೆ ಕಾಂಗ್ರೆಸ್ ಮುಖಂಡ ಮಾವಿನಹಳ್ಳಿ ಸಿದ್ದೇಗೌಡ ಚಾಲನೆ ನೀಡಿದರು. ಈ ಸಂದರ್ಭ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಬೀರಿಹುಂಡಿ ಬಸವಣ್ಣ, ಮಾದೇಗೌಡ, ಉದ್ಬೂರು ಕೃಷ್ಣ ಹಾಗೂ ಇತರರಿದ್ದರು.

ಬೆಲ್ಲದ ಅಂಗಡಿ ನಾಗಣ್ಣ ನಿಧನ

ನಂಜನಗೂಡು, ಮಾ.15– ಪಟ್ಟಣದ ಬೆಲ್ಲದ ಅಂಗಡಿ ನಾಗಣ್ಣ (71) ಮಂಗಳವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪರಶುರಾಮ ದೇವಸ್ಥಾನ ಹತ್ತಿರವಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಎ.ಮಹದೇವು ರವರು
ಮಾಜಿ ಗ್ರಾ.ಪಂ.ಸದಸ್ಯರು

ಇವರು ದಿ: 07.03.2023 ಮಂಗಳವಾರ ದೈವಾಧೀನರಾಗಿದ್ದು, ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 17.03.2023 ಶುಕ್ರವಾರ ಬೆಳಗ್ಗೆ 10 ಗಂಟೆಗೆ ನಮ್ಮ ಸ್ವಗೃಹ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೆಲ್ಲಹಳ್ಳಿ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಶಾರದ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

3ನೇ ವರ್ಷದ ಪುಣ್ಯಸ್ಮರಣೆ

ಮರೆಯದ ಮಾಣಿಕ್ಯ



ಶ್ರೀಮತಿ ಗೌರಮ್ಮ

ಇಂದಿಗೆ ನೀವು ನಮ್ಮನ್ನಗಲಿ 3 ವರ್ಷ ಕಳೆದರೂ ನಿಮ್ಮ ನೆನಪು ಮಾತ್ರ ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು: ಮಗ ಎಸ್.ರಮೇಶ್, ಮಕ್ಕಳು ಸೊಸೆಯಂದಿರು, ಮೊಮ್ಮಕ್ಕಳು ಕುಟುಂಬ ವರ್ಗದವರು ಹಾಗೂ ಬಂಧುಮಿತ್ರರು.

2ನೇ ವರ್ಷದ ಪುಣ್ಯಸ್ಮರಣೆ



ಶ್ರೀ ನಟರಾಜ್. ಎಸ್

ದುಃಖತಪ್ತರು: ಮೃತರ ಪತ್ನಿ ಲಲಿತಾ, ರಜತ್, ಹರ್ಷಿತಾ, ಸಹೋದರ, ಸಹೋದರಿಯರು, ಸ್ನೇಹಿತರು ಹಾಗೂ ಕುಟುಂಬವರ್ಗ, ಕೆ.ಜಿ. ಕೊಪ್ಪಲು

LEKHANI ENCLAVE

30x50, Muda Approved
Fully Developed. Ready for Construction. 12 kms From Palace. Rs. 1490/sft. 75% loan.
Call 76767 71396

ಹಸಿರು ನಮ್ಮ ಉಸಿರು

DESIGN & BUILD YOUR DREAM HOME WITH ARCADIA

Building Harmony....
CALL: 903-675-3867

100% TEAK WOOD FACTORY MADE DOORS @ DEPOT RATES



10 YEARS WARRANTY
www.ssbuildmart.com
9901291267
9845426862

EXCLUSIVE MENS FESTIVAL COLLECTIONS

HEAVENLYS GENERATIONS
DHANVANTHRI ROAD, MYSURU
PH: +91 821 2422370

51ನೇ ವಿವಾಹ ವಾರ್ಷಿಕೋತ್ಸವ



ಶ್ರೀಮತಿ ಶಿವಮಲ್ಲಮ್ಮ ಶ್ರೀ ಮಹದೇವಯ್ಯ
ಕೂಡ್ಲೂರು ಗ್ರಾಮ, ಕಸಬಾ ಹೋ॥, ಟಿ. ನರಸೀಪುರ ತಾ॥, ಮೈಸೂರು ಜಿಲ್ಲೆ
ಶುಭಕೋರುವವರು: ಮಕ್ಕಳು ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ

ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು - 570010
ದೂರವಾಣಿ (ಕಛೇರಿ): 0821-2446887, 0821-2523828, ಫ್ಯಾಕ್ಸ್ (ಕಛೇರಿ): 0821-2440828

ಸಂಖ್ಯೆ/ಕವಪ್ರಾ/ಮುಕಾನಿ/ಆಡಳಿತ/2022-23 ದಿನಾಂಕ: 14.03.2023

ಪತ್ರಿಕಾ ಪ್ರಕಟಣೆ

ದಿನಾಂಕ: 01.04.2023 ರಿಂದ ಬೇಸಿಗೆ ಮೇಳವನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಬಾಡಿಗೆ ಆಧಾರದ ಮೇರೆಗೆ ನಡೆಸಲು ಉದ್ದೇಶಿಸಲಾಗಿದೆ, ಆದ್ದರಿಂದ ಬೇಸಿಗೆ ಮೇಳ ಆಯೋಜಿಸಲು ಆಸಕ್ತಿ ಉಳ್ಳವರು ದಿನಾಂಕ: 20.03.2023ರೊಳಗೆ ಪ್ರಾಧಿಕಾರದ ಕಛೇರಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ 0821-2444265

ದಿನಾಂಕ: 14.03.2023, ಸ್ಥಳ: ಮೈಸೂರು

ಸಹಿ/–ಮುಖ್ಯ ಕಾರ್ಯನಿರ್ವಾಹಕ ಅಧಿಕಾರ
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ, ಮೈಸೂರು.

IN THE COURT OF V ADDL. I CIVIL JUDGE SR.DIV.AT MYSURU

OS.485/2022
Plaintiffs: Ningachari and others V/S
Defendants: Mohammed Hanif and others

DRAFT PUBLICATION FOR PUBLIC

The Plaintiff has filed the suit against the defendants for the relief of declaration and permanent injunction. The defendants No-1 and 8 are hereby directed to appear before the Hon'ble V Addl.I Civil Judge (Sr.Div) at Mysuru on 28.03.2023 Failing which the matter will be heard and proceed in accordance with law.

D-1. Mohammed Hanif, S/o Late. Usman Shariff aged about 32 years, Mellahalli, Varuna Hobli, Mysore Taluk

D-8. Vasanthamma, W/o Nagaraj, D/o Late. Siddachari, Aged about 34 years, R/at, Sollepura, Mysuru

.........Defendants No-1 and 8

Given under my hand and the seal of the Court, this 28th day of February 2023

By order of the Court
Sd/- Chief Ministerial Officer, Court of Senior Civil Judge & CJM, Mysuru

Advocate for petitioners,
Sri Rao Law Associates, J.K. Sheshagiri Rao, B.sc, LLB , Advocate, Mysore

HOUSE FOR LEASE

22X34, 2 BHK, 1ST FLOOR HOUSE WITH SOLAR IS FOR LEASE AT R S NAIDU NAGAR, MYSORE
Price: 10 Lakhs
Call : 78711 00111

Nc Sky Villas

30x40, 3 BHK Duplex
Bogadhi Road, Concrete Road. Gated Community. RERA Approved. Rs. 58.75 Lakh.
Call 90714 01234

SITES FOR SALE

30x40, 30x50, 40x60
Near Infosys, Muda Approved, Fully Developed

RIVER VIEW LAYOUT
45x60, Rs.1400/sft
12 Kms from Bus Stand with Club House, Beautiful Location
Call : 90714 01234

BLOOMING BUDS MONTESSORI HOUSE OF CHILDREN

#2856, 9th Cross, Behind ICICI Bank, Kalidasa Road, V.V.Mohalla, Mysuru

is Conducting Teachers Training Course in Montessori Method

Practical oriented, Certification Teacher's Training Course will be Conducted for the Candidates having Minimum Qualification of PUC and having Good Knowledge of English.

COURSE DURATION- 3-April-2023 to 31-May-2023 (2 Months)

For Details and Registration Contact: 93438 85578, 98861 81294

ಹೋಟೆಲ್ ಮಯೂರ ಕಾವೇರಿ

KSTDC — Karnataka One state. Many worlds. Department of Tourism
ಬೃಂದಾವನ ಗಾರ್ಡನ್, ಕೆ.ಆರ್.ಸಾಗರ, ಮಂಡ್ಯ ಜಿಲ್ಲೆ
Hotel Mayura Cauvery
Brindavana Garden,Krishnaraja Sagara, Mandya Dist.
Unit of the Karnataka State Tourism Development Corporation Ltd.
Tel: 08236-297189, Email:krs@karnatakaholidays.net

Ref: KSTDC/HMC/KRS/258/2022-23 Date: 15.03.2023

ಪ್ರಕಟಣೆ

ಕೆ.ಆರ್.ಸಾಗರ ಬೃಂದಾವನದ ಒಳಭಾಗದಲ್ಲಿರುವ ಮಳಿಗೆಗಳನ್ನು ಖಾಸಗಿಯವರಿಗೆ ನಿಗಮದ ಲಾಂಛನದಡಿಯಲ್ಲಿ ಬಾಡಿಗೆ ಆಧಾರದ ಮೇಲೆ ನಡೆಸಲು ದಿನಾಂಕ: 05.03.2023 ರಂದು ಬಹಿರಂಗ ಹರಾಜು ಮೂಲಕ ನೀಡಲು ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಕಾರಣಾಂತರಗಳಿಂದ ಸದರಿ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಮುಂದೂಡಲಾಗಿದೆ

ಸಹಿ/–ವ್ಯವಸ್ಥಾಪಕರು

ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು

ದಿನಾಂಕ: 10.03.2023

ಸಂದರ್ಶನ

ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು, ಇಲ್ಲಿ ಗುತ್ತಿಗೆ ಆಧಾರದಲ್ಲಿ ಪಶು ಸಹಾಯಕರಾಗಿ ಕೆಲಸ ನಿರ್ವಹಿಸಲು Diploma in Animal Husbandry ವಿಷಯದಲ್ಲಿ ವಿದ್ಯಾರ್ಹತೆಯುಳ್ಳ, 28 ವರ್ಷ ವಯೋಮಿತಿ ಒಳಗಿನ ಒಬ್ಬರನ್ನು ತಾತ್ಕಾಲಿಕವಾಗಿ ಆರು ತಿಂಗಳ ಅವಧಿಗೆ ಮಾಸಿಕ ಕ್ರೋಢೀಕೃತ ವೇತನ ರೂ.20,000/–ಗಳಿಗೆ ನೇಮಕ ಮಾಡಿಕೊಳ್ಳಲು ಇಚ್ಚಿಸಲಾಗಿದೆ. ಅನುಭವಸ್ಥ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳು ದಿ: 20.03.2023 ರಂದು ಬೆಳಿಗ್ಗೆ 11.00 ಘಂಟೆಗೆ ಕೆಳ ಸಹಿದಾರರ ಕಛೇರಿ ಕೊಠಡಿಯಲ್ಲಿ ಮೂಲ ದಾಖಲಾತಿಗಳು ಹಾಗೂ ದೃಢೀಕೃತ ನಕಲು ಪ್ರತಿಯೊಂದಿಗೆ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

DIPR/DDMYS/KSMCA/1184/2022-23

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕೇಂದ್ರೀಯ ವಿದ್ಯಾಲಯ ಮೈಸೂರು, ಜಿ.ಐ.ಟಿ.ಬಿ. ಪ್ರೆಸ್ ಕ್ಯಾಂಪಸ್, ಸಿದ್ಧಾರ್ಥನಗರ, ಮೈಸೂರು– ೫೭೦ ೦೧೧

केन्द्रीय विद्यालय मैसूरु, जी.आई.टी.बी.प्रेस कैंपस, सिद्धार्थनगर, मैसूरु-५७००११
KENDRIYA VIDYALAYA, MYSURU, GITB, PRESS CAMPUS, SIDDHARTHNAGAR, MYSURU-570011
Web site: https://mysore.kvs.ac.inEmail-kvmysore@gmail.com Phone:080-2473515

ನೇರಸಂದರ್ಶನ

ಕೇಂದ್ರೀಯ ವಿದ್ಯಾಲಯ, ಮೈಸೂರು. ಜಿ.ಐ.ಟಿ.ಬಿಪ್ರೆಸ್ ಕ್ಯಾಂಪಸ್, ಸಿದ್ಧಾರ್ಥನಗರ. ಮೈಸೂರು – 570011


ನೇರ ಸಂದರ್ಶನ:18.03.2023ರಂದುವಿದ್ಯಾಲಯ ಆವರಣದಲ್ಲಿ2023–2024ರ ಅವಧಿಗೆ ಒಪ್ಪಂದದ ಆಧಾರದ ಮೇಲೆ ಸಮಿತಿಯನ್ನು ತಯಾರಿಸಲು ವಿವಿಧ ಹುದ್ದೆಗಳಿಗೆ 18.03.2023 ರಂದು ಕೇಂದ್ರೀಯ ವಿದ್ಯಾಲಯ, ಮೈಸೂರಿನಲ್ಲಿ ನೇರ ಸಂದರ್ಶನಕ್ಕಾಗಿಕರೆಯಲಾಗಿದೆ. ಅರ್ಹ ಅಭ್ಯರ್ಥಿಗಳು ತಮ್ಮ ಪ್ರಮಾಣಪತ್ರಗಳೊಂದಿಗೆ ದಿನಾಂಕ 18.03.2023 ರಂದು ಖುದ್ದು ಹಾಜರಾಗಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.

ನೋಂದಣಿ ಸಮಯ – 8:30AM to 10:00AM.

ದಿನಾಂಕ ಮತ್ತು ಸಮಯ	ಹುದ್ದೆ ಮತ್ತು ವಿಷಯ
18.03.2023 ನೋಂದಣಿ ಸಮಯ 8:30am to 10:00am	ಹುದ್ದೆ: ಪಿಜಿಟಿ– ಹಿಂದಿ ಟಿಜಿಟಿ: ಇಂಗ್ಲಿಷ್, ಹಿಂದಿ, ಸಂಸ್ಕೃತ
	ಹುದ್ದೆ: ಪ್ರಾಥಮಿಕ ಶಿಕ್ಷಕರು ಇತರೆ ಪೋಸ್ಟ್‌ಗಳು: TGT–ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (AI).
	ಇತರೆ ಹುದ್ದೆಗಳು: ವೈದ್ಯರು, ಸಲಹೆಗಾರರು (ಮಹಿಳೆ), ಕ್ರೀಡಾ ಕೋಚ್ (ಮಹಿಳೆ).
ಸೂಚನೆ:	1. ಅಭ್ಯರ್ಥಿಗಳು ಸರಿಯಾಗಿ ಭರ್ತಿ ಮಾಡಿದ ಅರ್ಜಿ ನಮೂನೆ, ವಿದ್ಯಾರ್ಹತೆಯ ಮೂಲ ಪ್ರಮಾಣ ಪತ್ರಗಳ ಒಂದು ಸೆಟ್ ಸ್ವಯಂ ದೃಢೀಕರಿಸಿದ ಪ್ರಮಾಣಪತ್ರ ಮತ್ತು 2 (ಎರಡು) ಪಾಸ್‌ಪೋರ್ಟ್ ಅಳತೆಯ ಛಾಯಾಚಿತ್ರಗಳೊಂದಿಗೆ ನೋಂದಣಿಗಾಗಿ ವರದಿ ಮಾಡಬೇಕು. 2. ಸಂದರ್ಶನಕ್ಕೆ ಯಾವುದೇ ಟಿಎ/ಡಿಎ ನೀಡಲಾಗುವುದಿಲ್ಲ. 3. ಅರ್ಜಿ ನಮೂನೆಯ ಅರ್ಹತಾ ಮಾನದಂಡಗಳು, ಕನಿಷ್ಠ ವಿದ್ಯಾರ್ಹತೆ, ವೇತನ ಇತ್ಯಾದಿಗಳನ್ನು ಡೌನ್‌ಲೋಡ್ ಮಾಡಲು ದಯವಿಟ್ಟು ವೆಬ್‌ಸೈಟ್‌ಗೆ ಭೇಟಿ ನೀಡಿ https://mysore.kvs.ac.in/
	ಅರ್ಹತೆ ಮತ್ತು ಸಂಭಾವನೆಯ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ವಿದ್ಯಾಲಯ ವೆಬ್‌ಸೈಟ್ ಅನ್ನು ನೋಡಿ.

ಪ್ರಾಂಶುಪಾಲರು

ಬೆಂಗಳೂರು–ಮೈಸೂರು ದಶಪಥ ಯೋಜನೆಯನ್ನು ಹಲವು ಅಡೆತಡೆಗಳ ಮಧ್ಯೆಯೂ ಅತ್ಯಂತ ಆಸ್ಥೆಯಿಂದ ಮುತುವರ್ಜಿವಹಿಸಿ ಪೂರ್ಣಗೊಳಿಸಿ ಲೋಕಾರ್ಪಣೆಗೊಳ್ಳುವಲ್ಲಿ ಸಂಸದರ ಪಾತ್ರ ಶ್ಲಾಘನೀಯ. "ರಾಷ್ಟ್ರೀಯ ಹೆದ್ದಾರಿ ರಾಷ್ಟ್ರದ ಪ್ರಗತಿಗೆ ರಹದಾರಿ." ಮೈಸೂರನ್ನು ಸಕಲ ರೀತಿಯಲ್ಲೂ ಅಭಿವೃದ್ಧಿಯ ಪಥದತ್ತ ಕೊಂಡೊಯ್ಯಲು ಶ್ರಮಿಸುತ್ತಿರುವ ನಮ್ಮ ಹೆಮ್ಮೆಯ ಸಂಸದರಾದ ಶ್ರೀ ಪ್ರತಾಪ್ ಸಿಂಹ ರವರಿಗೆ ಅಭಿನಂದನೆಗಳು ಹಾಗೂ ಧನ್ಯವಾದಗಳು.



















ಕೆಲಸಗಳು ಉಳಿಯುತ್ತವೆ ಟೀಕೆಗಳು ಅಳಿಯುತ್ತವೆ

ಶುಭಕೋರುವವರು : ನಮೋ ಬ್ರಿಗೇಡ್ ಮೈಸೂರು



ಎ.ಎಸ್. ಅನಿಲ್‌ಕುಮಾರ್ | ಎಂ.ಎಲ್. ಹರ್ಷ | ಕಿರಣ್ ಜೈರಾಮ್ ಗೌಡ | ಶಿವಪ್ರಸಾದ್ ಹೆಚ್. ಎಸ್ | ಕೆ. ಗೋಕುಲ್ ಗೋವರ್ಧನ್ | ಯಶವಂತ್ ಕುಮಾರ್.ಎಂ.ಜಿ | ಸಂತೋಷ್ ಕುಮಾರ್. ಜಿ. ಎಮ್ | ಪ್ರಣಯ್ ಹೆಚ್.ಎಂ. | ಪ್ರಸನ್ನ ಕುಮಾರ್ ಎನ್ ಎಸ್ | ಬಾಲಕೃಷ್ಣ ಕಿಣಿ

ರಾಜಣ್ಣ, ಹರೀಶ್, ಅನಂತಕೃಷ್ಣ, ಬ್ರಹ್ಮಾಚಾರ್, ಆನಂದ್, ಸಂತೋಷ್‌ಜಿ, ಅಭಿರಾಮ್, ತೇಜಸ್, ವಿನೋದ್, ವಸಂತ್, ಸುಧೀರ್‌ಜೈನ್, ಸ್ವರೂಪ್, ಪ್ರಸನ್ನ ರಾಜಗುರು, ನಿಶ್ಚಿತ್, ಅಭಿನಂದನ್, ಗುರುಪ್ರಸಾದ್, ಧರ್ಮರಾಜು, ಚನ್ನಬಸಪ್ಪ, ಬಸವರಾಜು, ಅನಿಲ್‌ರಾಮ್, ಚೇತನ್ ಹಾಗೂ ಮಹೇಶ್‌ಕುಮಾರ್